- Organized "**Ek Din NCC Army Ke Naam**" programme on 9th October, 2022, in Geethanjali Hall, M.G.M. College, Udupi. The Chief Guest of the programme was Retired Lt. Commander Geethalakshmi P. M., Dept. of Humanities & amp; Management, M.I.T., Manipal. Carried

on the piping ceremony and felicitated the achievers.

- Organized Special talk by Ex-cadets on 29th Oct., 2022 at M.G.M. College.
- Celebrated NCC Day on 27th Nov., 2022 at Krishnanugraha "Children Fit Institute and Adoption Centre", Santhekatte, Udupi.
- Organized Armed Drill Training on 12th Dec., 2022 at M.G.M. College.
- Organized Firing Training on 13th Dec., 2022 at M.G.M. College.
- Organized **Weapon Training Class** on 11th Jan., 2023 at M.G.M. College.
- Celebrated **Indian Army day** on 15th January 2023 at M.G.M. College, Udupi.
- Cadets participated in Yogathon on 15th Jan., 2023 at MAHE Ground, Manipal.
- Celebrated Republic Day 2023. Chief Guest of the programme was Lt. Col. Anand A. Shirali, 20th Rajputana rifles regiment, Indian Army.

Social Activities:

- Organized Blood donation camp on 11th Jan., 2023 at M.G.M. College, Manipal. Cadets have participated in online pledge taking ceremony on "**Say yes to Life, No to Drugs**" on June 26th 2022.
- Organized extension activity – **Tree Plantation at Krishnanugraha** on 27th Nov., 2022.
- Organized extension activity – Puneet Sagar Abhiyan at Malpe Beach in association with 21 KAR BN NCC, Udupi on 23rd Nov., 2022.
- Organized extension activity – Puneet Sagar Abhiyan at Sita Nadi, Barkur in association with 21 KAR BN NCC, Udupi on 18th March, 2023.
- Organized World Earth Day by taking pledge at M.G.M. College, Udupi on 17th April, 2023.

Adventure Activities:

NCC Army organized One-Day trekking camp to Kudremukh on 24th Dec., 2022.

NCC Naval Wing Annual Report:

National Achievers of M.G.M. Naval Wing NCC 2022 – 2023

- P.O. Cdt. Pavan Kumar attended Ship attachment camp at Western Naval Command, Mumbai, India.
- P.O. Cdt. Dhanya Kunder attended All India Nau Sainik camp at INS Circars, Eastern Naval command, Vishakapatnam, India.
- Leading. Cdt. B. Shrikar Aital attended All India Nau Sainik camp at INS Circars, Eastern naval command, Vishakapatnam, India.
- P.O. Cdt. Prathiksha Kunder attended All India Yachting Regatta camp at INS Chilka, Odissa, India.
- L. Cdt. Mehek Fathima Sheikh attended **Independence Day Camp at Delhi**, India.

Activities:

- Some of the major activities that were conducted by M.G.M. Naval Wing NCC this year were, World Earth day, Puneeth Sagar Abhyan, World Environment Day, World Yoga Day and adventure activities like Trekking, Boat Pulling and lot more.
- Best Cadet award of this year M.G.M. Naval Wing NCC is given to P.O. Cdt. Pavan Kumar who attended ship attachment camp at Western Naval Command Mumbai and Best Passing Out Cadet award is given to Cadet Captain Ravishankar Poojary who attended Sea attachment camp at INS magar at Southern Naval Command, Kochi, India.

Eco Club has conducted the following activities:

- Eco Club in association with Department of Zoology participated in a beach cleaning drive organized by Centre for Marine Living Resources and Ecology, Kochi, Ministry of Earth Science on the theme "**Swachh Sagar Surakshit Sagar**" in the sea walk region at Malpe on 17th September, 2022. It was a national

programme on the World Ocean Day where 75 beaches in India were cleaned at the same time.

- A Workshop was organized by Department of Zoology and Eco Club on the topic **'Snake Bite Awareness'** on 29th October, 2022. The guest speakers were Dr. Preston Mare Sirur, Dr. Vrinda Lath and Dr. Ketaki Chowkhani. Dr. Preston Mare Sirur and Dr. Vrinda Lath explained about various poisonous snakes and first aid for snake bite. Dr. Ketaki, spoke about human interaction with snakes.
- Department of Zoology and Eco Club in association with IQAC organized a plantation drive for **Butterfly Park in the College campus**. Mr. Sammilan Shetty, Curator and Mr. Tejasvi Acharya, member of the MBAC Trust gave the guidance and support.
- Department of Zoology, Eco Club, Youth Red Cross in association with IQAC conducted a **programme on self-defence** on 3rd December, 2022. Ms. Roshni, 2nd Dan Black Belt, Instructor, Budokan Karate and self-defence and 2nd B.Sc. ZC student of M.G.M. College along with Mr. Anuroop, Karate instructor, Kubudo budokan international and 3rd B.Sc. BZC Students were the resource persons
- Department of Zoology, Eco Club, Science Club and IQAC in collaboration with Lions Club, Udupi Lakshya organized an awareness **talk on E-Waste Management** on 25th January, 2023. Mr. Raviraj Nayak, Immediate Past President, Lions Club Udupi Lakshya was the resource person and donated an e-waste bin to the college.
- A Session of Birding was conducted at Uppoor Wetland on 2nd February, 2023 by Department of Zoology, Eco Club and IQAC in collaboration with Manipal Birders and Conservation Trust in connection with World Wetland Day.
- Department of Zoology and Eco Club organized a programme of **Water Pot Installation** on 21st March, 2023. About 65 water pots were kept in and around the campus for the birds in summer.
- Department of Zoology, Eco Club and Science Club in association with IQAC organized a **Talk on Cyber Security** on 19th May, 2023. Mr. Dinakar Choudhary, Cyber Security Consultant, Airtel Payment Banks was the speaker.

The following are the activities conducted by National Service Scheme during this academic year:

- An event named **"Ninna Yeligege Neene Shilpi**" was organized in the college for the students followed by an interactive session with Mrs. Nemichandra.
- On 26th Nov., 2022 **"Kere Cleaning"**, an initiative to clean the water body was conducted in Shettibettu, Udupi.
- On 3rd December, 2022 College Campus Cleaning was conducted where in all the NSS volunteers were involved in cleaning the entire college campus.
- NSS Volunteers involved themselves in an **Anti-Drug Rally, "Nasha Muktha Abhiyana"** held in Women's College Ajjarkad in December, 2022.
- A fun filled interactive session **"A Noon with Well-Known"** was held on 17th December, 2022 in our college campus. Chief Guest and speaker of the programme was Vijay Sir (Former Principal of M.G.M. College).
- Been a part of a programme involving Job fair and talents show for physically challenged people held in Rajangana, Udupi on 29th December, 2022.
- An annual camp for a period of 7 days was organized in Hirgana, Karkala. About 100 NSS volunteers enrolled themselves in this annual camp.

The following activities were conducted by **Kasturba Rangers Unit and Mahatma Gandhi Rovers Unit**, M.G.M. College, Udupi:

- Students participated in various programmes organised in the College like **Agnipath Daud** and **Koti Kanta Gayana** at Ajjarkad, Campus Cleaning at College, Blood Donation Camp.
- A Programme **'Ninna Yeligege Nine Shilpi'** was organised in collaboration with Department of Journalism on 12th November, 2022.
- **Dattu Grama Inauguration** was held on 26th November, 2022.
- Felicitation to Rajya Puraskar awardee Mr. Jeevan Shetty was conducted on 26th November, 2022.
- Toy bank Inauguration was held in collaboration with Students' Welfare Council on 3rd December, 2022.
- Orientation by Suchith Kotian on the topic **'True Volunteer'** was organised on 16th December, 2022.
- Our students participated in **International Cultural Programme Jamboree** held at Moodbidre from 21st to 27th December, 2022.
- Annual Camp was held from 7th to 9th April, 2023 at Padukuduru, Hebri.

The following are the activities conducted by Youth Red Cross during this academic year:

- Youth Red Cross unit organised **National Integration Oath Taking** programme on 19th January, 2023.
- **International Human Rights Day** was organised on 10th December, 2022 in association with the Department of History. Prof. K. Surendranath Shetty was the resource person.
- On the completion of the silver jubilee of the establishment of Udupi District under the ambitious guidance of the central government, **Agnipath Run** was organised on 25th August, 2022 to create awareness about the Agnipath scheme.
- YRC joined hands with the Department of Zoology in organising a workshop on Self Defence on 3rd December, 2022. Mr. Anuroop Kumar B., 2nd Dan Black Belt and Roshni R. K., 2nd Dan Black Belt were the instructors.
- **Plastic-free Beach Clean Drive** was organised from 27th December, 2022 to 1st January, 2023 at Malpe beach.
- Youth Red Cross Unit of our college organised **Blood donation camp** on 11th January, 2023 at Nutana Ravindra Mantapa in association with Blood Bank, KMC, Manipal. 189 Students enrolled their names and **119 Units of blood was collected**.
- Youth Red Cross in association with IQAC and Students' Welfare Council under Swami Vivekananda Chintana Vedike organised Swami Vivekananda Jayanthi and National Youth Day on 12th January, 2023.
- Youth Red Cross organised a programme on the topic **'Would You Like to Serve the Country as a Part of Civil Defence'** on 24th April, 2023.

Yakshagana and Nataka Ranga:

- Yakshagana demonstration was organized in association with Yakshagana Trust, Bangalore on 15th December, 2022.
- **'Muktha'** – A short film directed by Ms. Medhini Kelamane was screened on 9th January, 2023 and it was followed by interaction with the director.
- Dr. G. L. Hegade Ex-President of Yakshagana Academy of Karnataka inaugurated a certificate course on Yakshagana was inaugurated by Dr. G. L. Hegade, Ex-President of Yakshagana Academy of Karnataka on 27th January, 2023. Students of Yakshagana certificate course performed the theme 'Panchavati-Jatayu Moksha' before the NAAC Peer Team on 30th March, 2023.
- Yakshagana students performed on the theme **'Shashiprabha Parinaya'** on 25th of May, 2023 on account of Founders Day Celebration.

Swami Vivekananda Chintana Vedike: Celebrated National Youth Day in association with SWC on 12th January, 2023.

The following activities were conducted by the Science Club during this academic year:

- In association with Department of Mathematics arranged a Special Talk was organised on the topic **'What After B.Sc.?'** by Mr. Rakesh, Assistant Professor, Department of Mathematics, Poorna Prajna College, Udupi on 29th October, 2022.
- A Guest lecture on **Mental Health** was organized on 5th November, 2022. Dr. Vani Ballal, HOD of Psychology, Dr. G. Shankar Government Women's First Grade College, Ajjarkad, Udupi was the resource person.
- A Special talk on **"Awareness of Common Cancers in Women"** was arranged for science club student on 28th November, 2022. Dr. Prashant Pareet, Programme Manager, Cancer Care, Karkinos Healthcare, KLE University, Udupi was the resource person.
- An Orientation programme on **Cancer Awareness** was organized on 3rd December, 2022 by Dr. Tanmaye, Karkinos Healthcare, KLE University, Udupi.
- An awareness programme on **E-waste Management** was organized in collaboration with Lion's Club, Udupi Lakshya on 3rd December, 2022. Raviraj Nayak, Immediate Past President of Lion's Club, Udupi Lakshya was the resource person.

The following are the activities conducted by the **Commerce Club:**

- Commerce Club joined hands with Youth Red Cross Unit in Blood Donation Camp held on 11th January, 2023 and Commerce Club students donated the blood.
- Commerce Club organised **PAN Card and Passport mela** for the students of all the streams on 23rd and 24th January, 2023.
- Commerce Club organised **Vendor exhibition** cum Sale Programme in association with MSME Mangalore and Udupi Chamber of Commerce on March 7th and 8th March, 2023. Around 75 stalls visited the campus.
- **Cleanliness drive** was organised on 26th March 2023, SWC had organized a Campus Cleaning Programme in association with NCC Army Unit, NCC Naval Unit, NSS Unit, Rangers and Rovers Unit, Economics Club and Commerce Club.
- Commerce Club organised **Personality Development Programme** which included interview skills and crafting resumes on 17th May, 2023.

COUNSELLING CELL

- Mrs. Rekha N. Chandra, Asst. Prof., Dept. of Computer Science and Mrs. Jyotsna, Asst. Prof., Dept. of Economics attended Life Skills training held at NIMHANS, Bangalore from 19th to 25th February, 2023.
- A Talk on Critical Thinking was organized by Mrs. Rekha N. Chandra for our college students on 16th March, 2023.

SPORTS CLUB:

Annual Athletic Meet 2022-23 was organized by Physical Education Dept., in association with SWC. It was inaugurated by Sri Pramod Kumar P., Police Inspector, Coastal Security Force, Udupi on 7th January, 2023. Individual Championship was shared by Shraddha, I B.Sc. and Shravya, III B.Com. under Women Section and Sowrish, III B.Com. and Prayag Shetty, II B.Com. under men section.

PLACEMENT CELL:

Total number of Placements: **151** Companies which visited the campus are: Infosys, TCS, Mind Tree, Wipro, Deloitte, L&T, Ultra Tech Cement, Kotak Life, Almasons, Ace Micromatic, U Web Solutions, Code Craft, SLP etc. Few more companies had scheduled the visits to the campus in the upcoming days.

STUDENTS' ACHIEVEMENTS

RANK HOLDERS

Two students of our college secured ranks in the Degree Semester examinations of Mangalore University in the academic year 2021-22. They are :

Pooja R – B.C.A. 3rd Rank

Chinmayi – B.A. 10th Rank

Prathiksha Shenoy, B.A. bagged a Gold Medal for securing highest marks in optional subjects.

One of the proudest moment for the entire M.G.M. Family was when our NSS volunteer Ms. Vasupradha of II B.Com. participated in the NATIONAL REPUBLIC DAY PARADE 2023, held in Delhi.

The following are the achievements of the students of M.G.M. in the field of SPORTS during this academic year:

Ms. Shradha of I B.C.A.

- Bagged the First prize in 200 m race and 4 x 100 m relay in the **Taluk Level Dasara Sports.**

Sports held in Udupi on 3rd September, 2022

- Also Secured Third place in 200 mts run in the Karnataka State U-18 y. **U-20 Junior Athletic Meet-2023** held on 18th and 19th February, 2023 at Kanteerava Stadium, Bangalore.
- Second place in 4 x 100 m relay and 4 x 400 m relay respectively in the Mysore **Divisional level Dasara Sports** held at Mangalore on 18.09.2022.

Mr. Prayag Shetty, II B.Com.

- Bagged First place in 4 x 100 m relay.
- Third place in 1500 m in the **State Level Athletic meet** held at Bangalore on 28th and 29th January, 2023.
- First place in 10 K Manipal Marathon held at MAHE, Manipal on 12th February, 2023.

Ms. Rakshitha Shetty of I B.C.A.

Represented the Mangalore University **Badminton team** in the **South Zone.**

Participated in Badminton Tournament held at Jain University, Bangalore from 21st to 24th November, 2022.

Secured Gold Medal in **State Open Badminton Tournament** held on 29th at Ajjarkad, Udupi.

Bagged Bronze Medal in **All India Junior Open National Level Badminton Tournament** held at Mangalore on 7th and 8th January, 2023.

Ms. Nisarga N., II B.C.A. secured Gold Medal in Karate, Kumitte, 61 kg senior category in the 13th **State Level Karate Championship 2022** held on 5th and 6th November, 2022 at Bangalore.

Ms. Meghana M. Mendon, Manvitha, I B.Com. represented the Mangalore University Table Tennis Team in the **South Zone Badminton Tournament** held at Jain University, Bangalore from 14.11.2022 to 16.11.2022.

Our College Table Tennis team for Women won the Mangalore University Inter-Collegiate Table Tennis Tournament held at St. Aloysius College, Mangalore on 15th May, 2023.

Shailesh, Hitesh and Tejas participated in Table Tennis Men and secured 4th place in **Mangalore University Inter-Collegiate Table Tennis Tournament** held in St. Aloysius College, Mangalore.

Our college Women's Throwball team participated in Inter-Collegiate Throwball Event held in IMJ Institute of Science and Technology, Kundapur on 17th May, 2023.

During the academic year 2022-2023 students of M.G.M. participated in numerous **Inter-Collegiate events** and bagged prizes under various categories and events.

Here, is a brief report of the students' achievements in Inter-Collegiate events, seminars and Conferences.

- B.Sc. students of our college attended a National Level Inter-Collegiate Chemistry fest ANALYST held at St. Aloysius College, Mangalore on 25th April, 2023. Manasvitha and Kalpitha of III B.Sc. MPC won the first place in Collage competition.
- Our students attended the Chemistry fest

CHEM-SPECTRUM 2023 held at Dr. Shanker Govt. Womens First Grade College, Ajjarkad, Udupi.
Om Rithumbara won a place in the Lab event. Juwariya and Lirisha bagged a place in Quiz competition.

- Students attended a Commerce and Management Fest "**LAKSHYA**" held in Govind Das College, Suratkal on 20th January, 2023.
- Ananya Pai and Dhanush Jain won 1st Prize in Finance Competition.
- Bhoomika and Chirath Hegde won 1st Prize in Marketing Event.
- Runners in Variety Event of Overall Championship was bagged by MGMites in LAKSHYA 2023.
- The students of M.G.M. participated in **N-IGMA 2023** a cultural and literary fest held in Nitte.
  1. Manisha Pai and Anagha Hegde won the second prize in Mehendi event.
  2. Students Won the runners up championship in Western Group Dance.
- The students of M.G.M. participated in cultural fest **INCREDIA 2023**.
  - o Winners in Eastern Group Dance competition
  - o Runners in Western Dance competition.
  - o The Overall Championship was bagged by MGMites in INCREDIA 2023.

I would like to express my heartfelt gratitude to our beloved Principal, Prof. Laxminarayana Karanth, Student Welfare Officer Prof. Ramesh Karla and all the teaching and non-teaching staff for their valuable guidance and support. A Sincere thanks to all the students for their support throughout the year.

Thank you.

ಕನ್ನಡ ವಿಭಾಗ

ಕಲಶೇಶ್ವರ ಸ್ವಾಮಿ ದೇವಾಲಯ

✍ **ಪೂರ್ಣಿಮಾ ಆರ್. ನಾವಡ,** ದ್ವಿತೀಯ ಬಿ.ಕಾಂ.

ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿಯನ್ನು ಪಡೆದಿರುವ ಕಲಶೇಶ್ವರ ಸ್ವಾಮಿ ದೇವಾಲಯವು ಚಿಕ್ಕಮಗಳೂರಿನ ಪವಿತ್ರ ಕ್ಷೇತ್ರಗಳಲ್ಲಿ ಒಂದಾಗಿದೆ.

ಕಳಸ ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಸಣ್ಣ ಪಟ್ಟಣವಾಗಿದೆ. ರಮಣೀಯ ಪಶ್ಚಿಮ ಘಟ್ಟಗಳಿಂದ ಸುತ್ತುವರೆದಿರುವ ಇದು ಕರ್ನಾಟಕದಲ್ಲಿನ ಜನಪ್ರಿಯ ಪವಿತ್ರ ಕ್ಷೇತ್ರಗಳಲ್ಲಿ ಒಂದಾಗಿದೆ. ಈ ದೇವಾಲಯಕ್ಕೆ ಲಕ್ಷಾಂತರ ಭಕ್ತರು ಭೇಟಿ ನೀಡುತ್ತಾರೆ.

ಭದ್ರಾ ನದಿಯ ದಡದಲ್ಲಿರುವ ಕಳಸವು ಶಿವನಿಗೆ ಸಮರ್ಪಿತವಾದ ಕಲಶೇಶ್ವರ ಸ್ವಾಮಿ ದೇವಾಲಯಕ್ಕೆ ನೆಲೆಯಾಗಿದೆ. ದಂತ ಕಥೆಯ ಪ್ರಕಾರ ಹಿಮಾಲಯದಲ್ಲಿ ಶಿವ ಮತ್ತು ಪಾರ್ವತಿಯ ವಿವಾಹ ಸಮಯದಲ್ಲಿ ಇಡೀ ದೇವತೆಗಳ ಉಪಸ್ಥಿತಿಯು ಭೂಮಿಯ ಚಲನೆಯಲ್ಲಿ ಬದಲಾವಣೆಯನ್ನು ಉಂಟುಮಾಡಿತು. ಭಗವಾನ್ ಶಿವನು ಮಹಾನ್ ಋಷಿ ಅಗಸ್ತ್ಯನನ್ನು ದಕ್ಷಿಣಕ್ಕೆ ಪ್ರಯಾಣಿಸಲು ಮತ್ತು ಭೂಮಿಯ ಚಲನೆಯನ್ನು ಸಮತೋಲನಗೊಳಿಸಲು ವಿನಂತಿಸಿದನು. ಕಳಸವು ಶಿವ ಮತ್ತು ಪಾರ್ವತಿಯ ವಿವಾಹದ ಸಮಯದಲ್ಲಿ ಅಗಸ್ತ್ಯ ಋಷಿ ನೆಲೆಸಿದ್ದ ಸ್ಥಳವೆಂದು ನಂಬಲಾಗಿದೆ.

ದೇವಾಲಯದ ವಾಸ್ತುಶಿಲ್ಪ :

ಈ ದೇವಸ್ಥಾನವು ಬೆಟ್ಟದ ಮೇಲೆ ನೆಲೆಗೊಂಡಿದೆ ಮತ್ತು ಅದರ ವಿನ್ಯಾಸವನ್ನು ಹೊಯ್ಸಳ ಶಿಲ್ಪ ಶೈಲಿಯಲ್ಲಿ ನಿರ್ಮಿಸಲಾಗಿದೆ. ದೇವಸ್ಥಾನದಲ್ಲಿ ಪ್ರತಿದಿನ ಯಾತ್ರಾರ್ಥಿಗಳಿಗೆ ದರ್ಶನ ಇದ್ದೇ ಇರುತ್ತದೆ. ಗಿರಿಜಾ ಕಲ್ಯಾಣವು ಕಳಸದಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಇದು ವಿಜೃಂಭಣೆಯಿಂದ ಆಚರಿಸಲಾಗುವ ಕಳಸದ ದೊಡ್ಡ ಹಬ್ಬಗಳಲ್ಲಿ ಒಂದು. ಇದು ಅಮಾವಾಸ್ಯೆಯಿಂದ ಪ್ರಾರಂಭವಾಗಿ ಹುಣ್ಣಿಮೆಗೆ ಮುಕ್ತಾಯವಾಗುತ್ತದೆ. ಇಲ್ಲಿ ಆಚರಿಸುವ ಮತ್ತೊಂದು ಹಬ್ಬವೆಂದರೆ ಶಿವರಾತ್ರಿ. ಕಳಸವು ಐದು ಪವಿತ್ರ ಜಲಮೂಲಗಳು ಅಥವಾ ಪಂಚತೀರ್ಥಗಳಿಗೆ ಹೆಸರುವಾಸಿಯಾಗಿದೆ:

1. ವಸಿಷ್ಠ ತೀರ್ಥ
2. ನಾಗ ತೀರ್ಥ
3. ಕೋಟಿ ತೀರ್ಥ
4. ರುದ್ರ ತೀರ್ಥ
5. ಅಂಬಾ ತೀರ್ಥ

ಎಂಬುವುದಾಗಿ. ಈ ಪ್ರತಿಯೊಂದು ತಾಣಗಳಲ್ಲಿ ಪುರಾಣ ದಲ್ಲಿನ ಘಟನೆಗಳ ಜೊತೆಗೆ ಸಂಬಂಧ ಹೊಂದಿವೆ.

ಇತಿಹಾಸ:

ಕಳಸ ಪಟ್ಟಣವು ಭದ್ರಾ ನದಿಯ ದಡದಲ್ಲಿ ಇರುವ ಪವಿತ್ರ ಕ್ಷೇತ್ರ. ಈ ಸ್ಥಳವು ಸ್ಕಂದ ಪುರಾಣದೊಂದಿಗೆ ಸಂಬಂಧವನ್ನು ಹೊಂದಿದೆ ಎಂದು ನಂಬಲಾಗಿದೆ. ಕಾಶಿಯಲ್ಲಿ ಪಾರ್ವತಿ–ಪರಮೇಶ್ವರ ವಿವಾಹ ನಡೆಯುವ ಸಂದರ್ಭದಲ್ಲಿ ಸೃಷ್ಟಿಯಲ್ಲಿ ಕೆಲವೊಂದು ಬದಲಾವಣೆಗಳಾಗತೊಡಗಿದವು. ಆಗ ಶಿವನು ಅಗಸ್ತ್ಯ ಮುನಿಯ ಬಳಿ ಸೃಷ್ಟಿಯ ಸಮತೋಲನಕ್ಕಾಗಿ ನೀವು ದಕ್ಷಿಣ ಕಾಶಿಗೆ ಹೋಗಬೇಕೆಂದು ವಿನಂತಿಸಿಕೊಂಡನು. ಅಗಸ್ತ್ಯ ಋಷಿಯು ಎಷ್ಟು ಶಕ್ತಿಯುತನಾಗಿದ್ದಾನೆಂದರೆ, ದೈವತ್ವವನ್ನು ಸಮತೋಲನಗೊಳಿಸಲು ಅವನು ಮಾತ್ರ ಸಾಕಾಗುತ್ತಾನೆ ಎಂಬುದನ್ನು ಇದು ಸೂಚಿಸುತ್ತದೆ.

ಋಷಿ ಅಗಸ್ತ್ಯ ಇದಕ್ಕೆ ಒಪ್ಪಿಗೆಯನ್ನು ನೀಡಿ ತಾನೂ ಕೂಡ ಇತರರಂತೆ ನಿಮ್ಮ ವಿವಾಹದಲ್ಲಿ ಭಾಗಿಯಾಗಲು ಬಯಸುತ್ತೇನೆಂದು ಹೇಳುತ್ತಾನೆ. ಆಗ ಶಿವನು ನೀನು ಎಲ್ಲಿ ನಿಲ್ಲುತ್ತೀಯೋ ಅಲ್ಲಿಂದ ನನ್ನ ವಿವಾಹವನ್ನು ನೋಡಬಹುದೆಂಬ ವರವನ್ನು ನೀಡುತ್ತಾನೆ. ನಂತರ ಅಗಸ್ತ್ಯರು ದಕ್ಷಿಣಕ್ಕೆ ಹೋಗಿ ಅಲ್ಲಿ ಸೃಷ್ಟಿಯನ್ನು ಸಮತೋಲನಗೊಳಿಸಿದರು.

ಸ್ಥಳೀಯ ಸಂಪ್ರದಾಯದ ಪ್ರಕಾರ ಅಗಸ್ತ್ಯ ಋಷಿಯು ತನ್ನ ಕಾರ್ಯವನ್ನು ಕಳಸದಲ್ಲಿ ನಿಲ್ಲಿಸಿದನು ಮತ್ತು ಇಲ್ಲಿಂದ ಮದುವೆಯನ್ನು ನೋಡಿದನು ಎನ್ನಲಾಗುತ್ತದೆ. ಅಗಸ್ತ್ಯ ಋಷಿಗೆ ಆತನ ಕಮಂಡಲದಲ್ಲಿ ಶಿವಲಿಂಗವು ಕಾಣಿಸಿಕೊಳ್ಳುತ್ತದೆ. ಅವನು ಅಲ್ಲಿ ದೇವಾಲಯವನ್ನು ನಿರ್ಮಿಸಿದನು ಮತ್ತು ಅದರಲ್ಲಿ ಲಿಂಗವನ್ನು ಸ್ಥಾಪಿಸಿದನು. ಇದು ಈಗ ಕಲಶೇಶ್ವರ ಎಂದು ಕರೆಯಲ್ಪಡುವ ದೇವಾಲಯವಾಗಿದೆ. ಈ ದೇವಾಲಯದಲ್ಲಿರುವ ದೇವಿಯನ್ನು ಸರ್ವಾಂಗ ಸುಂದರಿ ಎಂದು ಕರೆಯಲಾಗಿದೆ.

ಕಳಸದಲ್ಲಿ ಇರುವ ಪ್ರಮುಖ ದೇವಾಲಯ:

- ಶ್ರೀ ಚಂದ್ರನಾಥ ಸ್ವಾಮಿ ದೇವಸ್ಥಾನ
- ಕಲಶೇಶ್ವರ ದೇವಸ್ಥಾನ
- ಹನುಮಾನ್ ದೇವಾಲಯ
- ವೆಂಕಟರಮಣ ದೇವಾಲಯ
- ರಂಜಾಲ್ ಮಹಾಲಕ್ಷ್ಮೀ ದೇವಸ್ಥಾನ
- ವಸಿಷ್ಠ ಆಶ್ರಮ

ಕಳಸವು ಪವಿತ್ರ ಪಂಚ ತೀರ್ಥಕ್ಕೆ ಹೆಸರುವಾಸಿಯಾಗಿದೆ. ಇದು ಐದು ಪವಿತ್ರ ಜಲಗಳನ್ನು ಪ್ರತಿನಿಧಿಸುತ್ತದೆ. ಅವುಗಳೆಂದರೆ:

1. **ವಸಿಷ್ಠ ತೀರ್ಥ:** ಈ ತೀರ್ಥವು ವಸಿಷ್ಠ ಋಷಿಯ ಕಾರಣದಿಂದ ವಿಶೇಷವಾಗಿದೆ.
2. **ನಾಗ ತೀರ್ಥ:** ಇಲ್ಲಿ ಸ್ನಾನ ಮಾಡುವುದರಿಂದ ನಾಗದೋಷ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಇರುವುದು ವಿಶೇಷವಾಗಿದೆ.
3. **ಕೋಟಿ ತೀರ್ಥ:** ಗಿರಿಜಾ ಕಲ್ಯಾಣದ ಸಮಯದಲ್ಲಿ ಅಗಸ್ತ್ಯ ಋಷಿಯ ಕೋರಿಕೆಯ ಮೇರೆಗೆ ಕೋಟಿ ದೇವತೆ ಇಲ್ಲಿಯೇ ಇದ್ದರು, ಉಳಿದಿದ್ದರು ಎಂಬ ನಂಬಿಕೆಯಿದೆ.
4. **ರುದ್ರ ತೀರ್ಥ:** ಇಲ್ಲಿ ಪಿಂಡವನ್ನು ಅರ್ಪಿಸುವುದು ವಿಷ್ಣು ಪಾದ ಅಥವಾ ಗಯಾದಲ್ಲಿ ಪಿಂಡವನ್ನು ಅರ್ಪಿಸಿದಷ್ಟೇ ಮಂಗಳಕರ ಎಂದು ನಂಬಲಾಗಿದೆ.
5. **ಅಂಬಾ ತೀರ್ಥ:** ಪಾರ್ವತಿ ದೇವಿಯ ಪವಿತ್ರ ಜಲತಾಣ.
6. **ದುಗ್ಗಪ್ಪನ ಕಟ್ಟೆ:** ಈ ಸ್ಥಳದಿಂದ ಇಡೀ ಕಳಸ ಪಟ್ಟಣವನ್ನು ವೀಕ್ಷಿಸಬಹುದಾಗಿದೆ.

●

ನೆನಪು

ನನಗೆ ನೀನೀಗ ಬರೀ ನೆನಪು ಮಾತ್ರ
ದೂರವಾದೆ ನನ್ನ ಮನದಾಳದಲ್ಲಿ.
ದುಃಖವೇ ತುಂಬಿದ್ದ ನನ್ನ ಜೀವನದಲ್ಲಿ
ಖುಷಿಯಾಗಿ ನೀ ಆವರಿಸಿಕೊಂಡಿದ್ದೆ.
ಮೊಗ್ಗಾಗಿದ್ದ ಈ ಪ್ರೀತಿಯನ್ನು
ಹೂವಿನಂತೆ ನೀ ಅರಳಿಸಿದ್ದೆ.
ಆದರೆ ಈ ಕ್ಷಣ ನಿನ್ನ ಚುಚ್ಚು ಮಾತುಗಳನ್ನು ನೆನೆದು
ನನ್ನ ಹೃದಯ ಕಲಕಿ
ಮೌನದ ಮೋಡ ಕವಿದು
ಕಣ್ಣೀರು ಮಾತಾಯಿತು.

✍ **ಕೆ. ಈ. ದಿಶಾ,** ತೃತೀಯ ಬಿ.ಕಾಂ.

ದಿ. ಡಾ| ಟಿ. ಎಮ್. ಎ. ಪೈ ಜೀವನ ಮತ್ತು ಸಾಧನೆ

✍ **ಶಿಲ್ಪಾ ಎಸ್.**, ತೃತೀಯ ಬಿ.ಎ.

"ಜಗತ್ತು ಬದಲಾಗಬೇಕು ಎಂದು ಬಯಸುವವರೂ ತಮ್ಮಿಂದಲೇ ಬದಲಾವಣೆ ಆಗಬೇಕು ಎಂಬುದನ್ನು ಮೊದಲು ಅರಿತುಕೊಳ್ಳಬೇಕು" ಎಂದು ಮಹಾತ್ಮ ಗಾಂಧೀಜಿಯವರು ಹೇಳಿರುವಂತೆ ಡಾ। ಟಿ. ಎಮ್. ಎ. ಪೈ ಅವರು ಕೂಡ ತಾವೇ ಸಂಸ್ಥೆಗಳನ್ನು ಕಟ್ಟಿ ಬೆಳೆಸುವುದರ ಮೂಲಕ ಸಾಧನೆಯನ್ನು ಮಾಡಿದ್ದಾರೆ. ಆರೋಗ್ಯ, ಶಿಕ್ಷಣ, ಹಣಕಾಸು ಈ ಮೂರು ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆಯನ್ನು ಮಾಡುವುದರ ಮೂಲಕ ಬಡತನ ನಿರ್ಮೂಲನ ಮಾಡಿದರು. ಬಡಮಕ್ಕಳ ಪ್ರತಿಭೆಯು ಬೆಳೆಯಲು ಕಾರಣೀಕರ್ತರಾದರು.



ಶಿಕ್ಷಣ, ಆರೋಗ್ಯ, ಹಣಕಾಸು ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆಯನ್ನು ಮಾಡುವುದರ ಮೂಲಕ ಮಹಾಪುರುಷರಾದರು. ಇವರು ಮಣಿಪಾಲದ ಮಹಾಚೇತನ, ಮೇರು ವ್ಯಕ್ತಿತ್ವದ ಸರದಾರ. ಇವರು 1898 ಏಪ್ರಿಲ್ 30ರಂದು ಅನಂತ ಪೈ ಮತ್ತು ಯಶೋದಾಬಾಯಿಯವರ ಮೂರನೇ ಮಗನಾಗಿ ಜನಿಸಿದರು. ಇವರು ಸಾಮಾನ್ಯ ಕುಟುಂಬದಲ್ಲಿ ಜನಿಸಿ ಅಸಾಮಾನ್ಯ ಸಾಧನೆಯನ್ನು ಮಾಡಿದವರು. ಕಲ್ಯಾಣಪುರದಲ್ಲಿ ಇವರ ಶಿಕ್ಷಣ (ಪ್ರಾಥಮಿಕ) ಮುಗಿಯಿತು. ಬಾಲ್ಯವನ್ನು ಕಲ್ಯಾಣಪುರದಲ್ಲೇ ಕಳೆದರು. ಇವರಿಗೆ ತಾಯಿಯ ಮೇಲೆ ಅಪಾರ ಗೌರವ, ಪ್ರೀತಿ ಇತ್ತು. ಅವರ ಮಾತನ್ನು ಎಂದೂ ಮೀರುತ್ತಿರಲಿಲ್ಲ. ತಾಯಿ ಇವರಿಗೆ ಮಹಾಭಾರತ, ರಾಮಾಯಣ ಕಥೆಗಳನ್ನು ಹೇಳುತ್ತಿದ್ದರು. ಒಳ್ಳೆಯ ನಡವಳಿಕೆ ಮುಖ್ಯ ಎಂಬುದನ್ನು ಅವರು ತಿಳಿಸುತ್ತಿದ್ದರು. ಮಾಧವ ಪೈ ಅವರು ಒಂಭತ್ತು ವರ್ಷವಿರುವಾಗ ಅವರ ತಂದೆ ನ್ಯುಮೋನಿಯಾ ಕಾಯಿಲೆಯಿಂದ ತೀರಿಹೋದರು. ನಂತರದಲ್ಲಿ ಇವರ ಶಿಕ್ಷಣ ತಾಲೂಕಿನ ಬೋರ್ಡ್ ಹೈಸ್ಕೂಲಿನಲ್ಲಿ ನಡೆಯಿತು. ಒಮ್ಮೆ ಇವರು ಹಲ್ಲು ನೋವೆಂದು ಹಲ್ಲು ಕೀಳಿಸಲು ವೈದ್ಯರ ಬಳಿ ಹೋದಾಗ ನೋವು ನಿವಾರಕ ಔಷಧಿಯನ್ನು ನೀಡದೆ ಹಾಗೆಯೇ ಹಲ್ಲು ಕಿತ್ತಿದ್ದರಿಂದ ಇವರು ಅಸಾಧ್ಯ ನೋವಿನಿಂದ ಬಳಲಿದರು. ಅಂದೇ ನೋವು ನಿವಾರಕ ಔಷಧಿಯನ್ನು ಕಂಡುಹಿಡಿಯಬೇಕು ಎಂದುಕೊಂಡರು. ಇವರು ಎಸ್.ಎಸ್.ಎಲ್.ಸಿ. ಮುಗಿಸಿ ಮಂಗಳೂರಿನ ಪಿ.ಯು. ಕಾಲೇಜಿಗೆ ಹೋದರು. ಅಲ್ಲಿರುವಾಗ ಇವರ ಬದುಕಿನಲ್ಲಿ ತಿರುವು ಪಡೆಯಿತು. ತಾವು ಹಿಂದೆ ಓದಿದ್ದ ಹೈಸ್ಕೂಲು ಆರ್ಥಿಕ ಕಾರಣದಿಂದಾಗಿ ಮುಚ್ಚಿಹೋಗುವುದರಲ್ಲಿತ್ತು. ಅದನ್ನು ಇವರು ತಡೆದು ದೇಶ-ವಿದೇಶಗಳಿಂದ ಹಣ ಸಂಗ್ರಹಿಸಿ ಸ್ಕೂಲನ್ನು ಮುಂದುವರೆಸಲು ಅವಕಾಶ ಮಾಡಿಕೊಟ್ಟಿದ್ದು ಇವರ ಮುಂದಿನ ಬದುಕಿನ ಸಾಧನೆಗೆ ನಾಂದಿಯಾಯಿತು.

ನಂತರದಲ್ಲಿ ಇವರು ಡಾಕ್ಟರ್ ಆಗುವ ಕನಸು ಕಂಡಿದ್ದರಿಂದ ಮದ್ರಾಸಿಗೆ ಹೋದರು. ಅಲ್ಲಿ ಚೆನ್ನಾಗಿ ಕಲಿತು ಡಾ। ಟಿ. ಎಮ್. ಎ. ಪೈ ಆದರು. ಅವರಿಗೆ ಅಲ್ಲೇ ಹಾಂಕಾಂಗ್‌ನಲ್ಲಿ ಉದ್ಯೋಗ ದೊರೆಯಿತು. ಆದರೆ ಅಲ್ಲಿಗೆ ಹೋಗದೆ ತಾಯಿಯ ಮಾತಿನಂತೆ ಅವರು ಮಣಿಪಾಲಕ್ಕೆ ಬಂದು ಚಿಕಿತ್ಸೆಯನ್ನು ನೀಡಿದರು. ಆ ಹೊತ್ತಿನಲ್ಲಿ ಪ್ಲೇಗ್, ಮಲೇರಿಯಾ ರೋಗ ಊರಿನಲ್ಲಿ ಹರಡಿತ್ತು. ಜನರ ಸಮಸ್ಯೆಗೆ ಚಿಕಿತ್ಸೆ ನೀಡುವುದರ ಮೂಲಕ ಅದರ ನಿರ್ಮೂಲನೆ ಮಾಡಿದರು. ಅವರ ಅಣ್ಣ ನಂತರದಲ್ಲಿ ಸಿಂಡಿಕೇಟ್ ಬ್ಯಾಂಕನ್ನು ಆರಂಭಿಸಿದರು. ಇದರಿಂದ ಜನಸಾಮಾನ್ಯರಿಗೆ ಉಪಯೋಗ ಆಗಬೇಕು ಎಂದುಕೊಂಡು 'ಪಿಗ್ಮಿ' ಯೋಜನೆಯನ್ನು ಮಾಡಿದರು. ಎರಡಾಣೆ ಉಳಿತಾಯದ ಮೂಲಕ ಬ್ಯಾಂಕಿನಲ್ಲಿ ಖಾತೆ ತೆರೆಯುವ ಅವಕಾಶವನ್ನು ನೀಡಿದರು. ಜನರಿಗೆ ಸಾಲ ಸೌಲಭ್ಯವನ್ನು ನೀಡಿದರು. ವಿದ್ಯಾಭ್ಯಾಸಕ್ಕಾಗಿ ಸಾಲವನ್ನು ನೀಡುವುದರ ಮೂಲಕ ಬಡ ಪ್ರತಿಭಾವಂತ ಮಕ್ಕಳು ದೇಶ-ವಿದೇಶಗಳಲ್ಲಿ ಓದಿ ಉನ್ನತ ಸ್ಥಾನಕ್ಕೇರಲು ಕಾರಣರಾದರು. ಅನಂತರದಲ್ಲಿ ಜೀವವಿಮಾ ಮ್ಯೂಚುವಲ್ ಇನ್ಶೂರೆನ್ಸನ್ನು ಆರಂಭಿಸಿ ಇದು ಆರ್ಥಿಕ ಭದ್ರತೆಗೆ ಬೇಕು ಎಂಬುದನ್ನು ನಂಬಿದ್ದರು. 8,000 ದಿಂದ ಆರಂಭವಾದ ಇವರ ಬ್ಯಾಂಕ್ ನಂತರದಲ್ಲಿ ಬೃಹದಾಕಾರವಾಗಿ ಬೆಳೆದು ರಾಷ್ಟ್ರದ ಉತ್ತಮ ಬ್ಯಾಂಕುಗಳ ಪಟ್ಟಿಯಲ್ಲಿ ಸೇರಿತು. ಆರ್ಥಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಅನಂತರ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಯನ್ನು ಆರಂಭಿಸಿದರು. ಉಡುಪಿಯಲ್ಲಿ ಆಗ ಒಂದೂ ಕಾಲೇಜು ಇಲ್ಲದಿದ್ದರಿಂದ ಕಾಲೇಜು

ಸ್ಥಾಪಿಸಬೇಕೆಂದು ಕನಸು ಕಂಡರು. 'ಅಕಾಡೆಮಿ ಆಫ್ ಜನರಲ್ ಎಜುಕೇಶನ್' ಎಂಬ ಸಂಸ್ಥೆಯನ್ನು ಆರಂಭಿಸಿದರು. ಇದರ ಉದ್ದೇಶ ಎಸ್.ಎಸ್.ಎಲ್.ಸಿ. ಪಾಸ್ ಆದವರಿಗೆ ಉದ್ಯೋಗ ನೀಡುವುದಾಗಿತ್ತು. ಆದ್ದರಿಂದ ಪತ್ರಿಕೋದ್ಯಮ, ಫೋಟೋಗ್ರಫಿ, ಹೈನುಗಾರಿಕೆ – ಹೀಗೆ ಹಲವಾರು ಐವತ್ತಕ್ಕೂ ಹೆಚ್ಚು ಕೋರ್ಸ್‌ಗಳನ್ನು ಆರಂಭಿಸಿದರು. ನಂತರದಲ್ಲಿ ದಾನಿಗಳನ್ನು ಕಾಡಿ ಬೇಡಿ ಹಣ ಸಂಗ್ರಹಿಸಿ ಮದ್ರಾಸ್ ಸರ್ಕಾರಕ್ಕೆ ಒಂದೂವರೆ ಲಕ್ಷ ಠೇವಣಿ ಇಟ್ಟು 1949 ಜೂನ್ 29ರಂದು ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜನ್ನು ಆರಂಭಿಸಿದರು. ಇದು ದಿನೇ ದಿನೇ ವ್ಯಾಪಕವಾಗಿ ಬೆಳೆಯಿತು. ಆ ಸಂದರ್ಭದಲ್ಲಿ ಮದ್ರಾಸ್ ಸರ್ಕಾರ ಹೆಣ್ಣು ಮಕ್ಕಳಿಗೆ ಈ ಕಾಲೇಜಿಗೆ ಪ್ರವೇಶವಿಲ್ಲ ಎಂದು ಆದೇಶ ಹೊರಡಿಸಿತು. ಆದ್ದರಿಂದ ಪೈಗಳು ಸ್ತ್ರೀ ಸಮಿತಿಯನ್ನು ಒಬ್ಬ ಸ್ತ್ರೀಯಿಂದ ಸರ್ಕಾರಕ್ಕೆ ಮನವಿ ಬರೆಸಿ, ಇಂದಿರಾಗಾಂಧಿಗೆ ಕೋರಿಕೆ ಪತ್ರ ಸಲ್ಲಿಸಿದರು. ಆಗ ಮದ್ರಾಸ್ ಸರ್ಕಾರ ಆದೇಶವನ್ನು ಸಡಿಲಗೊಳಿಸಿತು. ಅನಂತರದಲ್ಲಿ ಲಾರ್ಡ್ಸ್‌ನಿಂದ ಪ್ರಾರಂಭವಾದ ಕಾಲೇಜು ವಿಜ್ಞಾನ, ವಾಣಿಜ್ಯ ವಿಭಾಗವನ್ನು ಹೊಂದಿ, ಸರ್ವವ್ಯಾಪಿಯಾಗಿ ಬೆಳೆಯಿತು. ಇಷ್ಟಕ್ಕೇ ಇವರ ಉತ್ಸಾಹ ಕರಗದೆ ಮತ್ತೆ ಇವರು ಮಣಿಪಾಲದಲ್ಲಿ ಮೆಡಿಕಲ್ ಕಾಲೇಜನ್ನು ಆರಂಭಿಸುವ ಕನಸು ಕಂಡರು. ಇದರಿಂದ ಬಡ ಪ್ರತಿಭೆಗಳಿಗೆ ಓದು ದೊರೆಯುವುದಲ್ಲದೆ ಜನಸಾಮಾನ್ಯರ ಸಮಸ್ಯೆಯೂ ಪರಿಹಾರವಾಗುತ್ತದೆ ಎಂಬುವುದಾಗಿತ್ತು. ಮಣಿಪಾಲದಲ್ಲಿ ಆಸ್ಪತ್ರೆಯನ್ನು ಕಟ್ಟಿಸಿ ಅನಂತರದಲ್ಲಿ ಎಲ್ಲರಿಂದ ಬೇಡಿ ಹಣ ಸಂಗ್ರಹಿಸಿ, ಅನುಮತಿ ಪಡೆದು 1953ರಲ್ಲಿ ತಮ್ಮ ಕನಸಿನ ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಆರಂಭಿಸಿದರು. ಇದಾದ ನಂತರವೂ ಅವರ ಉತ್ಸಾಹ ಶಿಕ್ಷಣ ಕ್ಷೇತ್ರದಲ್ಲಿ ಗರಿಬಿಚ್ಚಿದ ಹಕ್ಕಿಯಂತೆ ದೂರ ದೂರ ಹಾರುತ್ತಾ ಹೋಯಿತು. ಮಣಿಪಾಲದಲ್ಲಿ ದಂತ ವೈದ್ಯಕೀಯ ಸಂಸ್ಥೆಯನ್ನು ಆರಂಭಿಸಿದರು. ಶೃಂಗೇರಿಯಲ್ಲಿ ಜಗದ್ಗುರು ಚಂದ್ರಶೇಖರ ಭಾರತೀ ತೀರ್ಥ ಕಾಲೇಜು, ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜು, ಮುಲ್ಕಿಯ ವಿಜಯಾ ಕಾಲೇಜು, ಮೂಡಬಿದ್ರೆಯ ಮಹಾವೀರ ಕಾಲೇಜು, ಕಾರ್ಕಳದ ಭುವನೇಂದ್ರ ಕಾಲೇಜು – ಹೀಗೆ ಹಲವಾರು ಶಿಕ್ಷಣ ಸಂಸ್ಥೆಯನ್ನು ರಚಿಸಿದರು. ಇವರ ಸಾಧನೆ ಭಾರತದಲ್ಲಿ ಮಾತ್ರವಲ್ಲದೆ ವಿದೇಶದಲ್ಲೂ ಹರಡಿ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜು ವಿದೇಶದಿಂದ ಓದುಗರನ್ನು ಆಕರ್ಷಿಸಿತು. ಮೊದಲಿಗೆ ನೂರು ಮಂದಿ ಇದ್ದ ಕಾಲೇಜು ನಂತರದಲ್ಲಿ ವ್ಯಾಪಕವಾಗಿ ವಿಸ್ತಾರವಾಯಿತು. ಇಂದಿರಾಗಾಂಧಿಯವರು ಮಣಿಪಾಲಕ್ಕೆ ಬಂದು ಪೈಯವರ ಸಾಧನೆಯನ್ನು ನೋಡಿ "ಇಂತಹ ಸಾಧನೆ ಮಾಡಿದ ವ್ಯಕ್ತಿಯ ಕಲ್ಪನಾಶಕ್ತಿ ಎಂತಹದ್ದಿರಬಹುದು" ಎಂದರು. ಇವರು ಸ್ಥಾಪಿಸಿದ ಮಣಿಪಾಲದ ಪವರ್ ಪ್ರೆಸ್ ಅನ್ನು ಮರೆಯುವ ಹಾಗಿಲ್ಲ. ಇದು ನಮ್ಮ ನಾಡಿನ ಹೆಮ್ಮೆ. ಸುಂದರವಾದ ಮುದ್ರಣದ ಮೂಲಕ ರಾಷ್ಟ್ರಾಧ್ಯಕ್ಷರಿಂದ ಪ್ರಶಸ್ತಿಯನ್ನು ತಂದುಕೊಟ್ಟಿದೆ. ಇವರನ್ನು ನೋಡಲು ಹಲವಾರು ವಿದೇಶಿಗರು ಬಂದರು, ಇವರ ಸಾಧನೆಯನ್ನು ಕಣ್ಣಾರೆ ಕಂಡ ಅವರು, ಆಶ್ಚರ್ಯಚಕಿತರಾದರು. 1964ರಲ್ಲಿ ಇವರಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿತು. ಅದಾದ ಬಳಿಕ ವಿದ್ಯಾಧರ ಪ್ರಶಸ್ತಿ, ಡಾಕ್ಟರೇಟ್ ಪ್ರಶಸ್ತಿ – ಹೀಗೆ ಹಲವಾರು ಪ್ರಶಸ್ತಿಗಳು ದೊರೆತಿವೆ. ಇವರಿಗೆ ಎಂಭತ್ತು ವರ್ಷವಿದ್ದಾಗ ಉತ್ಸವ ನಡೆಯಿತು. ಅಂತಹ ಉತ್ಸವ ಹಿಂದೆಂದೂ ನಡೆದಿರಲಿಲ್ಲ. ಉತ್ಸವದಲ್ಲಿ ಎಂಭತ್ತು ಚಿನ್ನದ ಪದಕಗಳನ್ನು ಇವರು ಪಡೆದರು. ಇದಾದ ಬಳಿಕ ಇವರ ಆರೋಗ್ಯದಲ್ಲಿ ಏರುಪೇರಾಗಿ ಅವರೇ ನಿರ್ಮಿಸಿದ ವಾಲಿವ್ಯೂ ಕೇಂದ್ರದಲ್ಲಿ ವಾಸಿಸತೊಡಗಿದರು. ಅಲ್ಲಿಗೂ ಹಲವಾರು ಜನರು ಬಂದು ಮಾತನಾಡಿಸುತ್ತಿದ್ದರು. 1979 ಮೇ 29ರಂದು ಇವರು ಬದುಕಿಗೆ ವಿದಾಯ ಹೇಳಿ ಹೊರಟು ಹೋದರು. ಅವರ ಎರಡು ಕನಸುಗಳು ಹಾಗೆಯೇ ಉಳಿಯಿತು. ಲೇಕ್‌ಸಿಟಿ ವಿಶ್ವವಿದ್ಯಾಲಯ ಮತ್ತು ತೆರಿಗೆ ರಹಿತ ರಾಷ್ಟ್ರ. ಇವೆರಡೂ ಮುಂದಿನ ಜನಾಂಗಕ್ಕೆ ಪೈಗಳು ಎಸೆದಿರುವ ಸವಾಲು. ಮಣಿಪಾಲದ ನಿರ್ಜನ ಬೋಳುಗುಡ್ಡವನ್ನು ವಿಶ್ವವಿದ್ಯಾಲಯಗಳ ತವರೂರಾಗಿಸಿದ ಮಹಾಚೇತನ ಇವರು. ನಂತರದಲ್ಲಿ ಇವರ ಮಕ್ಕಳು, ಸಂಬಂಧಿಕರು ಇವನ್ನು ಮುಂದುವರೆಸುತ್ತಿದ್ದು ಇನ್ನೂ ವ್ಯಾಪಕವಾಗಿ ಇದು ಬೆಳೆದಿದೆ.

"ಸಮಾಜದ ಋಣವನ್ನು ತೀರಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಸಮಾಜದಿಂದ ಪಡೆದುದಕ್ಕಿಂತ ಹೆಚ್ಚಿನದಾಗಿ ಸಮಾಜಕ್ಕೆ ಹಿಂತಿರುಗಿಸುವವರೇ ಮಹಾನ್ ಪುರುಷರು." ಅಂತಹ ವ್ಯಕ್ತಿಗಳ ಸಾಲಿನಲ್ಲಿ ಡಾ। ಟಿ. ಎಮ್. ಎ. ಪೈಗಳು ಸೇರುತ್ತಾರೆ. ಅವರ ಭೌತಿಕ ಶರೀರ ನಮ್ಮೊಂದಿಗಿಲ್ಲ, ಆದರೆ ಅವರ ಸಂಸ್ಥೆಗಳು, ಸಾಧನೆಗಳು ನಮ್ಮ ಮುಂದಿವೆ. "ಅವರ ನೆನಪು ನಮ್ಮಲ್ಲಿ ಭರವಸೆಯ ಆಗರವಾಗಿ ಸ್ಫೂರ್ತಿಯ ಸಾಗರವಾಗಿ ಚಿರಕಾಲ ಉಳಿಯುತ್ತದೆ."

●

ಸ್ವಾತಂತ್ರ್ಯ ಹೋರಾಟಗಾರ ಬಂಟಕಲ್ಲು ಲಕ್ಷ್ಮೀನಾರಾಯಣ ಶರ್ಮ

✍ **ಪೂಜಾ ಪಿ. ಶೆಟ್ಟಿ**, ದ್ವಿತೀಯ ಬಿ.ಸಿ.ಎ.

ಒಂದು ಪ್ರದೇಶದ ಬದುಕು ಸುಸಂಸ್ಕೃತವೆನಿಸಿಕೊಳ್ಳಬೇಕಾದರೆ ಅಲ್ಲಿನ ಪ್ರತಿಭಾವಂತ ಪ್ರಜೆಗಳು ವಿವಿಧ ಕ್ಷೇತ್ರಗಳಲ್ಲಿ ಸಮಾಜದ ಒಳಿತಿಗಾಗಿ ದುಡಿಯಬೇಕಾಗುತ್ತದೆ. "ಗಾಂಧೀಜಿಯವರು ನಮಗೆ ಹಿಂದಿಗೂ ಬೇಕಾದ ಹಾಗೂ ಮುಂದಿಗೂ ಬೇಕಾದವರು, ಆದರೆ ಭೋಗಜೀವನದಿಂದಾಗಿ ತ್ಯಾಗಜೀವನ ಬೇಡವಾಗಿದೆ ಎಂದು ಹೇಳಿದವರು." ಜನರಲ್ಲಿ ಧನ ಲೋಭ, ಭ್ರಷ್ಟಾಚಾರ, ಸುಖಲೋಲುಪತೆ, ಸ್ವಾರ್ಥಗಳ ಕಣಗಳನ್ನು ಕಿತ್ತು, ಅವರಲ್ಲಿ ಆದರ್ಶಗಳನ್ನು ಬಿತ್ತಿದವರು, ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಗಾಂಧೀವಾದಿ, ಜೀವನದುದ್ದಕ್ಕೂ ದೇಶಕ್ಕಾಗಿ ಹೋರಾಡಿ, ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ, ಗಾಂಧೀಜಿಯವರ ಆದರ್ಶಗಳ ಮೂರ್ತರೂಪ ಅವರೇ ಬಂಟಕಲ್ಲು ಲಕ್ಷ್ಮೀನಾರಾಯಣ ಶರ್ಮರು. "ಸ್ವಾತಂತ್ರ್ಯ ದಿನ" ಎಂಬ ಶಬ್ದ ಕಿವಿಗೆ ಬಿದ್ದ ತಕ್ಷಣ, ತಮ್ಮ ಇಳಿವಯಸ್ಸಲ್ಲೂ ಎದ್ದು ಕುಳಿತು ಕಣ್ಣೀರಿಳಿಸಿಕೊಂಡ, ನಿರ್ಮಲ ಮನಸ್ಸಿನ ಜೀವವು, "ಸ್ವಾತಂತ್ರ್ಯ ನಮ್ಮ ಪುಸ್ತಕಗಳಿಗಷ್ಟೇ ಸಿಕ್ಕಿದ ವಸ್ತು. ನಾವು ನಮ್ಮ ದೇಶವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲೇ ಇಲ್ಲ. ನಮಗೆ ದೊರಕಿದ ಸ್ವಾತಂತ್ರ್ಯವನ್ನು ನಾವು ಅನುಭವಿಸಲೇ ಇಲ್ಲ" ಎಂದು ಘರ್ಜಿಸಿದ, ಗಾಂಧೀಜಿಯವರ "ಗ್ರಾಮ ಸ್ವರಾಜ್ಯದ" ಕಣಗಳನ್ನು ತನ್ನಲ್ಲಿ ಮೈಗೂಡಿಸಿದ ಗಾಂಧೀವಾದಕರು, ಲಕ್ಷ್ಮೀನಾರಾಯಣ ಶರ್ಮ.

ಕೃಷಿ ಋಷಿಯ ಜನನವು ಏಪ್ರಿಲ್ 12, 1919ರಂದು ಕಟಪಾಡಿಯ ಕೋಟೆ ಗ್ರಾಮದಲ್ಲಾಯಿತು. ಏಪ್ರಿಲ್ 12 ಮತ್ತು ಏಪ್ರಿಲ್ 13 ಭಾರತದ ಸ್ವಾತಂತ್ರ್ಯದ ಹೋರಾಟಕ್ಕೆ ಮುನ್ನುಡಿ ಬರೆದ ದಿನಗಳು. ಪ್ರತಿಯೊಬ್ಬ ಭಾರತೀಯನ ರಕ್ತವನ್ನು ಕುದಿಸುವ ಜಲಿಯನ್ ವಾಲಾಬಾಗ್ ದುರಂತ ಸಂಭವಿಸಿದ ದಿನ. ಕೋಟೆ ಗ್ರಾಮದ ಬಡ ಮನೆತನದ ಪಂಡಿತ ಗುರುರಾಜ ಹಾಗೂ ಭಾಗೀರಥಿ ದಂಪತಿಗಳ ಎಂಟು ಮಂದಿ ಮಕ್ಕಳಲ್ಲಿ ಮೂರನೆಯವರು ಲಕ್ಷ್ಮೀನಾರಾಯಣ ಶರ್ಮ.

ಸನಾತನ ಪರಿವಾರದ ಬದುಕು ಲಕ್ಷ್ಮೀನಾರಾಯಣ ಶರ್ಮರಿಗೆ ಅಗತ್ಯವಾದ ಸಂಸ್ಕಾರವನ್ನು ನೀಡಿತು. ಬಡ ಕುಟುಂಬವಾದರೂ ಕರುಣಾಮಯಿ ಭಾಗೀರಥಿ ಅಮ್ಮನವರ ಶ್ರೀಮಂತ ಮನಸ್ಥಿತಿಯಲ್ಲಿ ಅಂತಹ ಮನಸ್ಥಿತಿಯನ್ನು ಹೊಂದಿದವರಾಗಿ ಬೆಳೆದರು ಲಕ್ಷ್ಮೀನಾರಾಯಣ ಶರ್ಮರು. ಮನೆಯಲ್ಲಿ ಕಿತ್ತು ತಿನ್ನುವ ಬಡತನವಿದ್ದರೂ ಕೂಡ ಬ್ರಹ್ಮೋಪದೇಶದ ಬಳಿಕ ಕಟಪಾಡಿಯ ಮಟ್ಟು ಎಂಬಲ್ಲಿನ ಬೋರ್ಡ್ ಎಲಿಮೆಂಟರಿ ಪ್ರೈಮರಿಯಲ್ಲಿ ಎರಡನೇ ಕ್ಲಾಸು ಪಾಸಾದ ಮೇಲೆ, ಉಡುಪಿಯ ಮಹಾಪಾಠ ಶಾಲೆಯಲ್ಲಿ ಹಲವಾರು ಕಷ್ಟ-ಸಂಕಷ್ಟಗಳು ಎದುರಾದರೂ ಎದೆಗುಂದದೆ ಎಂಟು ವರ್ಷ ಸಂಸ್ಕೃತ ಅಧ್ಯಯನ ಮಾಡಿದರು ಶರ್ಮರು.

ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಸ್ವಾತಂತ್ರ್ಯದ ಭಾವೋದ್ದೀಪನದ ಮುಂಜಾವುಗಳಲ್ಲಿ ಶರ್ಮರು ಉಡುಪಿಯಲ್ಲಿದ್ದರು. ಶರ್ಮರ ಕಣಕಣದಲ್ಲೂ ಸ್ವತಂತ್ರ ಭಾರತದ ಕಲ್ಪನೆಯೇ ತುಂಬಿಕೊಂಡಿತ್ತು. ಆದರೆ ದಾನ, ದಕ್ಷಿಣೆ, ಪರಾನ್ನದಲ್ಲಿ ಉಡುಪಿಯ ಬದುಕು. ಆದರೆ ಶರ್ಮರ ಜೀವನ ಬದಲಿಸಿದ್ದೇ ಕಟಪಾಡಿಗೆ ಗಾಂಧೀಜಿಯವರ ಭೇಟಿ. ದೇಶದ ಸ್ವಾತಂತ್ರ್ಯಕ್ಕಾಗಿ ಹಾಗೂ ಪೂರ್ಣ ಸಮೃದ್ಧಿಗಾಗಿ ಹೋರಾಟ ಮಾಡುವ ಸಂಕಲ್ಪ ಕೈಗೊಂಡಾಗ ಶರ್ಮರಿಗಿನ್ನೂ ಹದಿನೇಳರ ವಯಸ್ಸು. ಗಾಂಧೀಜಿಯವರ ಬಗೆಗೆ ಕೇಳಿದ ಪ್ರಶ್ನೆಗೆ ಒಂದು ಸಂದರ್ಶನದಲ್ಲಿ ಶರ್ಮರು ಈ ರೀತಿ ಪ್ರತಿಕ್ರಿಯಿಸಿದ್ದಾರೆ: "ನಾನು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಳ್ಳಲು ಮುಖ್ಯ ಕಾರಣ ಗಾಂಧೀಜಿ, ನಾನು ಅವರ ವ್ಯಕ್ತಿತ್ವದ ಬಗ್ಗೆ ಅವರಿವರಿಂದ ಕೇಳಿ ತಿಳಿದುಕೊಂಡಿದ್ದೆ. ಅಂದು ನಾನು ಅವರನ್ನು ಕಣ್ಣಾರೆ ಕಂಡಾಗ, ಅವರ ವ್ಯಕ್ತಿತ್ವಕ್ಕೆ ಮಾರುಹೋಗಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದೆ." ಗಾಂಧೀಜಿಯವರ ಸತ್ಯಾಗ್ರಹ ತತ್ವ, ರಾಷ್ಟ್ರೀಯತೆ ಹಾಗೂ ಸ್ವಾತಂತ್ರ್ಯ ಭಾವನೆಗಳೊಂದಿಗೆ ದಯಾನಂದ ಸರಸ್ವತಿಯವರ ಆರ್ಯ ಸಂಸ್ಕೃತಿಯ ಸಾರವನ್ನು ಶರ್ಮರು ಆಗ ತಿಳಿದುಕೊಂಡರು. ರಾಷ್ಟ್ರಭಕ್ತಿ, ಶೌರ್ಯ, ಕಿಚ್ಚುಗಳು ಉದ್ದೀಪನಗೊಳ್ಳುವ ವಯಸ್ಸದು.

ಶಿವಾಜಿಯ ತಾಯಿ ಜೀಜಾಬಾಯಿ ಹಾಗೂ ಗುರು ದಾದಾಜಿಕೊಂಡದೇವ ಹೇಗೆ ಶಿವಾಜಿಯಲ್ಲಿ ಸ್ವಾತಂತ್ರ್ಯ ಕಿಚ್ಚನ್ನು ಜ್ವಲಿಸಿದರು ಎಂಬುದನ್ನು ಅರಿತ ಲಕ್ಷ್ಮೀನಾರಾಯಣರು ಶಿವಾಜಿಯಂತೆ ಹೋರಾಡುವ ಕಲ್ಪನೆಯನ್ನು ತಮ್ಮ ಕಣಕಣದಲ್ಲಿ ತುಂಬಿಕೊಂಡರು. ಶಿವಾಜಿಯ ಸಾಹಸ, ದಯಾನಂದ ಸರಸ್ವತಿಯವರ ನಿಷ್ಠೂರ ಧರ್ಮದೃಷ್ಟಿ, ರಾಜಾರಾಮ್ ಮೋಹನರಾಯರ ಆಧುನಿಕ ಶಿಕ್ಷಣದೃಷ್ಟಿ, ತಿಲಕರ ಸ್ವಾತಂತ್ರ್ಯದಂತಹ ಭಾವಗಳೆಲ್ಲ ಮೇಳೈಸಿಕೊಂಡು ಭಾರತೀಯರಲ್ಲಿ ಅದಮ್ಯ ರಾಷ್ಟ್ರೀಯತಾಭಾವ ಜಾಗೃತವಾದ ಸಂಕ್ರಮಣ ಕಾಲವದು. ಶರ್ಮರಂಥವರು ಆದರ

ಪ್ರಭಾವದಿಂದ ಹೊರಗುಳಿಯಲು ಹೇಗೆ ಸಾಧ್ಯ? ಶಿವಾಜಿಯಂತೆ ಹೋರಾಟ ಮನೋಭಾವದ ಶರ್ಮರು ತಮ್ಮ ಜೀವನಕ್ಕಾಗಿ ನೇರ ಬೆಂಗಳೂರಿಗೆ ಹೋದರು. ಬೆಂಗಳೂರಿನಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿದ ಶರ್ಮರು ಅಲ್ಲಿನ ಕಾಂಗ್ರೆಸ್ ನಾಯಕರ ಚಟುವಟಿಕೆಗಳಿಂದ ಸ್ಫೂರ್ತಿಯನ್ನು ಪಡೆದರು. ಅಲ್ಲದೇ, ಸುಭಾಸ್‌ಚಂದ್ರ ಭೋಸರ ಅಪ್ರತಿಮ ಸಾಹಸದಿಂದ ರೋಮಾಂಚನಗೊಳ್ಳುತ್ತಿದ್ದರು.

ಶರ್ಮರವರ ಹೋರಾಟದ ಪುಟಗಳು:

ಲಕ್ಷ್ಮೀನಾರಾಯಣ ಶರ್ಮರು, ಗಾಂಧೀಜಿಯವರು ಭಾರತ್ ಛೋಡೋ ಘೋಷಣೆ ಕೂಗಿದಾಗ ಕೇವಲ ಇಪ್ಪತ್ತನಾಲ್ಕರ ಹರೆಯದವರು. ಅವರು ಸ್ವಾತಂತ್ರ್ಯಕ್ಕಾಗಿ ಸ್ಫೂರ್ತಿಗೊಂಡು ಹೋರಾಟಕ್ಕಾಗಿ ಧುಮುಕಿದರು. ಗಾಂಧೀಜಿಯವರು ಆದೇಶಿಸಿದಂತೆ ಚಳುವಳಿಗಳಲ್ಲಿ ಅಚಲಗೊಂಡ ಸಿಂಹದಂತೆ ಆರ್ಭಟಿಸುತ್ತಿದ್ದರು. ಇನ್ನು ಗಾಂಧೀಜಿಯವರನ್ನು ಆಗಾಖಾನ್ ಅರಮನೆಯಲ್ಲಿ ಬಂಧನಕ್ಕೊಳಪಡಿಸಿದಾಗ, ಶರ್ಮರು ತಮ್ಮ ಜವಾಬ್ದಾರಿಗಳ ಉರುಳುಗಳಲ್ಲಿ ಗಂಟುಗಂಟಾಗಿ ಸಿಲುಕಿ, ಕರ್ತವ್ಯಮಗ್ನರಾಗಿದ್ದರು. ಕಾಂಗ್ರೆಸ್ ಕಛೇರಿಯಲ್ಲಿ ಹಗಲು ಕಸಗುಡಿಸುವ, ಚಾಪೆ ಹಾಕುವ, ನೆಲ ಒರೆಸುವ, ಮಗ್ಗದಿಂದ ಉಣ್ಣೆ ತಯಾರಿಸುವ ಅದನ್ನು ಬೇರೆಯವರಿಗೂ ಕಲಿಸುವ ಕೆಲಸವಾದರೆ, ಸಂಜೆ, ಗಾಂಧೀಜಿಯವರ ಬಿಡುಗಡೆಗಾಗಿ ಜನರಿಗೆ ಬ್ರಿಟಿಷರ ವಿರುದ್ಧ ಬಡಿದೆಬ್ಬಿಸುವ ಕೆಲಸ. ಏಕೆಂದರೆ ಬೆಂಗಳೂರಿನಂತಹ ಮಹಾನಗರದಲ್ಲಿ ಕಟೀಬದ್ಧರಾಗಿದ್ದ ಬ್ರಿಟಿಷರು, "ಡಿಫೆನ್ಸ್ ಆಫ್ ಇಂಡಿಯಾ" ಕಾನೂನಿನಡಿಯಲ್ಲಿ ಹೋರಾಟಗಾರರನ್ನು ಬಂಧಿಸುತ್ತಿದ್ದರು.

ನಂತರ ಶರ್ಮರು ಆಗಾಖಾನ್ ಅರಮನೆಯ ಒಳಗೆ ಪ್ರವೇಶಿಸಲು ನಡೆಸುತ್ತಿದ್ದ ಹೋರಾಟದ ಸಮಯದಲ್ಲಿ, ಅವರಿಗೆ ಹಲವಾರು ಸ್ವಾತಂತ್ರ್ಯ ಹೋರಾಟಗಾರರ ಅದರಲ್ಲೂ ಉತ್ತರ ಕರ್ನಾಟಕದ ಜಿ. ವೆಂಕಟೇಶ್, ವಸಂತಪ್ಪ, ಗಣಪತಿ ಭಟ್ ಮುಂತಾದವರ ಪರಿಚಯವಾಗಿ ಅಮೋಘ ರೋಮಾಂಚನಭರಿತ ಅನುಭವವನ್ನು ಪಡೆದರು. ನಂತರ 1944ರಲ್ಲಿ ಗಾಂಧೀಜಿಯವರನ್ನು ಬಿಡುಗಡೆ ಮಾಡಲಾಯಿತು. ನಂತರ ಬಂದದ್ದು 'ಕ್ವಿಟ್ ಇಂಡಿಯಾ ಚಳುವಳಿ'. ಇದು 1942ರಲ್ಲಿ ಗಾಂಧೀಜಿಯವರ ಮಾರ್ಗದರ್ಶನದಿಂದ ಪ್ರಾರಂಭವಾದಾಗ ಅದರಿಂದ ಪ್ರೇರಿತವಾದ ಶರ್ಮರು ಅದರಲ್ಲಿ ತುಂಬುತ್ಸಾಹದಿಂದ ಭಾಗವಹಿಸಿದರು. ಜನರ ಬಳಿಗೆ ಶೋಲಾಪುರ ಹಾಗೂ ಕಲ್ಲಿನಕೋಟೆಯಲ್ಲಿ ಗಾಂಧೀಜಿಯವರ ಬಿಡುಗಡೆಗೂ ಕೂಡ ಜನರಲ್ಲಿ ಎಚ್ಚರಿಸಿದರು. ಜನರು ಶರ್ಮರ ಈ ಹೋರಾಟ ಮನೋಭಾವದಿಂದ ಪ್ರೇರಿತರಾಗಿ ಹೆಚ್ಚಾಗಿ ಹೋರಾಟದಲ್ಲಿ ಭಾಗವಹಿಸಲು ದಾಪುಗಾಲಿಟ್ಟರು. ಈ ಎಲ್ಲಾ ವಿಚಾರಗಳನ್ನು ಶರ್ಮರು ತಮಗೆ ಪರಿಚಯವಿದ್ದ ಇಂಗ್ಲೀಷ್ ಪೊಲೀಸ್ ಅಧಿಕಾರಿ ನಾರಾಯಣ್ ರಾವ್ ಅವರ ಬಳಿ ಕೊಂಚ ಸಲುಗೆಯಿಂದಲೇ ಹೇಳಿಕೊಳ್ಳುತ್ತಿದ್ದ ಪರಿಣಾಮ, ಚಾ ಕುಡಿಯುತ್ತಿದ್ದ ಹೋಟೇಲಿನಲ್ಲಿಯೇ ಬಂಧನಕ್ಕೊಳಗಾದರು. ಇದರಿಂದಲೂ ಹಾಗೂ ಮುಂದೆ ಈ ವಿಚಾರವಾಗಿ ನ್ಯಾಯಾಲಯದಲ್ಲಿ ಹಾಜರುಪಡಿಸಿದ ಸಂದರ್ಭದಲ್ಲಿ "ನ್ಯಾಯಾಧೀಶರಿಗೆ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಕರೆ ನೀಡಿ, ನ್ಯಾಯಾಧೀಶರಿಗೆ ಬೆನ್ನುತೋರಿಸಿ, ಅವರಿಗೆ ಅವರ ಸಮ್ಮುಖದಲ್ಲಿ ಮಾತನ್ನು ತುಂಡರಿಸಿ, ಮಾತನ್ನು ಆಡಿದಾಗ ಒಪ್ಪಿಗೆ ಸೂಚಿಸದೆ, ನ್ಯಾಯಾಧೀಶರಿಗೆ ಮುಖಭಂಗ ಮಾಡಿದ್ದಕ್ಕಾಗಿ ಅವರಿಗೆ ಪೂನಾದ, ಬೆಂಗಳೂರಿನ ಸೆಂಟ್ರಲ್ ಜೈಲಿನಿಂದ ವರ್ಗಾವಣೆ ಮಾಡಿ ಒಂಬತ್ತು ತಿಂಗಳ ಕಾರಾಗೃಹವಾಸ ಶಿಕ್ಷೆ ಸಿಗುವಂತೆ ಮಾಡಲಾಯಿತು. ಹೀಗೆ ನ್ಯಾಯ ನೀಡುವ ನ್ಯಾಯಾಧೀಶರೇ ಅನ್ಯಾಯದ ಮೆಟ್ಟಿಲನ್ನು ತುಳಿದಾಗ ಅವರು ಮಾಡುತ್ತಿರುವುದು ತಪ್ಪು ಎಂದು ನೇರವಾಗಿ ಬೆರಳು ಮಾಡಿ ತೋರಿಸಿ, ಯಾವುದೇ ಭಯ ಭೇದಗಳಿಗೆ ಒಳಗಾಗದ ಧೀರ ನಾಯಕ ಲಕ್ಷ್ಮೀನಾರಾಯಣ ಶರ್ಮರು.

ಕ್ವಿಟ್ ಇಂಡಿಯಾ ಹೋರಾಟದಲ್ಲಿ ಕಾರಾಗೃಹದಲ್ಲಿದ್ದ ಸಂದರ್ಭ ಮಲೇರಿಯಾ ಕಾಯಿಲೆಗೆ ತುತ್ತಾದಾಗ, ಇನ್ನು ಸಾಯುವುದೇ ನಮ್ಮ ಪಾಲಿಗೆ ಒಲಿದಿರುವ ಏಕಮಾತ್ರ ದಾರಿ ಎಂದು ಅವರು ಹತಾಶೆಯಲ್ಲಿರುವಾಗ ಅವರನ್ನು ಸಾವಿನ ಮನೆಬಾಗಿಲಿನಿಂದ ಹಿಂದಕ್ಕೆ ಕರೆತಂದವರು ಬುರ್ಲಿ ಮಾಸ್ತರರು.

ಅದಾದ ಬಳಿಕ ಅವರು "ಮೈಸೂರು ಚಲೋ" ಹೋರಾಟದಲ್ಲಿ ಭಾಗವಹಿಸಿದರು. ಮೈಸೂರು ಚಲೋ ಹೋರಾಟವು 1947ರಿಂದ ಪ್ರಾರಂಭವಾಗಿ 41 ದಿನಗಳ ಕಾಲ ನಡೆಯಿತು. ಶರ್ಮರು ಈ ಹೋರಾಟದಲ್ಲಿ ತಮ್ಮೊಂದಿಗೆ ಹದಿನೈದು ಜನರ ಗುಂಪನ್ನು ಕಟ್ಟಿಕೊಂಡು ಜನರ ಮನೆಗಳಿಗೆ ಹೋಗಿ ಅವರ ಸಂಸ್ಥಾನದ ರಾಜರು ಮಾಡುವ ಹಾಗೂ ದಿವಾನರಿಂದಾಗುವ ದೌರ್ಜನ್ಯವನ್ನು ಹೇಳಿ ಹೋರಾಟಕ್ಕೆ ಪ್ರೇರೇಪಿಸಿದರು. ಇವರ ಮಾತಿಗೆ ಒಲ್ಲೆ ಎಂದವರನ್ನು ಶ್ಯಾನುಭೋಗರಲ್ಲಿಗೆ ಕಳುಹಿಸಿ ಅವರ ಮನೆಗಳ ಪತ್ರಗಳನ್ನು ಅದಲುಬದಲು ಮಾಡುವ ಬೆದರಿಕೆಯೊಡ್ಡಿದಾಗ ಜನರು ಇವರ ಮಾತಿಗೆ ಒಪ್ಪಲೇಬೇಕಾಯಿತು. ಇವೆಲ್ಲದರ ಫಲವಾಗಿ ನಲವತ್ತೊಂದು ದಿನಗಳ ಬಳಿಕ ಮೈಸೂರಿನ ರಾಜರು, ಎಲ್ಲಾ ಸತ್ಯಾಗ್ರಹಿಗಳ ಬೇಡಿಕೆಗಳನ್ನು ಈಡೇರಿಸುತ್ತಾ, ಮೈಸೂರು ಸಂಸ್ಥಾನವನ್ನು ಭಾರತದೊಂದಿಗೆ ವಿಲೀನ ಮಾಡಲು ಒಪ್ಪಿಗೆ ಸೂಚಿಸಿದರು.

ಭೂದಾನ ಚಳುವಳಿ:

ಗಾಂಧೀಜಿಯವರ ಪರಮಶಿಷ್ಯ ವಿನೋಬಾ ಭಾವೆಯವರು, ದಲಿತರ, ನಿರ್ಗತಿಕರ ಏಳಿಗೆಗಾಗಿ ಭೂದಾನ ಚಳುವಳಿ ಕೈಗೊಂಡಾಗ

ಶರ್ಮರೂ ಕೂಡ ಅದರಲ್ಲಿ ಭಾಗವಹಿಸುವುದರೊಂದಿಗೆ ತಮ್ಮ ದಲಿತರ, ಬಡಜನರ ಏಳಿಗೆಗೋಸ್ಕರ ಹೋರಾಟವನ್ನು ಕೈಗೊಂಡರು.

"ನಮ್ಮ ದೇಶದಲ್ಲಿ ರಾಜಕೀಯ ಪಕ್ಷಗಳನ್ನು ನಂಬುವುದರ ಬದಲು, ದೇವರನ್ನು ನಂಬಿದ್ದರಿಂದ ಬಡವರು ಇನ್ನೂ ಜೀವಂತದಿಂದಿದ್ದಾರೆ" ಎಂದು ನುಡಿದ ಶರ್ಮರು, ಯಾವುದೇ ಭೂಮಿ ಇಲ್ಲದ, ಹಾಗೂ ತುಂಬಾ ಗೇಣಿಯನ್ನು ಕಟ್ಟುವ ಬಡಜನರಿಗಾಗಿ ಅವರು ಈ ಭೂದಾನ ಚಳುವಳಿಯನ್ನು ಮಾಡಲು ಕಟೀಬದ್ಧರಾದರು.

ಲಕ್ಷ್ಮೀನಾರಾಯಣ ಶರ್ಮರು ಇದಕ್ಕಾಗಿ ದಿ. ಎಂ. ವಾಸುದೇವಾಚಾರ್ಯರೊಂದಿಗೆ, ಬಳ್ಳಾರಿಯಲ್ಲಿ "ಸರ್ವೋದಯ ಗ್ರಾಮ" ಚಳುವಳಿಯಲ್ಲಿ ಅವರ ಬೆನ್ನುಲುಬಾಗಿ ನಿಂತು, ಅವರ ಭೂದಾನ ಚಳುವಳಿಯ ಹೋರಾಟದಲ್ಲಿ ಅವರಿಗೆ ಪೂರ್ಣ ಬೆಂಬಲ ನೀಡಿದರು. ಇವರು ಭೂದಾನ ಚಳುವಳಿಯಲ್ಲಿ ಮಾಡಿದ ಅಪ್ರತಿಮ ಹೋರಾಟದಲ್ಲಿ ಮೂಡಿಸಿದ ಛಾಪು ಸರ್ವೋದಯ ಗ್ರಾಮದ ಹಲವಾರು ನಿವಾಸಿಗಳನ್ನು ಪ್ರೇರೇಪಿಸಿತು ಶರ್ಮರೆಡೆಗೆ.

ಈ ಎಲ್ಲಾ ಚಳುವಳಿಯ ನಂತರ ಒಂದು ಸಾರ್ಥಕ ಭಾವನೆಯ ನಿರ್ಮಲ ಮನಸ್ಸಿನೊಂದಿಗೆ ಲಕ್ಷ್ಮೀನಾರಾಯಣ ಶರ್ಮರು, ಯಾವುದೋ ಗೊತ್ತಿಲ್ಲದ ಊರಿನಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಮಾಡಿದ್ದು ಸಾಕೆಂದು ಮಾಡಿದ ಬಗ್ಗೆಯೂ ಕೂಡ ಸಂತೃಪ್ತಿಗೊಂಡು, ಇನ್ನು ಮುಂದಿನ ಅಭಿವೃದ್ಧಿಯ ಕೆಲಸದ ನಡೆ ಅವರ ಹುಟ್ಟೂರಿನಲ್ಲೇ ಮಾಡುವುದು ಒಳಿತೆಂದು ಅರಿತ ಶರ್ಮರು, 1949ರಲ್ಲಿ ತಮ್ಮ ಹುಟ್ಟೂರಾದ ಕಟಪಾಡಿಗೆ ಬಂದರು.

ಶರ್ಮರ ವ್ಯಕ್ತಿತ್ವ:

ಶರ್ಮರು ಗಾಂಧೀ ನಡೆಯ ಶ್ರೀಮಂತ ಮನಸ್ಸಿನ, ಸಹೃದಯದ ಜನಮೆಚ್ಚಿದ, ಜಗಮೆಚ್ಚಿದ ಧೀಮಂತ ನಾಯಕ. ಶರ್ಮರು ತಮ್ಮ ನಡೆಯಲ್ಲಷ್ಟೇ ಅಲ್ಲದೆ, ತಮ್ಮ ಉಡುಗೆ-ತೊಡುಗೆಯಲ್ಲೂ ಗಾಂಧೀಜಿಯವರ ಹಿಂಬಾಲಕ. ಅವರು ಕೇವಲ ಎರಡು ಜೊತೆ ಖಾದಿ ಬಟ್ಟೆ, ಅರ್ಧ ತೋಳಿನ ಶರ್ಟು ಹಾಗೂ ಖಾದಿ ಧೋತಿಯನ್ನು ಧರಿಸುತ್ತಿದ್ದರು. ಇನ್ನು ಶರ್ಟು ಹರಿಯುತ್ತೆ ಎನ್ನುವ ಸಂದರ್ಭದಲ್ಲಿ ಮಾತ್ರ ಅವರು ಇನ್ನೊಂದು ಜೊತೆ ಬಟ್ಟೆಯನ್ನು ತಮಗಾಗಿ ಖರೀದಿಸುತ್ತಿದ್ದರು.

ಶಿಕ್ಷಕರೆಂದರೆ ಶರ್ಮರಂತಿರಬೇಕು:

ಶರ್ಮರು ಕಟಪಾಡಿಗೆ 1949ರಲ್ಲಿ ಬಂದಾಗ ಅವರು ಯಾವುದೇ ದಾಖಲೆಗಳಿಲ್ಲದೆ, ಮಂಚಕಲ್ಲಿನ ಹಿಂದೂ ಪ್ರೌಢಶಾಲೆಯಲ್ಲಿ ಕೇವಲ ತಮ್ಮ ವಿಶ್ವಾಸದ ಹಾಗೂ ಪ್ರಾಮಾಣಿಕ ವ್ಯಕ್ತಿತ್ವದಿಂದಾಗಿ ಹಿಂದಿ ಪಂಡಿತರಾಗಿ ತಮ್ಮ ಶಿಕ್ಷಕ ವೃತ್ತಿಗೆ ಮುನ್ನುಡಿ ಇಟ್ಟರು. ಇದರೊಂದಿಗೆ 1950ರಲ್ಲಿ ಕೌಡೂರು ಪುರೋಹಿತ ಮನೆತನದ ರಂಗಭಟ್ಟರ ಮಗಳು ಶಾಂತಾರನ್ನು ಮದುವೆಯಾದರು ಶರ್ಮರು. ಶರ್ಮರಿಗೆ ಶಾಂತಾ ಅವರು ಉತ್ತಮ ಸಂಗಾತಿಯಾಗಿ ಅವರ ಅಸ್ಪೃಶ್ಯರ ಬಗೆಗಿನ ಭಾವನೆಗಳಿಗೆ ಯಾವುದೇ ಪ್ರತಿರೋಧವನ್ನು ವ್ಯಕ್ತಪಡಿಸದೆ, ಅವರ ಎಲ್ಲಾ ಕೆಲಸದಲ್ಲೂ ಬೆನ್ನಲುಬಾಗಿದ್ದರು. ಇನ್ನು ಶರ್ಮರಿಗೆ ಎಂಟು ಜನ ಮಕ್ಕಳು. ಐದು ಜನ ಹೆಣ್ಣು ಮಕ್ಕಳು ಹಾಗೂ ಮೂರು ಜನ ಗಂಡು ಮಕ್ಕಳು. ಶಶಿಧರ್ ಶರ್ಮ ನಿವೃತ್ತ ಬ್ಯಾಂಕ್ ಮ್ಯಾನೇಜರರು, ರಾಮಕೃಷ್ಣ ಶರ್ಮ ಈಗ ಉಡುಪಿ ಜಿಲ್ಲಾ ರೈತರ ಸಂಘದ ಅಧ್ಯಕ್ಷರು, ರಾಧಾಕೃಷ್ಣ ಶರ್ಮ ನಿಟ್ಟೆಯ ಎಂ.ಬಿ.ಎ. ಕಾಲೇಜಿನ ಪ್ರೊಫೆಸರ್ ಹಾಗೂ ಹೆಣ್ಣು ಮಕ್ಕಳಾದ ಶಾರದಾ, ಸುನಂದಾ, ಗೀತಾ ಸೇರಿದಂತೆ ಮತ್ತಿಬ್ಬರು ಗೃಹಿಣಿಯರು. ಹೀಗೆ ಸ್ವಾತಂತ್ರ್ಯ ಹೋರಾಟಗಾರನಾದರೂ ಕೂಡ, ತಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ಯಾವುದೇ ಕಡಿಮೆ ಮಾಡದೇ, ತಂದೆಯ ಸ್ಥಾನದಲ್ಲೂ ಸೈ ಎನಿಸಿಕೊಂಡವರು ಲಕ್ಷ್ಮೀನಾರಾಯಣ ಶರ್ಮರು.

1975ರಲ್ಲಿ ಶರ್ಮರು ತಮ್ಮ ಹಿಂದಿ ಪಂಡಿತ ವೃತ್ತಿಯಿಂದ ನಿವೃತ್ತರಾದರು. ಸುಮಾರು 26 ವರ್ಷಗಳ ಸುದೀರ್ಘ ವೃತ್ತಿಗೆ ಕಾರಣರಾಗಿ ಆ ವೃತ್ತಿಗೊಂದು ಗೌರವವನ್ನಿಟ್ಟರು. ಶರ್ಮರು ತಮ್ಮ ವೃತ್ತಿಯಲ್ಲಿ ಉತ್ತಮ ಚಟುವಟಿಕೆ ಕ್ರಿಯಾಶೀಲ ಶಿಕ್ಷಕರೆಂದೇ ಎಲ್ಲರಿಗೂ ಚಿರಪರಿಚಿತರು. ಶರ್ಮರ ಪಾಠ ವೈಖರಿಯನ್ನು ಅವರ ಶಿಷ್ಯರು ಬಹಳವಾಗಿ ಮೆಚ್ಚುತ್ತಿದ್ದರು. ಶರ್ಮರು ತಮ್ಮ ಶಿಷ್ಯರ ಮೇಲೆ ಎಷ್ಟು ಕಾಳಜಿ ತೋರಿಸುತ್ತಿದ್ದರೋ ಅವರ ಶಿಷ್ಯರೂ ಕೂಡಾ "ಗುರುಭ್ಯೋ ನಮಃ" ಎಂಬ ವಾಣಿಯಂತೆ ಶರ್ಮರಿಗೆ ಕೊಡುತ್ತಿದ್ದ ಹಾಗೂ ಅವರ ಬಗೆಗೆ ಇಟ್ಟುಕೊಂಡಿದ್ದ ಗೌರವ ಬೆಟ್ಟದಷ್ಟು. 1972ರಲ್ಲಿ ಶರ್ಮರಿಗೆ ಕೇಂದ್ರ ಸರ್ಕಾರವು ತಾಮ್ರ ಪತ್ರವನ್ನು ನೀಡುವುದಾಗಿ ಘೋಷಿಸಿತು. 25 ವರ್ಷದ ನಂತರವಾದರೂ ಶರ್ಮರ ಹೋರಾಟವು ಸರ್ಕಾರದ ಕಣ್ಣಿಗೆ ಬಿದ್ದಿತು. ಮೈಸೂರು ರಾಜ್ಯದಿಂದ ಆಯ್ದ 30 ಮಂದಿಯಲ್ಲಿ ಶರ್ಮರು ಕೂಡ ಒಬ್ಬರಾಗಿದ್ದರು. ಆಗಿನ ಪ್ರಧಾನಮಂತ್ರಿ ಇಂದಿರಾಗಾಂಧಿಯವರು ಆಗಸ್ಟ್ 15ರಂದು ಶರ್ಮರಿಗೆ ತಾಮ್ರ ಪತ್ರವನ್ನು ನೀಡಿ ಗೌರವಿಸಿದರು. ನಂತರ ಇವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯೂ ದೊರಕಿತು. ಉಚಿತ ರೈಲ್ವೇ ಪಾಸ್ ಹಾಗೂ ಬಸ್ ಪಾಸ್‌ಗಳಿಂದ ಶರ್ಮರಿಗೆ ಸಮಗ್ರ ಭಾರತದ ಸಾಂಸ್ಕೃತಿಕ, ವೈಚಾರಿಕತೆಗಳ ಮಗ್ಗುಲುಗಳನ್ನು ನೋಡುವ ಸುಯೋಗವು ದೊರಕಿತು. "ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ" ಎನ್ನುವಂತೆ, ಈ ಅವಕಾಶಗಳನ್ನು ಉಪಯೋಗಿಸಿದ ಶರ್ಮರು ಅಲ್ಲೂ ಬೇರೆ ಬೇರೆ ಊರುಗಳಿಗೆ ಹೋಗಿ ಹಿಂದಿ ಭಾಷೆಯ ಏಳ್ಗೆಗಾಗಿ ದುಡಿಯುವ ಮಹತ್ಕಾರ್ಯವನ್ನು ಮಾಡುತ್ತಿದ್ದರು.

ಕೃಷಿ ಋಷಿಯ ಜೀವನ:

"ಶಂಕರಪುರ ಮಲ್ಲಿಗೆಯ ಪಿತಾಮಹರೆಂದೇ" ಹೆಸರುವಾಸಿಯಾದ ಶರ್ಮರ ವ್ಯಕ್ತಿತ್ವ ಹಾಗೂ ಘನಸ್ತಿಕೆಯ ಬಗೆಗೆ ತಿಳಿದುಕೊಳ್ಳಬೇಕಾದರೆ, ಮೊದಲು ಅವರ ನೆಲದೊಟ್ಟಿಗೆ ಸಂಬಂಧವನ್ನು ಅರಿಯಬೇಕು. ಶರ್ಮರು ಶಾಲಾ ಶಿಕ್ಷಕನ ಜವಾಬ್ದಾರಿಯೊಂದಿಗೆ ಒಬ್ಬ ಆದರ್ಶಪ್ರಾಯ, ಪಳಗಿದ ಕರ್ಮಯೋಗಿ, "ಕೈ ಕೆಸರಾದರೆ ಬಾಯಿ ಮೊಸರು" ಎಂಬ ನುಡಿ ಅರಿತಿದ್ದ ಅವರು ಸಾತಂತ್ರ್ಯ ಹೋರಾಟಕ್ಕಾಗಿ ಅವರಿಗೆ ಸರ್ಕಾರದಿಂದ ಕೊಡಲಾಗಿದ್ದ ಹತ್ತು ಎಕರೆ ಭೂಮಿಯಲ್ಲಿ ಮಲ್ಲಿಗೆ ಕೃಷಿ, ತೋಟಗಾರಿಕೆಯನ್ನು ಮಾಡಿ ಕೃಷಿನಾಯಕ ಎನಿಸಿಕೊಂಡವರು. ಬಂಟಕಲ್ಲಿನಿಂದ ಐದು-ಆರು ಕಿಲೋಮೀಟರ್ ದೂರದ ಮಂಚಕಲ್ಲಿಗೆ ಬರುವ ಮೊದಲು ಇವರು ತಮ್ಮ ಕೈಗಾರಿಕೆಯ, ತೋಟದ ಕೆಲಸಗಳನ್ನು ಮಾಡಿಯೇ ಬರುತ್ತಿದ್ದರು.

"ಈಗಿನ ಜನರು ಒಳ್ಳೆಯದನ್ನು ಮರೆತುಬಿಡುತ್ತಿದ್ದಾರೆ ಹಾಗೂ ಕೆಟ್ಟದ್ದನ್ನು ಒಳ್ಳೆಯದು ಎಂದು ತಿಳಿದು ಅದನ್ನೇ ಮಾಡುತ್ತಿದ್ದಾರೆ" ಎಂದು ಹೇಳಿದವರು ಶರ್ಮರು. ತಮ್ಮ ಕೃಷಿ ಚಟುವಟಿಕೆಗಳಲ್ಲಿ ಆಧುನಿಕ ಕೈಗಾರೀಕರಣದ ಕೃಷಿ ಸಂಬಂಧಿ ಚಟುವಟಿಕೆಗಳನ್ನು ಮಾಡುತ್ತಿದ್ದರು. 50ರ ದಶಕದಲ್ಲೆ ತಮ್ಮ ಕೃಷಿಯಲ್ಲಿ ಅಗತ್ಯ ಗೊಬ್ಬರ ಹಾಗೂ ರಾಸಾಯನಿಕ ವಸ್ತುಗಳನ್ನು ಧೈರ್ಯದಿಂದ ಹಾಕುತ್ತಿದ್ದರು. ಇನ್ನು ಇವರ ಈ ಕೃಷಿ ವಿಧಾನಗಳು ಬೇರೆಯವರಿಗೆ ಆದರ್ಶಪ್ರಾಯವಾಗಿರುತ್ತಿದ್ದವು. ಇವರು ಕಲ್ಪವೃಕ್ಷ ಹಾಗೂ ನೀರಿನ ವ್ಯವಸ್ಥೆಯಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಮಾಡುತ್ತಿದ್ದರು. ತೋಟಗಾರಿಕೆಯಲ್ಲಿ ಕಾಳುಮೆಣಸು ಹಾಗೂ ವೀಳ್ಯದೆಲೆ ಬೆಳೆಯುವುದರೊಂದಿಗೆ, ರೈತನ ಶ್ರಮಕ್ಕೆ ಹಾಗೂ ಸಮಯಕ್ಕೆ ತಕ್ಕ ಆದಾಯವನ್ನು ಪಡೆಯಬಹುದೆಂದು ತೋರಿಸಿಕೊಟ್ಟಿದ್ದೂ ಅಲ್ಲದೆ, ಕೃಷಿಯೊಂದಿಗೆ ಹೈನುಗಾರಿಕೆ, ಜೇನುಸಾಕಣೆ ಹಾಗೂ ಬಾವಿ ತೋಡುವಂತಹ ಕಾರ್ಯಗಳನ್ನು ಮಾಡಿತೋರಿಸಿ ಸೈ ಎನಿಸಿಕೊಂಡಿದ್ದಾರೆ.

ಮಾನವರ ನಡುವೆ ಇದ್ದ ದಯಾಮೂರ್ತಿ ಬಂಟಕಲ್ಲು ಲಕ್ಷ್ಮೀನಾರಾಯಣ ಶರ್ಮರು:

ಇವರು ತಮಗೆ ಬರುತ್ತಿದ್ದ ಪೆನ್ಷನ್ (ಪಿಂಚಣಿ)ಯನ್ನು ತಮ್ಮಲ್ಲೇ ಇಟ್ಟುಕೊಳ್ಳದೆ ಅನೇಕ ಬಡಬಗ್ಗರಿಗೆ ಸಹಾಯ ಮಾಡುವ ಮೂಲಕ ಕಲಿಯುಗ ಕರ್ಣನ ರೂಪದಂತೆಯೇ ಘನಸ್ತಿಕೆಯನ್ನು ಕಂಡುಕೊಂಡರು, ಹಾಗೆಯೇ ತಾವು ಬೆಳೆಯುತ್ತಿದ್ದ ಹಣ್ಣುಹಂಪಲುಗಳನ್ನು ಮಾರದೆ, ಅದನ್ನು ಸಂಬಂಧಿಕರಿಗೆ, ಮಕ್ಕಳಿಗೆ ಕೊಟ್ಟು ತಾವೂ ತಿಂದು, ಉಳಿದದ್ದನ್ನು ಮರದಲ್ಲೇ ಪ್ರಾಣಿಪಕ್ಷಿಗಳಿಗೆ ತಿನ್ನಲು ಬಿಡುತ್ತಿದ್ದರು ಎನ್ನುವಾಗ ಇಂತಹವರೂ ಕೂಡ ನಮ್ಮ ನಡುವೆ ಇದ್ದಾರಲ್ಲಾ ಎನ್ನುವ ಆಶ್ಚರ್ಯಕರ ಸನ್ನಿವೇಶ ಎದುರಾಗುವುದು ಸಹಜ. ಇಂತಹ ಮನೋಸ್ಥಿತಿಯನ್ನು ಉಳ್ಳವರಾಗಿದ್ದರು ಲಕ್ಷ್ಮೀನಾರಾಯಣ ಶರ್ಮರು.

ಲಕ್ಷ್ಮೀನಾರಾಯಣ ಶರ್ಮರು ಇಂತಹ ಉತ್ತಮ ವಿಚಾರಗಳಿಂದ ತಮ್ಮ ಆರೋಗ್ಯವನ್ನು ಕಾಪಾಡಿಕೊಂಡು, ನೈಸರ್ಗಿಕ ತಿನಿಸುಗಳ ಆಹಾರದ ಸಮುಚ್ಚಯದಲ್ಲಿ ನಮಗೆ ಪ್ರತ್ಯಕ್ಷದರ್ಶಿಯಾಗಿದ್ದಾರೆ. ತಮ್ಮ 90ರ ಹರೆಯದಲ್ಲೂ ಯುವಕರನ್ನು ನಾಚಿಸುವಂತ ಆರೋಗ್ಯವನ್ನು ತಮ್ಮ ಸರಳ ಜೀವನಶೈಲಿಯಿಂದಾಗಿ ಆಡಂಬರ ರಹಿತ ಮನೋವೃತ್ತಿಯಿಂದಾಗಿ ಸಾಧಿಸಿತೋರಿಸಿದ್ದಾರೆ ಶರ್ಮರು.

ಹೀಗೆ ಗಾಂಧೀಜಿಯವರ ಆದರ್ಶಗಳನ್ನು ಕಣಕಣದಲ್ಲಿ ಬೆಸೆದು, ಅದರ ಮೂಲಕ ಅವರ ಪ್ರತಿಪಾದನೆಗಳ ಸಾಕ್ಷಾತ್ಕಾರದ ಮೂರ್ತಿಯೇ ಆದವರು ಶರ್ಮರು. ಒಂದು ಸಂದರ್ಶನದಲ್ಲಿ "ನಮ್ಮ ಭಾರತ ದೇಶವು ಸಂಪದ್ಭರಿತವಾಗಿದೆ, ಈ ಸಂಸ್ಕೃತಿಯ ನಾಡಿನಲ್ಲಿ ಹುಟ್ಟಿದ ನಾವೇ ಪುಣ್ಯವಂತರು. ಭಾರತಾಂಬೆಯು ಎಂದೆಂದಿಗೂ ಬಡವಳಲ್ಲ, ಬಡವಳಾಗುವವಳೂ ಅಲ್ಲ. ದೇಶದಲ್ಲಿರುವ ಭ್ರಷ್ಟ ರಾಜಕಾರಣಿಗಳಿಂದ ನಮ್ಮ ದೇಶ ನಷ್ಟವಾಗುತ್ತಿದೆ" ಎಂದು ಹೇಳಿ ಭಾರತದ ಸುರಕ್ಷತೆಯೆಡೆಗೆ ರಕ್ಷಕರಾಗುವಂತೆ ನಮ್ಮೆಲ್ಲರನ್ನು ಬಡಿದೆಬ್ಬಿಸಿದವರು, ಯುವಜನತೆಗೆ ಆದರ್ಶಮೂರ್ತಿ, ಬಡಜನರಿಗೆ ದಾರಿದೀಪವಾದ, ಕೃಷಿಯಲ್ಲೆ ತಮ್ಮ ಭವಿಷ್ಯವನ್ನು ರೂಪಿಸಿಕೊಂಡ, ಕಲಿಯುಗದ ಕೆಚ್ಚೆದೆಯ ರಣಧೀರ ನಾಯಕನಿಗೊಂದು ನನ್ನ ಮನದಾಳದ ನಮನಗಳು.

"ಜೈ ಹಿಂದ್ ಜೈ ಕರ್ನಾಟಕ ಮಾತೆ"

ಯುವಜನತೆ ಮತ್ತು ಸಂಸ್ಕೃತಿ

✍ **ಶಿಲ್ಪಾ ಎಸ್.,** ತೃತೀಯ ಬಿ.ಎ.

"ದೇಶದ ಸಂಸ್ಕೃತಿಯಲ್ಲಿ ಆ ದೇಶ ವಾಸಿಗಳ ಸಂಸ್ಕಾರ ಅಡಗಿರುತ್ತದೆ". ಭಾರತೀಯ ಸಂಸ್ಕೃತಿಯು ಪುರಾತನ ಇತಿಹಾಸವುಳ್ಳದ್ದು, ವಿವಿಧ ರಚನೆಗಳಿಂದ ಕೂಡಿದ್ದು, ವಿಭಿನ್ನ ರೀತಿಯ ಆಚಾರ-ವಿಚಾರ, ಸಂಪ್ರದಾಯ, ಪದ್ಧತಿಗಳನ್ನು ಒಳಗೊಂಡಿದೆ, ಪ್ರಾಚೀನ ಪರಂಪರೆಯನ್ನು ಒಳಗೊಂಡಿದೆ. ಆದ್ದರಿಂದ ನಮ್ಮ ಸಂಸ್ಕೃತಿಯೂ ವೈವಿಧ್ಯಮಯ ಪ್ರಪಂಚವಾಗಿದೆ. ಸರ್ವಧರ್ಮಾಭಿಮಾನ ಪರಧರ್ಮ ಸಹಿಷ್ಣುತೆ ನಮ್ಮ ಸಂಸ್ಕೃತಿಯ ಲಕ್ಷಣವಾಗಿದೆ.

ಭಾರತೀಯ ಸಂಸ್ಕೃತಿ ಎಂದರೆ ಕೇವಲ ಭೌಗೋಳಿಕ ನಕ್ಷೆಯಲ್ಲಿ ಇದೊಂದು ವಿವಿಧ ರೀತಿಯ ಜನಾಂಗ, ಬುಡಕಟ್ಟು, ಜಾತಿ-ಧರ್ಮಗಳ, ಸರ್ವ ಜನಾಂಗದ ಶಾಂತಿಯ ತೋಟವಾಗಿದೆ. ನಮ್ಮ ಸಂಸ್ಕೃತಿಯು ಇಡೀ ವಿಶ್ವಕ್ಕೆ ಮಾದರಿಯಾಗಿದೆ. ಜಗತ್ತಿಗೆ ಕತ್ತಲೆಂಬ ಹಸಿವನ್ನು ನೀಗಿಸಿ ಬೆಳಕು, ಅನ್ನವನ್ನು ನೀಡಿದ ಸಂಸ್ಕೃತಿ ನಮ್ಮ ಭಾರತೀಯ ಸಂಸ್ಕೃತಿಯಾಗಿದೆ. ನಮ್ಮ ಸಂಸ್ಕೃತಿಯೂ ಉದಾತ್ತವಾದದ್ದು, ನಾವು ಭಾರತೀಯರು ಅದೃಷ್ಟವಂತರು. ಸಂಸ್ಕೃತಿ ಎಂದರೇನು ಎಂದು ಕೇಳಿದರೆ ಒಂದು ರಸ್ತೆಯಲ್ಲಿ ಕಲ್ಲು ಬಿದ್ದರೆ ಅದನ್ನು ಮೂವರು ನೋಡುತ್ತಾರೆ. ಅದರಲ್ಲಿ ಮೊದಲನೆಯವನು ಇದೊಂದು ಕಲ್ಲು ಎಂದು ಮುಂದೆ ಹೋಗುತ್ತಾನೆ. ಎರಡನೆಯವನು ಇದು ನಿಷ್ಪ್ರಯೋಜಕ ಕಲ್ಲು ಎಂದು ಪುಡಿ ಪುಡಿ ಮಾಡಿ ಇದನ್ನು ಎಂದು ಆದೇಶಿಸುತ್ತಾನೆ. ಆದರೆ ಮೂರನೆಯವನು ಅದನ್ನು ಕೆತ್ತಿ ಸುಂದರವಾದ ವಿಗ್ರಹ ಮಾಡಿ ದೇವರಾಗಿ ಪೂಜಿಸುತ್ತಾನೆ. ಅಂದರೆ ಇದರಲ್ಲಿ ಮೊದಲನೆಯವನು ಪ್ರಕೃತಿ, ಎರಡನೆಯವನು ವಿಕೃತಿ, ಮೂರನೆಯವನೇ ಸಂಸ್ಕೃತಿ. ನಮ್ಮಲ್ಲಿರುವ ವಿವಿಧ ಚಟುವಟಿಕೆಗಳ ಸಾರವೇ ಸಂಸ್ಕೃತಿ. ಭಾರತೀಯ ಸಂಸ್ಕೃತಿಯು ಅತ್ಯಂತ ದೀರ್ಘವಾದ ಪರಂಪರೆಯನ್ನು ಒಳಗೊಂಡಿದೆ. ಸಿಂಧೂ ನಾಗರೀಕತೆಯಿಂದ ಹೊರಟುನಿಂತು ಭಾಗ್ಯದ ಬಳೆಗಾರ ಹೋಗಿ ಬಾ ನನ್ನ ತವರೀಗೆ ಎಂದು ಹಾಡುವ ಆರ್ಯ ನಾರಿಯರ ಕೈಬಳೆ ನಾದ-ನಿನಾದಗಳವರೆಗೂ ಮುಂದುವರೆಯುತ್ತಲೇ ಇದೆ, ಈಗಲೂ ಮುಂದುವರಿಯುತ್ತಿದೆ. ಇಡೀ ಜಗತ್ತಿನಲ್ಲಿರುವ ಉತ್ತಮ ವಿಷಯಗಳು ನಮ್ಮಲ್ಲಿಗೆ ಹರಿದು ಬರಲಿ ಎಂಬುದೇ ನಮ್ಮ ಸಂಸ್ಕೃತಿ. ಭಾರತೀಯ ಸಂಸ್ಕೃತಿಯು ಕೌಟುಂಬಿಕ ವ್ಯವಸ್ಥೆ ಎಂದರೇನು, ಜೀವನದ ಮೌಲ್ಯಗಳೇನು, ನೈತಿಕ ಮೌಲ್ಯಗಳೇನು ಎಂಬುದನ್ನು ಮತ್ತು ಹಲವಾರು ವಿಭಿನ್ನ ಸಾರಗಳನ್ನು ತಿಳಿಸಿದ ಸಂಸ್ಕೃತಿಯಾಗಿದೆ. ನಮ್ಮ ಸಂಸ್ಕೃತಿ ನಮ್ಮ ಹೆಮ್ಮೆ. ನಾವು ಇತ್ತೀಚಿನ ದಿನಗಳಲ್ಲಿ ನೋಡಿದಾಗ ನಮ್ಮ ಸಂಸ್ಕೃತಿಯ ಬಗ್ಗೆ ವಿಷಾದವಾಗುತ್ತದೆ. ಇಂದು ನಾವು ಸ್ವದೇಶಿಯರೂ ಆಗಿರದೇ ವಿದೇಶಿಯರೂ ಆಗಿರದೆ, ಪರದೇಶಿಯರಾಗಲು ಇಷ್ಟಪಡದೆ ನಮ್ಮ ಬದುಕು ಅಧೋಗತಿಯಾಗಿದೆ. ಆದ್ದರಿಂದ **ನಾವು ನಮ್ಮವರಾಗಿ ಬದುಕಬೇಕು. ಪರರ ಸಂಸ್ಕೃತಿಯನ್ನು ಪ್ರೀತಿಸು, ನಿನ್ನ ಸಂಸ್ಕೃತಿಯಲ್ಲಿ ಜೀವಿಸು** ಎಂಬ ಮಾತಿನಂತೆ ನಾವು ನಾವಾಗಿರಬೇಕು. ನಮ್ಮ ಸಂಸ್ಕೃತಿಯ ಮೇಲಿನ ಹೆಮ್ಮೆ ಎಂದಿಗೂ ಆರದ ಹಣತೆಯಾಗಿರಬೇಕು. ಪೂರ್ವಜರು ನಮಗೆ ಏನು ನೀಡಿದ್ದಾರೆ ಎಂಬುದು ಸಂಸ್ಕೃತಿಯಲ್ಲ, ನಾವು ಮುಂದಿನ ಪೀಳಿಗೆಗೆ ನೀಡಲೇಬೇಕಾದ ಅತ್ಯಮೂಲ್ಯ ಸಂಪತ್ತು ಸಂಸ್ಕೃತಿಯಾಗಿದೆ. ಆದರೆ ಇಂದಿನ ದಿನಗಳಲ್ಲಿ ನಮ್ಮ ಸಂಸ್ಕೃತಿಯ ಬಗ್ಗೆ ಇಂದಿನ ಯುವಜನತೆಗೆ ಪ್ರಜ್ಞೆ ಇಲ್ಲವಾಗಿದೆ. ಆಧುನೀಕರಣದ ಹೆಸರಲ್ಲಿ ಅವರು ಸಂಸ್ಕೃತಿಯನ್ನು ಪಾತಾಳಕ್ಕೆ ತಳ್ಳಿ ಹಾಕುತ್ತಿದ್ದಾರೆ. ಹಿಂದಿನ ಸಂಸ್ಕೃತಿಗಳೆಲ್ಲವೂ ನಮ್ಮ ಪೂರ್ವಜರ ಮೌಢ್ಯಗಳು ಎಂಬ ಭ್ರಮೆಯಲ್ಲಿ ಇಂದಿನ ಯುವಜನತೆ ಮುಳುಗಿ ಹೋಗಿದ್ದಾರೆ. ಅವರ ಆಚಾರ-ವಿಚಾರ, ಉಡುಗೆ-ತೊಡುಗೆ ಎಲ್ಲವೂ ಪಾಶ್ಚಾತ್ಯದತ್ತ ಹೋಗಿದೆ. ಇಂದಿನ ಯುವಜನತೆ ಸಂಸ್ಕೃತಿಯನ್ನು ಮರೆತಿದ್ದರಿಂದ ಅವರಿಗೆ ಒಳ್ಳೆಯ ಸಂಸ್ಕಾರದ ಜ್ಞಾನವೂ ಇಲ್ಲವಾಗಿದೆ. ಹಿಂದಿನ ಕಾಲದಲ್ಲಿ ಗುರುಹಿರಿಯರಿಗೆ ಗೌರವ ನೀಡುವುದು ಮಕ್ಕಳ ಒಂದು ಸಂಸ್ಕಾರ ಆಗಿತ್ತು. ಆದರೆ ಇಂದು ಅವೆಲ್ಲವೂ ಕಾಣದಾಗಿವೆ. ಶಾಲಾ-ಕಾಲೇಜುಗಳಿಗೆ ತಪ್ಪಿಸಿದರೆ ಶಿಕ್ಷಕರು ಕೇಳುತ್ತಿದ್ದರು, ಏಟು ನೀಡುತ್ತಿದ್ದರು. ಆದರೆ ಇಂದು ಏಟು ಕೊಟ್ಟರೆ ಶಿಕ್ಷಕ ಶಾಲಾ-ಕಾಲೇಜಿಂದ ಹೊರಗುಳಿಯುತ್ತಾರೆ. ಇಂತಹ ಸಂಸ್ಕೃತಿಗೆ ನಮ್ಮ ದೇಶ ಬಂದು ನಿಂತಿದೆ. ದೇವತಾರಾಧನೆ, ವಿಗ್ರಹಪೂಜೆ ಇವೆಲ್ಲವೂ ಮೌಢ್ಯದಿಂದ ಕೂಡಿದ್ದರೂ ಸಹ ಈ ಸಂಸ್ಕೃತಿ ಇಲ್ಲದೇ ಇದ್ದಿದ್ದರೆ ಇಂದು ಭಾರತ ಶ್ರೀಮಂತ ಕಲೆಗಳ ರಾಷ್ಟ್ರವಾಗುತ್ತಿರಲಿಲ್ಲ. ನೃತ್ಯ ಕಲೆ ಇವೆಲ್ಲವೂ ಕಾಲ್ಪನಿಕ ಶಕ್ತಿಯಾದ್ದರಿಂದಲೇ ಇಂದಿನ ಯಕ್ಷಗಾನ ಕಲೆ, ಭರತನಾಟ್ಯ ಮುಂತಾದವುಗಳು ಭಾರತದ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿವೆ. ಎಲ್ಲವೂ ಮೌಢ್ಯವಲ್ಲ. ನಮ್ಮ ಪೂರ್ವಜರು ಕೆಲವೊಂದು ವಿಚಾರಗಳನ್ನು ವೈಜ್ಞಾನಿಕ ಕಾರಣಕ್ಕಾಗಿ ಮಾಡಿದ್ದಾರೆ. ಆದರೆ ಆ ಕಾರಣವನ್ನು ತಿಳಿದುಕೊಳ್ಳುವ ಶಕ್ತಿ ಇಂದಿನ ಯುವಜನತೆಗಿಲ್ಲ. ಪ್ರತಿಯೊಂದರ ಹಿಂದೆಯೂ

ಬಲವಾದ ಕಾರಣಗಳಿರುತ್ತವೆ. ಉದಾಹರಣೆಗೆ ವಿಗ್ರಹ ಪೂಜೆಯಲ್ಲಿ ವಿಗ್ರಹಗಳಿಗೆ, ಮೂರ್ತಿಗಳಿಗೆ ಹಾಲಿನ ತುಪ್ಪದ ಅಭಿಷೇಕವನ್ನು ಮಾಡುತ್ತಿದ್ದರು. ಅದನ್ನು ಈಗಲೂ ಸಹ ಮಾಡಲಾಗುತ್ತಿದೆ. ಆದರೆ ಇದರ ಹಿಂದಿನ ಸತ್ಯ ವಿಗ್ರಹಗಳು ಮಳೆ-ಗಾಳಿ ಬಿಸಿಲಿಗೆ ಒಡೆಯದೆ ಹಾಗೆ ನಿಲ್ಲಲಿ. ಪ್ರಕೃತಿಯ ವಿಕೋಪಕ್ಕೆ ಸಿಲುಕಿ ಹಾಳಾಗುವುದನ್ನು ತಡೆಯುವುದಕ್ಕಾಗಿ ಈ ಆಚರಣೆಯನ್ನು ದೇವರ ಹೆಸರಿನಲ್ಲಿ ಮಾಡುತ್ತಿದ್ದರು. ಈ ಸತ್ಯ ಇಂದಿನ ಯುವಜನತೆಗೆ ತಿಳಿಯದೆ ಇದೆಲ್ಲವೂ ಮೌಢ್ಯದ ಪೂಜೆ ಎನ್ನುತ್ತಾರೆ. ದೇವರು ಎಂಬ ಹೆಸರನ್ನು, ತಂತ್ರವನ್ನು ಯಾಕೆ ಉಪಯೋಗಿಸಿದ್ದಾರೆ ಎಂದರೆ ಎಲ್ಲಾ ಮನುಷ್ಯರು ದೇವರನ್ನು ಬಿಟ್ಟು ಬೇರೆ ಯಾರಿಗೂ ಹೆದರುವುದಿಲ್ಲ. ಆದ್ದರಿಂದ ದೇವರ ಹೆಸರನ್ನು ಉಪಯೋಗಿಸಿದ್ದಾರೆ. ಅದೇ ರೀತಿ ಹಲವಾರು ರೀತಿಯ ಕಾರಣಗಳೂ ಇವೆ. ನಾಗಬನ, ಸ್ತ್ರೀಯರ ಮುಟ್ಟಿನ ವಿಷಯ ಇವೆಲ್ಲವೂ ಬಲವಾದ ಕಾರಣಗಳಿಂದ ಹೊರಗುಳಿಯುವಂತೆ ಹೇಳುತ್ತಿದ್ದರೆ ವಿನಃ ಮೌಢ್ಯತೆಯಿಂದಲ್ಲ. ನಂತರದಲ್ಲಿ ಇಂತಹ ವಿಷಯದಲ್ಲಿ ಧಾರ್ಮಿಕ ಆಚರಣೆ ಎಂದು ಕೆಲವರು ಅರ್ಧ ಸತ್ಯ ತಿಳಿದ ಜನರು ಮಹಿಳೆಯನ್ನು ಆಕೆಯ ಮುಟ್ಟನ್ನು ಅಸಹ್ಯ ಎಂದು ಭಾವಿಸಿದ್ದಾರೆ ವಿನಃ ಪೂರ್ವಜರು ಇದನ್ನು ಹೀಗೆ ಕರೆದಿರಲಿಲ್ಲ. ಇವೆಲ್ಲ ಸತ್ಯವನ್ನು ಅರಿತುಕೊಂಡು ಯುವಜನತೆ ಮುಂದೆ ಹೆಜ್ಜೆ ಹಾಕಬೇಕು. ಜಗತ್ತಿನಲ್ಲಿ ಬದಲಾವಣೆ ಆಗಬೇಕು ನಿಜ. "ಬದಲಾವಣೆಯೇ ಜಗದ ನಿಯಮ" ಆದರೆ ಅತಿಯಾದ ಬದಲಾವಣೆ ಒಳ್ಳೆಯದಲ್ಲ. ಆಧುನೀಕರಣದ ಹೆಸರಿನಲ್ಲಿ ಯುವಜನತೆ ಎಲ್ಲವನ್ನೂ ಮರೆಯುತ್ತಿದ್ದಾರೆ. ಅವರ ಉಡುಗೆ-ತೊಡುಗೆಗಳಂತೂ ಹೇಳತೀರದ್ದಾಗಿದೆ. ಆಗಿನ ಕಾಲದಲ್ಲಿ, ಬಟ್ಟೆ ಇಲ್ಲದ ಕಾರಣಕ್ಕಾಗಿ ಹರಿದ ಬಟ್ಟೆಯನ್ನು ಧರಿಸುತ್ತಿದ್ದರು. ಆದರೆ ಈಗಿನ ಯುವಜನತೆಗೆ ಹರಿದ ಬಟ್ಟೆ ಧರಿಸುವುದು ಒಂದು ರೀತಿಯ ಫ್ಯಾಷನ್ ಆಗಿದೆ. ಹೆಚ್ಚಾಗಿ ಫ್ಯಾಷನ್ ಲೋಕಕ್ಕೆ ಯುವಜನತೆ ತೆರೆದುಕೊಳ್ಳುತ್ತಿದ್ದಾರೆ. ಹಾಗಂತ ಪೂರ್ತಿಯಾಗಿಯೇನು ಅವರು ಸಂಸ್ಕೃತಿಯನ್ನು ಮರೆತಿಲ್ಲ. ಕೆಲವೊಮ್ಮೆ ಯಾವುದಾದರೂ ಕಾರ್ಯಕ್ರಮಗಳು ಯಕ್ಷಗಾನ, ನೃತ್ಯ ಮುಂತಾದವುಗಳಲ್ಲಿ ಹೆಚ್ಚು ಹೆಚ್ಚು ತಮ್ಮನ್ನು ತೊಡಗಿಸಿಕೊಂಡು ಅದನ್ನು ಚೆಂದವಾಗಿಸುತ್ತಾರೆ. ಸಾಂಪ್ರದಾಯಿಕ ಶೈಲಿಯ ಬಟ್ಟೆಯನ್ನು ಸಹ ಧರಿಸುತ್ತಾರೆ. ಆದರೆ ಅದೂ ಕೇವಲ ವಿಶೇಷ ಕಾರ್ಯಕ್ರಮಗಳ ಸಂದರ್ಭಕ್ಕೆ ಮಾತ್ರ ಸೀಮಿತವಾಗಿದ್ದು, ಉಳಿದ ದಿನವೆಲ್ಲ ಫ್ಯಾಷನ್ ಲೋಕದಲ್ಲಿ ತೇಲಾಡುತ್ತಾರೆ. ಯುವಜನತೆಗೆ ಸಂಸ್ಕೃತಿಯ ಮಹತ್ವದ ಅರಿವನ್ನು ಮೂಡಿಸುವುದರಿಂದ ಖಂಡಿತವಾಗಿಯೂ ಅವರು ಬದಲಾಗುತ್ತಾರೆ. ನಮ್ಮ ಸಂಸ್ಕೃತಿ ಇನ್ನಷ್ಟು ಎತ್ತರಕ್ಕೆ ಬೆಳೆಯಲು ಕೂಡ ಕಾರಣೀಕರ್ತರಾಗುತ್ತಾರೆ. ಆದರೆ ಅವರಿಗೆ ಶಾಲಾ-ಕಾಲೇಜು ಶಿಕ್ಷಣ ಸಂಸ್ಥೆಯಲ್ಲಿ ಕೇವಲ ಪುಸ್ತಕದ ಬದನೆಕಾಯಿಯನ್ನು ತಿಳಿಸುವ ಬದಲು ಬೋಧನೆ ಮಾಡಬೇಕು. ಆದ್ದರಿಂದ ಇಂದಿನ ಯುವಜನತೆಯ ಬದಲಾವಣೆ ಸಂಸ್ಕೃತಿಯ ಮೇಲಿನ ಪ್ರೀತಿ ಅವರಿಗೆ ಹೆಚ್ಚಾಗಬಹುದು.

"ಹಳೆ ಬೇರು ಹೊಸ ಚಿಗುರು ಸೇರಿದರೆ ಮರ ಸೊಬಗು" ಎಂಬಂತೆ ಇಂದಿನ ಯುವಜನತೆ ಆಧುನಿಕ ಶೈಲಿಯ ಜೀವನ ನಡೆಸುತ್ತಿದ್ದಾರೆ. ಅದರೊಂದಿಗೆ ನಮ್ಮ ಪುರಾತನ ಸಂಸ್ಕೃತಿಯನ್ನು ಹಳೆಯ ಬೇರನ್ನಾಗಿ ಸೇರಿಸಿಕೊಂಡು ಅವರ ಹೊಸ ಸಂಸ್ಕೃತಿಯ ಚಿಗುರಿನೊಂದಿಗೆ ಜೀವನ ಸಾಗಿಸಿದರೆ ಸಂಸ್ಕೃತಿಯ ಮೆರುಗಿನೊಂದಿಗೆ ಯುವಜನರ ಜ್ಞಾನವೂ ಹೆಚ್ಚುತ್ತದೆ. ಒಳ್ಳೆಯ ಶೈಲಿಯ ಜೀವನವನ್ನು ನಡೆಸಿ ಜೀವನ ಎಂಬ ಮರದ ಸೊಬಗನ್ನು ಹೆಚ್ಚಿಸಬಹುದಾಗಿದೆ.

●

ಕಣ್ಣ ಹನಿ

ಕಣ್ಣ್ ಹನಿಯೇ ನೀ ಹೇಳು
ಜಾರಿ ಬಂದ ಕಾರಣ
ನಿನಗೂ ತಿಳಿಯಿತೇ
ಮುಗಿದ ನಮ್ಮ ಪ್ರೀತಿಯ ಋಣ
ಮಾಸುತಿಲ್ಲ ಕಳೆದ ಆ ದಿನಗಳು
ಮರೆಯಲಾಗುತ್ತಿಲ್ಲ ನಿನ್ನೊಂದಿಗೆ ಕಳೆದ ಆ ಕ್ಷಣಗಳು
ಹಿಂದೆ ಸರಿದ ಜೀವನದ ಕ್ಷಣಗಳನ್ನು ಪುನಃ ಮರುಕಳಿಸಿ
ಕಣ್ಮುಚ್ಚಿ ತೆರೆದಾಗ ಕಣ್ಣ ಹನಿ ಜಾರಿದೆ.

✍ **ಕೆ. ಈ. ದಿಶಾ,** ತೃತೀಯ ಬಿ.ಕಾಂ.

ನಾಟ್ಯಶಾಸ್ತ್ರದ ಉಗಮ ಮತ್ತು ಬೆಳವಣಿಗೆ

✍ **ಪೂರ್ಣಿಮಾ ಆರ್. ನಾವಡ,** ದ್ವಿತೀಯ ಬಿ.ಕಾಂ.

ನಾಟ್ಯೋತ್ಪತ್ತಿ ನಾಟ್ಯಶಾಸ್ತ್ರದ ಪ್ರಥಮ ಅಧ್ಯಾಯ. ನಾಟ್ಯವೇದವು ಹೇಗೆ ಸೃಷ್ಟಿಯಾಯಿತು ಎಂಬುದು ಈ ಅಧ್ಯಾಯದ ವ್ಯಾಪ್ತಿ. ಆತ್ರೇಯಾದಿ ಮುನಿಗಳ ಪ್ರಶ್ನೆಗಳಿಗೆ ಭರತಮುನಿಯೇ ಉತ್ತರಿಸುವಂತೆ ನಾಟ್ಯಶಾಸ್ತ್ರದ ಉಗಮವನ್ನು ನಿರೂಪಿಸಲಾಗಿದೆ.

ನಾಟ್ಯಶಾಸ್ತ್ರದ ಉಗಮ:

ಒಮ್ಮೆ ಭರತ ಮಹಾಮುನಿಯು ಜಪತಪಾದಿಗಳ ನಂತರ ತನ್ನ ಮಕ್ಕಳೊಂದಿಗೆ ಇರುವಾಗ ಆತ್ರೇಯಾದಿ ಮುನಿಗಳು (ಬ್ರಹ್ಮ ಮಾನಸ ಪುತ್ರರು) ಭರತನನ್ನು ಸಂದರ್ಶಿಸಿದರು. "ಭಗವಾನ್! ತಮ್ಮ ವೇದ ಸಮಾನವಾದ ನಾಟ್ಯಶಾಸ್ತ್ರದ ಉತ್ಪತ್ತಿ ಹೇಗೆ ಆಯಿತು? ಯಾರಿಗೋಸ್ಕರ ಇದನ್ನು ರಚಿಸಿದಿರಿ? ವಿವರಗಳನ್ನು ಕೃಪೆಮಾಡಿ ತಿಳಿಸಿ", ಎಂದು ಕೇಳಿಕೊಂಡರು. ಭರತಮುನಿಯು ಹೀಗೆ ಉತ್ತರಿಸಿದನು – ಮುನಿಗಳೇ ಪೂರ್ವದಲ್ಲಿ ಕೃತಯುಗವು ಮುಗಿದು ತ್ರೇತಾಯುಗ ಆರಂಭವಾದಾಗ ಕಾಲಮಹಿಮೆಯಿಂದ ಲೋಕವು ಕಾಮ, ಕ್ರೋಧ, ಲೋಭ, ಈರ್ಷ್ಯೆಗಳಿಂದ ತಾಂಡವವಾಡಲಾರಂಭಿಸಿತು. ಅಷ್ಟದಿಕ್ಪಾಲಕರ ರಕ್ಷಣೆಯಲ್ಲಿ ಇದ್ದ ಈ ದೇಶ ದೇವಮಾನವ, ಗಂಧರ್ವ, ಯಕ್ಷ, ರಾಕ್ಷಸ, ಮಹಾಸರ್ಪಗಳಿಂದ ತುಂಬಿ ತುಳುಕಿತು. ಅಧರ್ಮದ ಕೈ ಮೇಲಾಯಿತು.

"ಆಗ ಇಂದ್ರನ ನೇತೃತ್ವದಲ್ಲಿ ದೇವತೆಗಳು ಬ್ರಹ್ಮನನ್ನು ಕಂಡು ಮನೋರಂಜಕವೂ ವಿನೋದಕರವೂ ಆದ ವೇದವೊಂದನ್ನು ಸೃಷ್ಟಿಸಬೇಕೆಂದು ಕೇಳಿಕೊಂಡರು. ಅದರಂತೆ ಬ್ರಹ್ಮನು ನಾಲ್ಕು ವೇದಗಳನ್ನು ಧ್ಯಾನಿಸಿ ಋಗ್ವೇದದಿಂದ ಪಾಠ್ಯವನ್ನು (ಮಾತು), ಸಾಮವೇದದಿಂದ ಸಂಗೀತವನ್ನೂ, ಯಜುರ್ವೇದದಿಂದ ಅಭಿನಯವನ್ನೂ ಮತ್ತು ಅಥರ್ವಣ ವೇದದಿಂದ ರಸವನ್ನೂ ಆರಿಸಿ ಐದನೇ ವೇದವನ್ನು ರಚಿಸಿದನು."

ಅನಂತರ ದೇವೇಂದ್ರನನ್ನುದ್ದೇಶಿಸಿ, ಬ್ರಹ್ಮ – ದೇವೇಂದ್ರಂ ನಾಟ್ಯ ವೇದದ ರಚನೆಯಾಯಿತು. "ಇದನ್ನು ಅರಿತು ಅಭಿನಯಿಸಿ ಮೆರೆಸುವಂತೆ ದೇವತೆಗಳಿಗೆ ವಹಿಸು. ಆ ದೇವತೆಗಳಲ್ಲಿ ಕುಶಲರು, ಅಂಜದಿರುವವರು, ಕಷ್ಟಸಹಿಷ್ಣುಗಳು ಹಾಗೂ ಸಮುಚಿತ ದೇಹ ಉಳ್ಳವರಿಗೆ ಈ ಶಾಸ್ತ್ರದ ಸಂರಕ್ಷಣೆಯ ಕೆಲಸ ವಹಿಸು" ಎಂದನು.

ಇದಕ್ಕೆ ದೇವೇಂದ್ರನು, "ಭಗವಾನ್, ಈ ವೇದಗಳನ್ನು ತಿಳಿಯಲು ಜ್ಞಾಪಕದಲ್ಲಿ ಉಳಿಸಿಕೊಳ್ಳಲು ಅಥವಾ ಪ್ರಯೋಗಿಸಲು

ದೇವತೆಗಳು ಶಕ್ತರಲ್ಲ. ಸುಶಿಕ್ಷಿತರೂ, ಅಭ್ಯಾಸಶಕ್ತರೂ ತಮ್ಮ ವ್ರತಗಳಲ್ಲಿ ಸಿದ್ಧಿಪಡೆದ ಋಷಿಗಳೇ ಇದಕ್ಕೆ ಪಾತ್ರರು"ಎಂದನು. ಈ ಮಾತನ್ನು ಕೇಳಿದ ಬ್ರಹ್ಮನು ನನಗೆ (ಅಂದರೆ ಭರತನಿಗೆ) ಹೀಗೆ ಅಪ್ಪಣೆ ಮಾಡಿದ – "ಭರತ ನೀನು ನಿನ್ನ ನೂರು ಮಕ್ಕಳೊಂದಿಗೆ ಈ ಶಾಸ್ತ್ರದ ಪ್ರಯೋಗವನ್ನು ಕೈಗೊಳ್ಳಬಹುದು" ಎಂದನು. ಅದರಂತೆ ನಾನು ಈ ವೇದದ ಪ್ರಯೋಗವನ್ನು ಸಮರ್ಥರಾದ ನನ್ನ ಮಕ್ಕಳು ಅರಿತು ಕಲಿತು ಅಭ್ಯಾಸ ಮಾಡುವಂತೆ ಮಾಡಿದೆ.

ಅದರಂತೆ ನಾನು (ಭರತ) ಭಾರತೀ, ಸಾತ್ವತೀ, ಆರ್‌ಭಟೀ ಎಂಬ ಮೂರು ವೃತ್ತಿಗಳಿಂದ ಕೂಡಿದ ಪ್ರದರ್ಶನವನ್ನು ಆರಂಭಿಸಿದೆ. ಭಾರತೀ ಎಂದರೆ ವಾಚಿಕ, ಸಾತ್ವತೀ ಎಂದರೆ ಸತ್ವಯುತವಾದದ್ದು ಹಾಗೆಯೇ ಆರ್‌ಭಟೀ ಎಂದರೆ ಬಲವಾದುದ್ದು ಅಥವಾ ಆರ್ಭಟ ಉಳ್ಳದ್ದು ಎಂದು ಅರ್ಥ. ಇವುಗಳ ಜೊತೆಗೆ ಕೈಶಕೀ ವೃತ್ತಿ ಎಂದರೆ ಸುಸಂಸ್ಕೃತವಾದದ್ದನ್ನು ಸೇರಿಸಬೇಕೆಂದು ಬ್ರಹ್ಮನು ಹೇಳಿದಾಗ ಅದನ್ನು ಶಿವತಾಂಡವದಿಂದ ಅರಿತೆ. ಕೈಶಕೀ ವೃತ್ತಿಯ ಪ್ರಯೋಗ ಕೇವಲ ಪುರುಷರಿಂದ ಸಾಧ್ಯವಿಲ್ಲ ಎಂಬುವುದನ್ನು ನಾನು ಬ್ರಹ್ಮನಿಗೆ ನಿವೇದಿಸಿದೆ. ಆಗ ಬ್ರಹ್ಮನು ನಾಟ್ಯಾಲಂಕಾರ ಚತುರೆಯರಾದ 24

ಅಪ್ಸರೆಯರನ್ನು ಸೃಷ್ಟಿಸಿ ಪ್ರಯೋಗಾರ್ಥವಾಗಿ ನನಗೆ ವಹಿಸಿದನು. ಸ್ವಾತಿ ಋಷಿಯು ಶಿಷ್ಯ ಸಮೇತರಾಗಿ ವಾದ್ಯವೃಂದದ ಹೊಣೆ ಹೊತ್ತು ನನಗೆ ಸಹಾಯ ಮಾಡಿದರು ಎಂದನು.

ನಾಟ್ಯಶಾಸ್ತ್ರದ ನಾಟ್ಯೋತ್ಪತ್ತಿಯ ಕತೆಯ ಪ್ರಕಾರ ಭರತನು ತನ್ನ ನೂರು ಮಕ್ಕಳು ಹಾಗೂ 24 ಅಪ್ಸರೆಯರು ನಾಟ್ಯ ಕಲೆಯನ್ನು ಕಲಿಸಿ ಪ್ರಚಾರಕ್ಕೆ ತಂದನು. ಹೀಗೆ ಪ್ರಚಾರಕ್ಕೆ ಬಂದ ಈ ನಾಟ್ಯಕಲೆ ಕ್ರಮೇಣ ಆಯಾ ಪ್ರಾಂತ್ಯದ ಛಾಪನ್ನು ಮೈಗೂಡಿಸಿಕೊಂಡು ವಿವಿಧ ನಾಟ್ಯ ಪ್ರಕಾರಗಳಾಗಿ ಮೂಡಿ ಬಂದಿದೆ.

ಭರತನಾಟ್ಯದ ಹುಟ್ಟು, ಬೆಳವಣಿಗೆ:

ಹಿಂದೆ ಹೇಳಿದಂತೆ ಬ್ರಹ್ಮನಿಂದ ನಿರ್ಮಿತ ನಾಟ್ಯವೇದಕ್ಕೆ ಶಾಸ್ತ್ರರೂಪವನ್ನು ಕೊಟ್ಟು ಭರತನು, ನಾಟ್ಯಶಾಸ್ತ್ರವನ್ನು ತನ್ನ ನೂರು ಮಕ್ಕಳಿಗೆ ಬೋಧಿಸಿದನು. ಶಿವನಿಂದ ತಾಂಡವ, ಪಾರ್ವತಿಯ ಮೂಲಕ ಉಷೆಯಿಂದ ಲಾಸ್ಯದ ವಿವರಣೆ ಪಡೆದು ಅನೇಕ ಗಂಧರ್ವ ಹಾಗೂ ಅಪ್ಸರೆಯರಿಗೆ ಶಿಕ್ಷಣ ನೀಡಿದನು. ಕ್ರಮೇಣ ಈ ಕಲೆಯು ಭೂಲೋಕದಲ್ಲಿ ಪ್ರಸರಿಸಿ, ರಾಜರಿಂದ ಪೋಷಣೆ ದೊರೆತು ಭಾರತದಲ್ಲಿ ನೆಲೆಯೂರಿತು. ದೇಶದ ಬೇರೆ ಬೇರೆ ಪ್ರದೇಶಗಳಲ್ಲಿ ವಿವಿಧ ರೂಪಗಳನ್ನು ತಾಳಿ ದಕ್ಷಿಣ ಭಾರತದಲ್ಲಿ ಭರತನಾಟ್ಯವೆಂಬ ಹೆಸರಿನಿಂದ ಆವಿಷ್ಕಾರಗೊಂಡಿತು.

ಅಂದಿನಿಂದ ಈ ನೃತ್ಯವನ್ನು ದೇವಸ್ಥಾನಗಳಲ್ಲಿ ನರ್ತಿಸುವ ಪದ್ಧತಿ ಬೆಳೆದು ಬಂದಿತು. ಹೀಗೆ ನರ್ತಿಸುವವರನ್ನು ದೇವದಾಸಿಯರೆಂದು ಕರೆಯಲಾಯಿತು. ಇವರು ದಿನನಿತ್ಯ ದೇವಸ್ಥಾನದ ಕಾರ್ಯದಲ್ಲಿ ಪಾಲ್ಗೊಳ್ಳುತ್ತಿದ್ದರಲ್ಲದೆ, ಉತ್ಸವ ಕಾಲಗಳಲ್ಲೂ ನರ್ತಿಸುತ್ತಿದ್ದರು. ಇವರಿಗೆಲ್ಲಾ ರಾಜಾಶ್ರಯ ದೊರೆತು, ದೈವಿಕವಾದ ನೃತ್ಯದ ಬೆಳವಣಿಗೆ ಸಾಗಿ ಉಳಿದಿದೆ. ಈ ಕಲೆ ಪಾಶ್ಚಾತ್ಯ ದೇಶಗಳಿಗೂ ಹರಡಿ ಪ್ರಖ್ಯಾತಿ ಪಡೆದಿದೆ.

ಭರತನಾಟ್ಯ ಐತಿಹಾಸಿಕ ಹಿನ್ನೆಲೆಯನ್ನು ಪ್ರಾಚೀನ ಶಾಸನಗಳಿಂದ ತಿಳಿಯಬಹುದು. ಕದಂಬ, ಗಂಗ, ಪಲ್ಲವ, ಚಾಲುಕ್ಯ, ಹೊಯ್ಸಳ, ಇನ್ನೂ ಅನೇಕರು ಈ ಕಲೆಯನ್ನು ಪೋಷಿಸುತ್ತಿದ್ದರು.

ಪಂಪನ ಕಾವ್ಯಗಳಿಂದ 10ನೇ ಶತಮಾನದಲ್ಲಿಯೇ ನೃತ್ಯ, ಸಂಗೀತ, ಚಿತ್ರಕಲೆಗಳಲ್ಲಿ ಸ್ತ್ರೀಯರು ಪಾಂಡಿತ್ಯ ಹೊಂದಿದ್ದರು. ವಿಧಿತ ರಾಜರಾದ ಚೋಳನು ತಂಜಾವೂರಿನ ಬೃಹದೀಶ್ವರ ದೇವಾಲಯದಲ್ಲಿ 400 ನರ್ತಕಿಯರನ್ನು ನೇಮಿಸಿದ್ದನು. ಹೀಗೆ ಎಂಟನೆ ಶತಮಾನದ ಚಾಲುಕ್ಯರ ಬಾದಾಮಿ ದೇವಾಲಯದಿಂದ ಲಲಿತಕಲೆ ಹಾಗೂ ಸಂಸ್ಕೃತಿಯು ಅತ್ಯಂತ ಉನ್ನತ ಸ್ಥಾನ ಗಳಿಸಿದ್ದನ್ನು ತಿಳಿಸುತ್ತದೆ. ಇದಲ್ಲದೆ ಸ್ವತಃ ನಮ್ಮಲ್ಲಿನ ರಾಣಿಯರು ಸಹ ನೃತ್ಯ ಕಲಾವಿದೆಯರಾಗಿದ್ದರು. ಚಾಲುಕ್ಯರ ಸೋವಿದೇವನ ರಾಣಿ ಸಾವಲಾದೇವಿ ನೃತ್ಯ ಪಾರಂಗತೆ. ಕಲೆಯ ಮಹತ್ವವನ್ನು ನಿರಂತರವಾಗಿ ಸಾರಲು ನಿಂತಿರುವ ಬೇಲೂರು, ಹಳೇಬೀಡು, ಸೋಮನಾಥಪುರ ದೇವಾಲಯದ ಶಿಲಾಬಾಲಿಕೆಯರು ನೃತ್ಯದ ಹಿರಿಮೆ ಗರಿಮೆಗೆ ಸಾಕ್ಷಿಯಾಗಿದ್ದಾರೆ.

ಹೀಗೆ ಧಾರ್ಮಿಕ ಹಿನ್ನೆಲೆಯೊಂದಿಗೆ ಬೆಳೆದು ಬಂದಿರುವ ಈ ಭರತನಾಟ್ಯ ಎಂಬ ನೃತ್ಯ ಪ್ರಕಾರ ಭಾರತೀಯ ಸಾಂಸ್ಕೃತಿಕ ಲೋಕದಲ್ಲಿ ತನ್ನದೇ ಆದ ಮಹತ್ವ ಪಡೆದುಕೊಂಡಿದೆ ಹಾಗೂ ಭಾರತದ ಒಂದು ಜನಪ್ರಿಯ ಕಲಾ ಮಾಧ್ಯಮವಾಗಿ ಉಳಿದುಕೊಂಡಿದೆ.

ಅನಾಥ ಮಗು

ಅನಾಥ ಮಗುವೊಂದು ಅಳುತಿದೆ ರಸ್ತೆ ತೊಟ್ಟಿಯಡಿ
ಕಂಡವರು ಹೇಳುತ್ತಿದ್ದಾರೆ ನಮಗ್ಯಾಕೆ ಮುಂದೆ ನಡಿ
ಬಯಸುತ್ತಿತ್ತು ಇನ್ನೊಬ್ಬರ ಸಹಾಯಕ್ಕಾಗಿ ಮಗುವಿನ ಜೀವ
ಅದ ನೋಡಿ ಯಾರಿಗೂ ಬರಲಿಲ್ಲ ಕರುಣಾಭಾವ
ಯಾರೂ ನೀಡಲಿಲ್ಲ ಮಗುವಿಗೆ ಜೀವದಾನ
ಅಳುತ್ತಲೇ ಬೀದಿನಾಯಿಗಳ ಪಾಲಾಯಿತು ಮಗುವಿನ ಪ್ರಾಣ

✍ **ಕೆ. ಈ. ದಿಶಾ,** ತೃತೀಯ ಬಿ.ಕಾಂ.

ಭಾರತೀಯ ಶಾಸ್ತ್ರೀಯ ನೃತ್ಯಗಳು

✍ **ಮೇಧಾ ಪುತ್ತೂರು**, ಪ್ರಥಮ ಬಿ.ಎಸ್ಸಿ.

ನೃತ್ಯವು ಭಾರತೀಯ ಸಂಸ್ಕೃತಿಯಲ್ಲಿ ಅತ್ಯಂತ ಪ್ರಾಚೀನ ಕಲೆಯಾಗಿದೆ. ಪುರಾಣ, ವೇದಗಳ ಪ್ರಕಾರ ಶಾಸ್ತ್ರೀಯ ನೃತ್ಯವು 1000 B.C.ಯಲ್ಲೇ ಹುಟ್ಟಿಕೊಂಡಿದೆ. ನಟರಾಜನನ್ನು ನಾಟ್ಯದೇವತೆ ಎಂದು ಕರೆಯುತ್ತಾರೆ.

ಸಂಗೀತದ ಹಿನ್ನೆಲೆಯಲ್ಲಿ ರಸಭಾವದಿಂದ ಮತ್ತು ಅರ್ಥವತ್ತಾದ ಮುದ್ರೆಗಳಿಂದ ಪ್ರದರ್ಶಿಸಲ್ಪಡುವುದೇ ನೃತ್ಯ. ಇದರಲ್ಲಿ ಭಾವಗಳಿಗೆ ಪ್ರಾಮುಖ್ಯತೆ ಇದೆ. ಅಭಿನಯವೇ ನೃತ್ಯದ ಜೀವಾಳವಾಗಿದೆ. ಸಂಗೀತ ನವರಸದ (ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭತ್ಸ, ಅದ್ಭುತ ಹಾಗೂ ಶಾಂತ) ಭಾವಾಂತರಂಗ, ಪುರಾಣ ಕಥೆಗಳ ತಿಳುವಳಿಕೆ ಅಭಿನಯಕ್ಕೆ ಬೇಕಾದ ಮುಖ್ಯ ವಿಷಯ.

ಭಾರತದ ಶಾಸ್ತ್ರೀಯ ನೃತ್ಯವು ಒಂದು ರೀತಿಯ ನೃತ್ಯ-ನಾಟಕವನ್ನು ಅಭಿವೃದ್ಧಿಪಡಿಸಿದೆ. ನರ್ತಕರು ಸನ್ನೆಗಳ ಮೂಲಕ ಕಥೆಯನ್ನು ಪ್ರತ್ಯೇಕವಾಗಿ ನಿರ್ವಹಿಸುತ್ತಾರೆ. ಭಾರತದಲ್ಲಿ ಏಳು ಪ್ರಸಿದ್ಧ ಶಾಸ್ತ್ರೀಯ ನೃತ್ಯಗಳಿವೆ. ಅವುಗಳು – ತಮಿಳುನಾಡಿನ ಭರತನಾಟ್ಯ, ಉತ್ತರ, ಪಶ್ಚಿಮ ಹಾಗೂ ಮಧ್ಯ ಭಾರತದ ಕಥಕ್, ಕೇರಳದ ಕಥಕ್ಕಳಿ, ಆಂಧ್ರ ಪ್ರದೇಶದ ಕೂಚಿಪೂಡಿ, ಒಡಿಸ್ಸಾದ ಒಡಿಸ್ಸಿ, ಮಣಿಪುರದ ಮಣಿಪುರಿ ಹಾಗೂ ಕೇರಳದ ಮೋಹಿನಿಯಾಟ್ಟಂ. ಈ ಎಲ್ಲಾ ನೃತ್ಯಗಳನ್ನು ಭರತಮುನಿಯ ನಾಟ್ಯಶಾಸ್ತ್ರದ ನಿಯಮಗಳಿಂದ ನಿಯಂತ್ರಿಸಲಾಗುತ್ತದೆ.

ಪ್ರಾಥಮಿಕವಾಗಿ ಶಿವಾರಾಧನೆಗೆ ದೇವಾಲಯಗಳಲ್ಲಿ ಆರಂಭವಾದ ನೃತ್ಯ ಪದ್ಧತಿಗಳು, ಕ್ರಮೇಣ ಮಧ್ಯಯುಗದ ವೈಷ್ಣವ ಪಂಥದ ಮಧುರ ಭಕ್ತಿಯ ಪ್ರಭಾವಕ್ಕೊಳಗಾಗಿರುವುದನ್ನು ನಾವು ಕಾಣುತ್ತೇವೆ. ಭಾರತ ದೇಶದ ಎಲ್ಲ ಕಲೆಗಳೂ ಮಾನವನನ್ನು ಸಾಧಾರಾಣ ಪ್ರವೃತ್ತಿಯಿಂದ ದೈವತ್ವದ ಕಡೆಗೆ ಸಾಗಿಸುವ ಆಧ್ಯಾತ್ಮಿಕ ಭಾವನೆಯನ್ನೊಳಗೊಂಡಿದೆ. ಆದ್ದರಿಂದಲೇ ಈ ಶಾಸ್ತ್ರೀಯ ನೃತ್ಯಕಲೆಗಳು ಭಾರತೀಯರ ಸಂಸ್ಕೃತಿಯ ಅತ್ಯುನ್ನತ ಭಾವನೆಗಳ ಆಗರವಾಗಿದೆ ಎನ್ನಬಹುದು.

ಭರತನಾಟ್ಯ:

ಭರತನಾಟ್ಯ ಶಾಸ್ತ್ರೀಯ ನೃತ್ಯ ಪ್ರಕಾರಗಳಲ್ಲಿ ಒಂದಾಗಿದೆ. ಇದು ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಪ್ರಚಲಿತವಾಗಿದೆ. ಇದನ್ನು ಐದನೇ ವೇದ ಎಂದೂ ಕರೆಯುತ್ತಾರೆ. ಇದು

ಸಾಮಾನ್ಯವಾಗಿ ಶಾಸ್ತ್ರೀಯ ಸಂಗೀತವನ್ನು ಒಳಗೊಂಡಿರುತ್ತದೆ. ಭರತನಾಟ್ಯ ಪದವು ಭರತ ಎಂಬ ಪದದಿಂದ ಕೂಡಿದ್ದು 'ಭ' ಎಂದರೆ ಭಾವ, 'ರ' ಎಂದರೆ ರಾಗ, 'ತ' ಎಂದರೆ ತಾಳ ಎಂದು ಅರ್ಥವಿದೆ. ಅಂದರೆ ಭಾವ, ರಾಗ ಮತ್ತು ತಾಳದಿಂದ ಕೂಡಿದ ನೃತ್ಯಕ್ಕೆ ಭರತನಾಟ್ಯ ಎಂದು ಕರೆಯುತ್ತಾರೆ. ಇದು ಅನುಗ್ರಹ, ಶುದ್ಧತೆ, ಮೃದುತ್ವಗಳಿಗೆ ಹೆಸರುವಾಸಿಯಾಗಿದೆ. ಪ್ರಾಚೀನ ಕಾಲದಲ್ಲಿ ಭರತನಾಟ್ಯವನ್ನು ದೇವಾಲಯಗಳಲ್ಲಿ ದೇವದಾಸಿಯರ ಮೂಲಕ "ಸಾದಿರ್ ಆಟಂ" ಅಂದರೆ ಆಸ್ಥಾನ ನೃತ್ಯವೆಂದು ಮಾಡುತ್ತಿದ್ದರು. ಭರತನಾಟ್ಯವು ಮರಾಠ ರಾಜ ಸರಬೋಜಿಯ ಆಸ್ಥಾನದಲ್ಲಿ ಚಿನ್ನಯ್ಯ, ಪೊನ್ನಯ್ಯ, ಶಿವಾನಂದಂ ಹಾಗೂ ವಡಿವೇಲು ಎಂಬ ನಾಲ್ವರು ಸಹೋದರರ ಕೊಡುಗೆಯಾಗಿದೆ. ಈ ನಾಲ್ವರು ಎಲ್ಲಾ ಅಂಶಗಳನ್ನು ಅಂದರೆ ಅಲರಿಪು, ಜತಿಸ್ವರ, ವರ್ಣ, ಶಬ್ದಂ, ಪದಂ, ಜಾವಳಿ ಮತ್ತು ತಿಲ್ಲಾನವನ್ನು ರೂಪಿಸಿದರು.

ಭರತನಾಟ್ಯ ಕಲಿಯುವ ವಿದ್ಯಾರ್ಥಿಗಳು ಮೊದಲಿಗೆ ಅಂಗ ಸಾಧನೆಯನ್ನು ಅಭ್ಯಾಸ ಮಾಡಿ 12ರಿಂದ 15 ವಿಧವಾದ ಅಡವುಗಳನ್ನು ಕಲಿತಮೇಲೆ ಕತ್ತು, ಕಣ್ಣು, ಹುಬ್ಬು, ತಲೆಗಳ ಚಲನೆ, ಹಸ್ತಮುದ್ರೆಗಳು ಅವುಗಳ ವಿನಿಯೋಗದ ಪಾಠವಾಗುತ್ತದೆ. ಸುಮಾರು 7 - 8 ವರ್ಷಗಳ ನಂತರ ವಿದ್ಯಾರ್ಥಿನಿ ತನ್ನ ಮೊದಲ ನೃತ್ಯದ ಪ್ರದರ್ಶನ "ರಂಗ ಪ್ರವೇಶ"ಕ್ಕೆ ಸಜ್ಜಾಗುತ್ತಾಳೆ. ಭರತನಾಟ್ಯದ ಒಂಟಿ ನೃತ್ಯ ಪದ್ಧತಿ, ಈಗ ನಾಲ್ಕು ಜನ ಸಾಮೂಹಿಕವಾಗಿ ನರ್ತಿಸುವ ಪದ್ಧತಿಯಾಗುತ್ತಿದೆ. ಹೀಗೆ ಭರತನಾಟ್ಯ ಬಹಳ ಜನಪ್ರಿಯವಾಗಿದೆ ಎಂಬುವುದರಲ್ಲಿ ಸಂದೇಹವಿಲ್ಲ.

ಕೂಚಿಪೂಡಿ:

ಕೂಚಿಪೂಡಿ ಆಂಧ್ರ ಪ್ರದೇಶದ ನೃತ್ಯಪದ್ಧತಿ. ಆಂಧ್ರ ಪ್ರದೇಶದ 'ಕೂಚಿಪೂಡಿ' ಎಂಬ ಗ್ರಾಮದಲ್ಲಿ ಹಲವರು ಬ್ರಾಹ್ಮಣರು ಆರಂಭಿಸಿದ ನೃತ್ಯನಾಟಕ ಮುಂದೆ ಕೂಚಿಪೂಡಿ ನೃತ್ಯ ಶೈಲಿಯನ್ನು ಬೆಳೆಸಿತು. ಈ ನೃತ್ಯ ನಾಟಕಗಳನ್ನು ಆಂಧ್ರ ಪ್ರದೇಶದ ಯಕ್ಷಗಾನವೆನ್ನಬಹುದು. ನರ್ತಿಸುವವರು ಕೂಚಿಪೂಡಿ ಭಾಗವತುಲು ಎನ್ನಿಸಿಕೊಂಡರು. ಅದರಲ್ಲಿ ಗಂಡಸರು ಮಾತ್ರ ನರ್ತಿಸುತ್ತಿದ್ದರು. ಹೆಂಗಸರಿಗೆ ಇಲ್ಲಿ ಅವಕಾಶವಿರುತ್ತಿರಲಿಲ್ಲ. ಈ 30 ವರ್ಷಗಳಿಂದೀಚೆಗೆ ಈ ನೃತ್ಯ ನಾಟಕದಿಂದ, ಒಂಟಿ ನೃತ್ಯಗಳನ್ನು ಸಂಯೋಜಿಸಿ ಮಹಿಳೆಯರೂ ನರ್ತಿಸಲು ಅವಕಾಶ ಮಾಡಿಕೊಡಲಾಗಿದೆ. ಈಗ ಹೆಂಗಸರೇ ಹೆಚ್ಚಾಗಿ ಕೂಚಿಪೂಡಿ ನೃತ್ಯವನ್ನು ಅಭ್ಯಸಿಸುತ್ತಾರೆ. ಈ ನೃತ್ಯಕ್ಕೆ ಪಿಟೀಲು, ಮೃದಂಗ ಮತ್ತು ಕೊಳಲು ವಾದ್ಯಗಳ ಬೆಂಬಲವಿರುತ್ತದೆ. ವಿಶಿಷ್ಟವಾಗಿ ಕೂಚಿಪೂಡಿಯಲ್ಲಿ 'ತರಂಗಂ' ಎಂಬುದಿದೆ. ಇದರಲ್ಲಿ ನರ್ತಿಸುವವರು ಹಿತ್ತಾಳೆ ತಟ್ಟೆಯಲ್ಲಿ ಕಾಲಿಟ್ಟುಕೊಂಡು, ಅವರ ಹಸ್ತದಲ್ಲಿ ತೈಲ ದೀಪ ಹಚ್ಚಿದ ಎರಡು ಹಣತೆಗಳು ಹಾಗೂ ತಲೆಯ ಮೇಲೆ ನೀರು ತುಂಬಿದ ತಂಬಿಗೆಯನ್ನು ಇಟ್ಟುಕೊಂಡಿರಬೇಕು.

ಇನ್ನೊಂದು ಪ್ರಮುಖ ನೃತ್ಯ ಎಂದರೆ 'ಭಾಮಾ ಕಲಾಪಂ' ಎಂಬುದು. ಇದರಲ್ಲಿ ಸತ್ಯಭಾಮಾಳ ಪ್ರೀತಿ ಪ್ರೇಮದ ವಿವಿಧ ಹಂತಗಳನ್ನು ನೋಡಬಹುದು.

ಹಿಂದೆ ಕೂಚಿಪೂಡಿ ಭಾಗವತರ ತಂಡಗಳು ಹಳ್ಳಿಯಿಂದ ಹಳ್ಳಿಗೆ ಪ್ರಯಾಣ ಮಾಡುತ್ತ, ರಾತ್ರಿಯಿಂದ ಹಗಲಿನವರೆಗೆ ಹಳ್ಳಿಯ ದೇವಾಲಯದ ಮುಂದೆ ನಿರ್ಮಿಸಿದ ರಂಗಸ್ಥಳದಲ್ಲಿ ಪಂಜಿನ ಬೆಳಕಿನಲ್ಲಿ ನರ್ತಿಸುತ್ತಿದ್ದರು. ಈಗ ಆಧುನಿಕ ರಂಗಭೂಮಿಗೆ ಕೂಚಿಪೂಡಿ ಹೊಂದಿಕೊಂಡಿದೆ.

ಕಥಕ್:

'ಕಥಕ್' ಎಂಬ ಪದವನ್ನು ಕಥೆ ಎಂಬ ಸಂಸ್ಕೃತ ಪದದಿಂದ ಆರಿಸಲಾಗಿದೆ ಮತ್ತು ಕಥಕರ್ ಎಂದರೆ "ಒಂದು ಕಥೆಯನ್ನು

ಹೇಳುವವನು" ಅಥವಾ "ಕಥೆಗಳೊಂದಿಗೆ ಮಾಡುವುದು". ಕಥಕ್ ನರ್ತಕರು ತಮ್ಮ ಕೈ ಚಲನೆ ಮತ್ತು ಹೆಜ್ಜೆ ಗುರುತುಗಳ ಮೂಲಕ ಹಾಗೂ ಮುಖ್ಯವಾಗಿ ಮುಖದ ಅಭಿವ್ಯಕ್ತಿಗಳ ಮೂಲಕ ವಿವಿಧ ಕಥೆಗಳನ್ನು ಹೇಳುತ್ತಾರೆ. ನೃತ್ಯದ ಮೂಲ ಗಮನಗಳು ಕಣ್ಣುಗಳು ಮತ್ತು ಕಾಲು ಚಲನೆಗಳು. ಈ ನೃತ್ಯವು ಮುಖ್ಯವಾಗಿ ಉತ್ತರ ಪ್ರದೇಶದ ರಾಜ್ಯಕ್ಕೆ ಸೇರಿದ್ದು ರಾಧಾ, ಕೃಷ್ಣ ಮತ್ತು ಗೋಪಿಕೆಯರ ಕಥೆಯ ಮೇಲೆ ಕುಂತಿದೆ. ಈ ನೃತ್ಯವು ಪ್ರೇಕ್ಷಕರ ಗಮನವನ್ನು ಸೆಳೆಯುವಂತಹ ವೈಶಿಷ್ಟ್ಯ, ಚಾಲನೆಗಳಿಂದ, ಭಾವಗಳಿಂದ ಕೂಡಿದೆ.

ಮೋಹಿನಿಯಾಟ್ಟಂ:

ಲಾಲಿತ್ಯಪೂರ್ಣ ಚಲನೆ, ಮೃದುವಾದ ಲಯವಿನ್ಯಾಸ, ಆಕರ್ಷಕ ಕಣ್ಣಿನ ಸಂಚಾರ, ಇವು ಮೋಹಿನಿ ಆಟವನ್ನು ಮೋಹಕ ನೃತ್ಯ ಶೈಲಿಯನ್ನಾಗಿಸಿವೆ. ಇದು ಕೇರಳ ಮೂಲದ ಸಾಂಪ್ರದಾಯಿಕ ದಕ್ಷಿಣ ಭಾರತೀಯ ನೃತ್ಯ ಶೈಲಿ.

ಮಹಿಳೆಯರು ಒಂಟಿಯಾಗಿ ಪ್ರದರ್ಶಿಸುವ ಬಹಳ ಸುಲಲಿತ ನೃತ್ಯವಿದು. ಮೋಹಿನಿಯಾಟ್ಟಂ ಎಂಬ ಪದವು 'ಮೋಹಿನಿ' ಎಂದರೆ ನೋಡುಗರನ್ನು ಆಕರ್ಷಿಸುವ ಮಹಿಳೆ ಹಾಗೂ 'ಆಟಂ' ಎಂದರೆ ಸುಲಲಿತ ಎಂಬ ಪದಗಳ ಸಂಯೋಗದಿಂದ ಮೂಡಿ ಬಂದಿದೆ. ಅಭಿನಯ ಕೂತ್ತು ಎನ್ನಿಸಿಕೊಂಡಿದ್ದ ನೃತ್ಯ 18ನೇ

ಶತಮಾನದ ವೇಳೆಗೆ ಮೋಹಿನಿ ಆಟಂ ಎಂದು ಕರೆಯಲ್ಪಟ್ಟಿತು. ಮೋಹಿನಿ ಆಟದ ಬಾಗು ಬಳಕುವಿಕೆ ಕೇರಳದ ನಿಸರ್ಗದಿಂದ ಪ್ರೇರಿತವಾಗಿದೆ ಎನ್ನುತ್ತಾರೆ. ಶೃಂಗಾರವೇ ಪ್ರಮುಖವಾದ ಭಾವ. ಶ್ರೀವಿಷ್ಣು ಮೋಹಿನಿಯ ವೇಷದಲ್ಲಿದ್ದ ಬಗ್ಗೆ ಎರಡು ಕಥೆಗಳಿವೆ. ಒಂದು ದೇವತೆಗಳು-ಅಸುರರು ಕ್ಷೀರಸಾಗರ ಮಥನ ಮಾಡಿ ಅಮೃತವನ್ನು ತೆಗೆದ ನಂತರ ಅಸುರರನ್ನು ಅಮೃತದಿಂದ ದೂರವಿಡಲು ವಿಷ್ಣು ಮೋಹಿನಿ ವೇಷದಲ್ಲಿ ಗೋಚರಿಸುವುದು. ಇನ್ನೊಂದು, ಭಸ್ಮಾಸುರನ ಸಂಹಾರಕ್ಕಾಗಿ ವಿಷ್ಣು ಮೋಹಿನಿ ಅವತಾರವನ್ನು ತಾಳಿದ್ದು. ಈ ಎರಡು ಕಥೆಗಳನ್ನು ಈ ನೃತ್ಯದಲ್ಲಿ ಕಾಣಬಹುದಾಗಿದೆ.

ಮಣಿಪುರಿ:

ಮಣಿಪುರಿ ನೃತ್ಯವನ್ನು ಜಾಗೊಯ್ ಎಂದು ಸಹ ಕರೆಯುತ್ತಾರೆ. ಈ ನೃತ್ಯವು ಮಣಿಪುರ ರಾಜ್ಯದಲ್ಲಿ ಹುಟ್ಟಿರುತ್ತದೆ. ಇದು ವಿಶೇಷವಾಗಿ ಹಿಂದೂ-ವೈಷ್ಣವ ಧರ್ಮದ ವಿಷಯಗಳಿಗೆ ಹೆಸರುವಾಸಿಯಾಗಿದೆ. ಹಾಗೂ ರಾಧಾ-ಕೃಷ್ಣರ ರಾಸಲೀಲೆಗಳು ಹೆಚ್ಚಾಗಿ ಪ್ರದರ್ಶಿಸಲಾಗುತ್ತದೆ. ರಾಸನೃತ್ಯಗಳು ಲಾಲಿತ್ಯಮಯವಾಗಿ ಮೃದುವಾದ ಹೆಜ್ಜೆ, ಕೈಗಳ ಚಲನೆಯಿಂದ, ಬಗ್ಗಿ, ಎದ್ದು, ಸುತ್ತಿ ಬರುವ ಚಲನೆಗಳನ್ನೊಳಗೊಂಡಿರುತ್ತದೆ. ಮುಖದಲ್ಲಿ ಯಾವ ರೀತಿಯಾದ ಅಭಿನಯವನ್ನೂ ತೋರಿಸುವುದಿಲ್ಲ.

ವಿಷ್ಣು ಭಕ್ತರಾದ ಜಯದೇವ, ವಿದ್ಯಾಪತಿ, ಚಂಡೀದಾಸರ ರಚನೆಗಳನ್ನು ನರ್ತನಕ್ಕೆ ಬಳಸುತ್ತಾರೆ. ಸಖಿಯರೇ ಹಾಡುತ್ತಾ ನರ್ತಿಸುತ್ತಾರೆ.

ಒಡಿಸ್ಸಿ:

ಭುವನೇಶ್ವರ ದೇವಾಲಯಗಳಲ್ಲಿನ ನೃತ್ಯ ಶಿಲ್ಪಗಳಲ್ಲಿ ಕಂಡುಬರುವಂತಹ ನೃತ್ಯದ ಶ್ರೀಮಂತ ಪರಂಪರೆಯನ್ನು ಕಾಣಬಹುದು. ಅನೇಕ ಐತಿಹಾಸಿಕ ಶಾಸನಗಳು, ನೃತ್ಯ ಮತ್ತು ಸಂಗೀತದಲ್ಲಿ ತರಬೇತಿ ಪಡೆದ ದೇವದಾಸಿಯರನ್ನು ಪುರಿಯಲ್ಲಿನ ಜಗನ್ನಾಥ ದೇವಸ್ಥಾನಕ್ಕೆ ಸಮರ್ಪಿಸಲಾಗಿದೆ ಎಂದು ತೋರಿಸುತ್ತದೆ. ಮಹಾರಿಗಳು ಒರಿಯಾ ದೇವದಾಸಿಗಳು.

ಅವರು ವಿಶೇಷವಾಗಿ ಜಯದೇವ್ ಅವರ ಗೀತಗೋವಿಂದ ಸಾಹಿತ್ಯವನ್ನು ಆಧರಿಸಿ ನೃತ್ಯ ಸನ್ನಿವೇಶಗಳನ್ನು ಪ್ರದರ್ಶಿಸಿದರು. ಸಮಾಭಂಗ, ಅಭಂಗ ಮತ್ತು ತ್ರಿಭಂಗ ಎಂಬುದು ಒಡಿಸ್ಸಿಯ ಮೂರು ಪ್ರಾಥಮಿಕ ನೃತ್ಯ ಸ್ಥಾನಗಳು.

ಕಥಕ್ಕಳಿ:

ರಾಮಾಯಣ, ಮಹಾಭಾರತದ ಕಥೆಗಳನ್ನು ಅದ್ಭುತ ರೀತಿಯಲ್ಲಿ, ಅಸಾಧಾರಣ ಆಹಾರ್ಯವನ್ನು ತೊಟ್ಟು ಪ್ರದರ್ಶಿಸುವ ವಿಶೇಷವಾದ ಕಲೆ ಕೇರಳದ ಕಥಕ್ಕಳಿ. ಕಥೆಯನ್ನು ನಾಟಕದಂತೆ ಆಡುವುದೇ ಕಥಕ್ಕಳಿ ಎನಿಸಿದೆ. ಕಥಕ್ಕಳಿ ನಾಟ್ಯದಲ್ಲಿ ಆಹಾರ್ಯಾಭಿನಯಕ್ಕೆ ವಿಶೇಷವಾದ ಪ್ರಾಧಾನ್ಯತೆ ಇದೆ. ಸಾತ್ವಿಕ, ರಾಜಸಿಕ, ತಾಮಸಿಕ, ಪಾತ್ರಗಳಿಗೂ ಸ್ತ್ರೀ, ಋಷಿ ಮುನಿಗಳಿಗೂ ಪ್ರತ್ಯೇಕವಾದ ಪ್ರಸಾಧನ ಉಡುಪುಗಳಿವೆ.

ಪಾರಂಪರಿಕವಾಗಿ ಸುಮಾರು 101 ಶಾಸ್ತ್ರೀಯ ಕಥಕ್ಕಳಿ ಕಥೆಗಳಿವೆ. ಆದರೆ ಇಂದಿನ ದಿನಗಳಲ್ಲಿ ಇದರ ಮೂರನೇ ಒಂದು ಭಾಗಕ್ಕಿಂತ ಕಡಿಮೆ ಕಥೆಗಳನ್ನು ಸಾಮಾನ್ಯವಾಗಿ ಸಂಗೀತಕ್ಕೆ, ಅನುಗುಣವಾಗಿ ದೇಹದ ಚಲನೆಗಳ ಮೂಲಕ ಪ್ರದರ್ಶಿಸುತ್ತಾರೆ.

ಭಾರತೀಯರಾಗಿ ನಮ್ಮ ಬದುಕಿನಲ್ಲಿ ಒಳ್ಳೆಯ ಬದಲಾವಣೆಯನ್ನು ತರುವಂತಹ ಶಾಸ್ತ್ರೀಯ ನೃತ್ಯಗಳನ್ನು ನಾವು ಗೌರವಿಸಬೇಕು. ಭಾರತೀಯರಾಗಿ ಭಾರತದ ಶಾಸ್ತ್ರೀಯ ನೃತ್ಯಗಳನ್ನು, ಕಲೆಗಳನ್ನು ಪ್ರೋತ್ಸಾಹಿಸುವ ಮೂಲಕ ಭಾರತದ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕು.

ಆಗುಂಬೆ

✍ **ಸಿಂಚನ ಟಿ. ಸಿ.,** ದ್ವಿತೀಯ ಬಿ.ಎಸ್ಸಿ.

ಆಗುಂಬೆ ಎಂದಾಕ್ಷಣ ನನಗೆ ಮೊದಲು ನೆನಪಾಗುವುದು ಎಂದು ಶಾಲೆಗೆ ರಜ ಸಿಗುತ್ತದೆಯೋ ಯಾವಾಗ ಹಾಸ್ಟೆಲ್ ವಾರ್ಡನ್‌ನಿಂದ ಅನುಮತಿ ಪಡೆದು ಆಗುಂಬೆಗೆ ಹೋಗುವ ಬಸ್ಸನ್ನು ಹತ್ತಿ ಕೂರುತ್ತೇನೋ ಎಂದು ಕನಸು ಕಾಣಲು ಶುರು ಮಾಡುತ್ತೇನೆ. ತರಗತಿಯಲ್ಲಿ ಯಾವುದಾದರು ಶಿಕ್ಷಕರು ಆಗುಂಬೆಯ ಬಗ್ಗೆ ಮಾತನಾಡಿದರೆ ನನಗೆ ತುಂಬಾ ಹೆಮ್ಮೆ ಸರ್ ಅದು ನನ್ನ ಊರು ಎಂದು. ಆಗುಂಬೆಯು ದೊಡ್ಡ ದೊಡ್ಡ ಸಿಟಿಯ ಹಾಗಲ್ಲ, ಅದು ಕಾಡು-ಮೇಡುಗಳಿಂದ ಆವೃತವಾಗಿರುವ ಒಂದು ಸಣ್ಣ ಪ್ರದೇಶ. ಆಗುಂಬೆಯು ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನಲ್ಲಿರುವ ಒಂದು ಪುಟ್ಟ ಗ್ರಾಮವಾಗಿದೆ. ಇದು ಪಶ್ಚಿಮ ಘಟ್ಟಗಳ ಪರ್ವತ ಶ್ರೇಣಿಯ ದಟ್ಟ ಅರಣ್ಯದ ಮಲೆನಾಡು ಪ್ರದೇಶದಲ್ಲಿ ನೆಲೆಸಿದೆ. ಅದರ ಹೆಚ್ಚಿನ ಮಳೆಯಿಂದಾಗಿ ಇದು 'ದಕ್ಷಿಣ ಭಾರತದ ಚಿರಾಪುಂಜಿ' ಎಂಬ ವಿಶೇಷಣವನ್ನು ಪಡೆದುಕೊಂಡಿದೆ. ಚಿರಾಪುಂಜಿ ನಂತರ, ಭಾರತದ ಅತ್ಯಂತ ಮಳೆಯ ಸ್ಥಳಗಳಲ್ಲಿ ಇದು ಒಂದಾಗಿದೆ.

ನಾವು ಶಾಲೆಗೆ ಹೋಗುವಾಗ ಸ್ವಲ್ಪ ಜೋರು ಮಳೆ ಬಂದರೆ ಸಾಕು ಶಾಲೆಗಳಿಗೆ ರಜೆಯನ್ನು ಕೊಡುತ್ತಿದ್ದರು. ಕೆಲವೊಂದು ಸಲ ವಾರಗಟ್ಟಲೆ ರಜೆಯೇ, ಮನೆಯಲ್ಲಿ ಟಿವಿ ನೋಡಲು ಕರೆಂಟು ಕೂಡ ಇರುತ್ತಿರಲಿಲ್ಲ. ಅಮ್ಮ ಯಾವಾಗಲೂ ಮಳೆಗಾಲ ಶುರುವಾಗುವ ಮೊದಲು ಹಲಸಿನ ಹಪ್ಪಳವನ್ನು ಮಾಡುತ್ತಿದ್ದರು. ಅದನ್ನು ಕೆಂಡದಲ್ಲಿ ಸುಟ್ಟು ಅದರ ಮೇಲೆ ತೆಂಗಿನ ಎಣ್ಣೆಯನ್ನು ಹಚ್ಚಿ ಕರುಂ-ಕುರುಂ ಅಂತ ತಿನ್ನುತ್ತ ಕುಳಿತರೇ ಆಹಾ! ಸ್ವರ್ಗಕ್ಕೆ ಮೂರೇ ಗೇಣು. ದಿನವಿಡೀ ಮಳೆ ಬರುತ್ತಲೇ ಇರುತ್ತದೆ. ಕೆಲವೊಂದು ಸಲ ಯಾಕಪ್ಪ ಶಾಲೆಗೆ ರಜೆ ಸಿಗುತ್ತದೆಯೋ ಎಂದೂ ಅನಿಸುತ್ತಿತ್ತು.

ಆಗುಂಬೆಯಲ್ಲಿ ಬಹಳ ಪ್ರಸಿದ್ಧ ಸ್ಥಳವೆಂದರೆ ಅದು ಸನ್‌ಸೆಟ್ ಪ್ಯಾಂಟ್. ಅಲ್ಲಿ ಸೂರ್ಯಾಸ್ತವನ್ನು ನೋಡಲು ಜನರು ಎಲ್ಲೆಲ್ಲಿಂದಲೋ ಎಲ್ಲಾ ಬರುತ್ತಾರೆ. ಸೂರ್ಯಾಸ್ತವನ್ನು ಆಗುಂಬೆಯಿಂದ ನೋಡಲು ಅತ್ಯಂತ ವಿಖ್ಯಾತವಾಗಿದ್ದು ದೂರದೂರದಿಂದ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಕಳೆದ ಶತಮಾನದ ಆರಂಭದಲ್ಲಿ ಇದು ಒಂದು ಪ್ರಮುಖ ಊರು ಆಗಿತ್ತು. ಇದು ಈಗಿನ ಮೈಸೂರು ರಾಜ್ಯಕ್ಕೆ ಸೇರಿತ್ತು ಮತ್ತು ಬ್ರಿಟಿಷ್-ಮುಂಬಯಿ ಮತ್ತು ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ ಮಂಗಳೂರು ನಡುವಿನ ಕೊಂಡಿಯಾಗಿತ್ತು. ಆಗಿನ ಕಾಲದಲ್ಲಿ ಮಂಗಳೂರಿನಿಂದ ಮುಂಬಯಿಗೆ ಹೋಗುವವರು ಆಗುಂಬೆ ಮಾರ್ಗವಾಗಿ ಹೋಗುತ್ತಿದ್ದರು. ಪ್ರಯಾಣಿಕರು ಎತ್ತಿನ ಗಾಡಿಗಳಲ್ಲಿ ಬಂದು ರಾತ್ರಿ ತಂಗಿ ಮುಂಬಯಿ ಅಥವಾ ಮಂಗಳೂರಿಗೆ ಪ್ರಯಾಣ ಮುಂದುವರಿಸುತ್ತಿದ್ದರು. ನಂತರ ಮೈಸೂರಿನ ದಿವಾನ್ ಪಿ.ಎಸ್. ಕೃಷ್ಣಮೂರ್ತಿಯವರು ಒಂದು ದೊಡ್ಡ ಪ್ರಯಾಣಿಕರ ತಂಗುದಾಣ (ಛತ್ರ)ವನ್ನು 1906ರಲ್ಲಿ ಕಟ್ಟಿಸಿದರು. ಪ್ರಯಾಣಿಕರಿಗೆ ಉಚಿತ ಊಟ ವಸತಿಗಳನ್ನು ಒದಗಿಸಿದರು. ಕಲ್ಲು ಗಾರೆಗಳಿಂದ ನಿರ್ಮಿಸಿದ ಈ ತಂಗುದಾಣ ಇಂದು ಚಾವಣಿಯನ್ನು ಕಳೆದುಕೊಂಡು ಶಿಥಿಲವಾಗಿ ನಿಂತಿದೆ. ನಂತರದ ದಿನಗಳಲ್ಲಿ ಕಲ್ಲಿದ್ದಲಿನಿಂದ ಓಡುವ 7 ಆಸನಗಳ ಮೋಟಾರು ವಾಹನಗಳು ಬಂದವು. ಜನರು ಆಗುಂಬೆಯಿಂದ ಈ ವಾಹನ ಬಳಸಿ ಹರಿಹರಕ್ಕೆ ಹೋಗಿ ನಂತರ ಅಲ್ಲಿಂದ ರೈಲಿನಲ್ಲಿ ಮುಂಬಯಿಗೆ ತೆರಳುತ್ತಿದ್ದರು. ನಂತರದ ದಿನಗಳಲ್ಲಿ 14 ತೀಕ್ಷ್ಣ ತಿರುವುಗಳನ್ನು ಹೊಂದಿದ ಘಾಟಿಯನ್ನು ನಿರ್ಮಿಸಲಾಯಿತು. ನಂತರ ಆಗುಂಬೆ ಮತ್ತು ಸೋಮೇಶ್ವರದ ಮಧ್ಯೆ ಟ್ಯಾಕ್ಸಿ ಓಡಾಡಲಾರಂಭಿಸಿತು. ರೈಲ್ವೇ ಹಳಿಗಳ ಕೆಳಗೆ

ಬಳಸುವ ಮರದ ಬಾರಾಟಿಗೆಗಳು ಆಗುಂಬೆಯ ಕಾಡುಗಳಿಂದ ಹೋಗುತ್ತಿದ್ದವು. ಅದು ಒಂದು ಉದ್ಯಮವಾಗಿ ಬೆಳೆಯುತ್ತಿದ್ದಂತೆ ಕಣ್ಣು ಬಿಟ್ಟ ಸರ್ಕಾರ ಅದನ್ನು ಮಟ್ಟ ಹಾಕಿತು. ಮಿನಿ ಬಸ್ಸುಗಳನ್ನು ಪ್ರಾರಂಭಿಸಿದ ಮೇಲೆ ಟ್ಯಾಕ್ಸಿ ಉದ್ಯಮ ನೆಲಕಚ್ಚಿತು. ಆಗುಂಬೆಯ ಕಾಡುಗಳಲ್ಲಿ ಬೆತ್ತ ಹೇರಳವಾಗಿ ದೊರೆಯುತ್ತಿದ್ದರಿಂದ ಬೆತ್ತದ ಉದ್ಯಮಗಳು ಪ್ರಾರಂಭವಾದವು.

ಆಗುಂಬೆಗೆ ಒಂದು ಪೌರಾಣಿಕ ಕಥೆಯು ಇದೆ. ಅದೇನೆಂದರೆ ಆಗುಂಬೆ ಜಮದಗ್ನಿ-ರೇಣುಕಾದೇವಿಯವರ ಮಗನಾದ ಪರಶುರಾಮನ ಊರು ಎಂಬ ನಂಬಿಕೆ ಇದೆ. ಅವನು ತನ್ನ ತಂದೆಯ ಮರಣಕ್ಕೆ ಕಾರಣನಾದ ಕಾರ್ತವೀರ್ಯಾರ್ಜುನನನ್ನು ತನ್ನ ಪರಶುವಿಗೆ ಬಲಿಗೊಟ್ಟು, ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯ ಕುಲವನ್ನೇ ನಿರ್ಮೂಲ ಮಾಡಿದನಂತೆ. ಈ ಕ್ಷತ್ರಿಯ ಹತ್ಯೆಯ ಪಾಪವನ್ನು ಕಳೆದುಕೊಳ್ಳಲು ಅಶ್ವಮೇಧಯಾಗವನ್ನು ಮಾಡಿ, ಆತ ಸಮಸ್ತ ಭೂಮಿಯನ್ನು ಕಶ್ಯಪ ಋಷಿಗೆ ಧಾರೆಯೆರೆದು ದಾನ ಕೊಟ್ಟನಂತೆ. ಆಗ ಪರಶುರಾಮನಿಗೆ ಇರಲು ಸ್ಥಳವಿಲ್ಲದೆ ಆಗುಂಬೆಯ ಸಹ್ಯಾದ್ರಿ ಶಿಖರದಲ್ಲಿ ನಿಂತು ಎದುರುಗಡೆಯ ಸಮುದ್ರಕ್ಕೆ ಈ ಪರಶು ಹೋದಷ್ಟು ದೂರ ತನಗೆ ಸ್ಥಳ ಕೊಡು ಎಂದು ಪ್ರಾರ್ಥಿಸಿ ತನ್ನ ಕೊಡಲಿಯನ್ನು ಎಸೆದನಂತೆ. ಸಮುದ್ರ ಸಹ್ಯಾದ್ರಿಯಿಂದ ಹಿಂದಕ್ಕೆ ಉರುಳಿತಂತೆ. ಅಂದಿನಿಂದ ಈ ಭಾಗದ ಪಶ್ಚಿಮ ಕರಾವಳಿಯಲ್ಲಿ ಪರಶುರಾಮ ಕ್ಷೇತ್ರವೆಂದು ಹೆಸರಾಯಿತಂತೆ. ಹೀಗೆ ಪೌರಾಣಿಕವಾಗಿಯೂ ಆಗುಂಬೆಗೆ ಮಹತ್ವವಿದೆ.

ಆಗುಂಬೆಯ ಸೂರ್ಯಾಸ್ತಮಾನದ ಸಮಯದಲ್ಲಿ ಬಣ್ಣ ಬಣ್ಣದ ಮೋಡಗಳು ಆನೆಯ, ಸಿಂಹದ, ವಿವಿಧ ಪ್ರಾಣಿಗಳು, ನಮ್ಮ ಕಲ್ಪನೆಗನುಸಾರವಾಗಿ ಬಗೆ ಬಗೆಯ ರೂಪಗಳನ್ನು ತಾಳಿ ತಮ್ಮ ಪಾತ್ರಗಳನ್ನು ಅಭಿನಯಿಸಿ ಮರೆಯಾಗುತ್ತವೆ. ಯಾವ ಚಿತ್ರಕಾರನ ಚಿತ್ರವೂ ಈ ನಿಸರ್ಗ ನಿರ್ಮಿತ ಕಲಾಕೃತಿಗೆ ಸರಿದೂಗದು ಎಂದೆನಿಸುತ್ತದೆ. ಸೂರ್ಯ ಮುಳುಗುವ ಕೊನೆಯ ಒಂದು ನಿಮಿಷ ಹೊತ್ತಂತೂ ಅಪೂರ್ವ ರಸಗಳಿಗೆ ಎನ್ನಬೇಕು. ಆಗುಂಬೆಯ ಸೂರ್ಯಾಸ್ತಮಾನದ ಸಮಯ ಸೂರ್ಯ ಕವುಚಿಟ್ಟ ಸ್ವರ್ಣ ಕುಂಭಾಕೃತಿಯಾಗಿ, ಅರ್ಧಚಂದ್ರಾಕೃತಿಯಾಗಿ ಕಟ್ಟಕಡೆಗೆ ಬಿದಿಗೆಯ ಚಂದ್ರಲೇಖೆಯಾಗಿ ತನ್ನ ಕೊನೆಯ ರೂಪದಲ್ಲಿ ಮರೆಯಾಗುವ ಸೌಂದರ್ಯ ನಾಟಕ ದೃಶ್ಯ ಆನಂದದ ಹುಚ್ಚು ಹಿಡಿಸುತ್ತದೆ.

ಆಗುಂಬೆಯೆಂದರೆ ಬರೀ ಊರಲ್ಲ, ನನಗೆ ಅದೊಂದು ಭಾವನೆ. ಇಲ್ಲಿ ಮಳೆ, ಚಳಿ ಜಾಸ್ತಿ ಇರಬಹುದು ಆದರೆ ಅಲ್ಲಿ ಇರುವವರಿಗೆ ಮಾತ್ರ ಗೊತ್ತು ಮಳೆಗಾಲದಲ್ಲಿ ನಾವು ಅನುಭವಿಸುವ ಸಂಭ್ರಮ.

●

ನಾಳೆಗೆ

ತುಸು ನೆಮ್ಮದಿ ಬಯಸಿದೆ ಮನವಿಂದು
ನನ್ನವರಾರೆಂದು ಅರಿಯುವಲ್ಲಿ ಸೋತಿರುವೆ
ಎಲ್ಲರೂ ನನ್ನವರೆಂಬ ಭಾವನೆ ಮಾತ್ರ ಸತ್ತಿಲ್ಲ
ನಾಳಿನ ಬಗ್ಗೆ ಭರವಸೆಯಿಲ್ಲ
ಆದರೂ ಕನಸನೊಂದು ಕಟ್ಟಿರುವೆನಲ್ಲಾ
ಇಂದು ಜೊತೆಗಿದ್ದವರು ಕೊನೆತನಕ ಇರುವರೋ ತಿಳಿದಿಲ್ಲ
ಜೊತೆಗೆ ಕಳೆದ ಕ್ಷಣಗಳ ನೆನಪು ಮಾತ್ರ ಶಾಶ್ವತ
ಇಂದಿನ ಖುಷಿಗಾಗಿ ಬದುಕ ಪಯಣ
ನಾಳಿನ ಯೋಚನೆ ನಾಳೆಗೆ.

✍ **ಶ್ರೇಯಾ ಪೂಜಾರಿ,** ದ್ವಿತೀಯ ಬಿ.ಎಸ್ಸಿ.

ತುಮಕೂರು ನಾ ಕಂಡಂತೆ

✍ **ಸಾಮಪ್ರಿಯ ಕೆ. ಸಾಮಗ,** ಪ್ರಥಮ ಬಿ.ಸಿ.ಎ.

"ತುಮಕೂರು ಜಿಲ್ಲೆ" ಬಗ್ಗೆ ನನಗೆ ತಿಳಿದಿರುವ ನಾಲ್ಕಾರು ವಿಷಯಗಳನ್ನು ಹಂಚಿಕೊಳ್ಳಲು ಇಚ್ಛಿಸುತ್ತೇನೆ. 'ತುಮಕೂರು ಜಿಲ್ಲೆ' ನಮ್ಮ ರಾಜಧಾನಿ ಬೆಂಗಳೂರಿಗೆ ಸುಮಾರು 70 ಕಿ.ಮೀ. ದೂರದಲ್ಲಿದೆ. ಪ್ರಸ್ತುತ ತುಮಕೂರು ಎಲ್ಲಾ ರೀತಿಯಿಂದಲೂ ಅಭಿವೃದ್ಧಿ ಕಂಡು ಬೆಂಗಳೂರಿಗೆ ಸಮನಾಗಿ ನಿಂತಿದೆ. ಈ ಜಿಲ್ಲೆಯು "ಶೈಕ್ಷಣಿಕ ನಗರ" ಹಾಗೂ "ಕಲ್ಪತರು ನಾಡು" ಎಂದು ಪ್ರಸಿದ್ಧಿಯನ್ನು ಹೊಂದಿದ್ದು, ಇಂತಹ ಊರಿನಲ್ಲಿ ನಾನು ನನ್ನ 2 ವರ್ಷದ ಪಿ.ಯು.ಸಿ. ವಿದ್ಯಾಭ್ಯಾಸವನ್ನು ಮುಗಿಸಿ ಬಂದಿದ್ದರಿಂದ ನನಗೆ ಈ ಊರಿನ ಬಗ್ಗೆ ಬರೆಯಲು ತುಂಬಾ ಉತ್ಸಾಹ ಹಾಗೂ ಒಲವಿದೆ.

ತುಮಕೂರು ಜಿಲ್ಲೆಯಲ್ಲಿ ಪೌರಾಣಿಕ ಹಾಗೂ ಇತಿಹಾಸ ಪ್ರಸಿದ್ಧ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಅವುಗಳಲ್ಲಿ ಪ್ರಮುಖವಾದವು ಸಿದ್ಧರಬೆಟ್ಟ, ಗೊರವನಹಳ್ಳಿ ಮಹಾಲಕ್ಷ್ಮಿದೇವಸ್ಥಾನ, ಕೈದಾಳ, ಮಧುಗಿರಿ ಬೆಟ್ಟ, ಕುಣಿಗಲ್ ಕೆರೆ, ನಾಮದ ಚಿಲುಮೆ, ದೇವರಾಯನ ದುರ್ಗ, ಪಾವಗಡ ಕೋಟೆ, ಅಮಾನಿ ಕೆರೆ, ಇನ್ನೂ ಅನೇಕ ಪ್ರಸಿದ್ಧ ಸ್ಥಳಗಳನ್ನು ಇಲ್ಲಿ ನಾವು ನೋಡಬಹುದು. ಕರ್ನಾಟಕದ 2ನೇ ದೊಡ್ಡ ಜಿಲ್ಲೆ, ಕರ್ನಾಟಕದ 19 ಜಿಲ್ಲೆಯ ಜನರು ತುಮಕೂರಿನ ಮುಖಾಂತರವೇ ಬೆಂಗಳೂರನ್ನು ತಲುಪಬೇಕು. ಕಾಯಕ ಯೋಗಿ, ತ್ರಿವಿಧ ದಾಸೋಹ, ಕರ್ನಾಟಕ ರತ್ನ, "ನಡೆದಾಡುವ ದೇವರು" ಎಂದೇ ಪ್ರಸಿದ್ಧಿಯನ್ನು ಹೊಂದಿದ ಶ್ರೀ ಸಿದ್ಧಗಂಗಾ ಶ್ರೀಗಳ ಕಾರ್ಯಕ್ಷೇತ್ರ. ಈ ತುಮಕೂರು ಶ್ರೀಗಳ ಸಿದ್ಧಗಂಗಾ ಮಠದಲ್ಲಿ ಜಾತಿ-ಮತ ಭೇದವಿಲ್ಲದೇ, ಲಿಂಗ ಭೇದ ತಾರತಮ್ಯವಿಲ್ಲದೇ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮತ್ತು ಊಟದ ವ್ಯವಸ್ಥೆಯನ್ನು ನೀಡಿದ್ದಾರೆ. ಎಷ್ಟೇ ಹೊತ್ತಿಗೆ ಹೋದರೂ ಭಕ್ತಾದಿಗಳಿಗೆ ಅನ್ನದಾನದ ವ್ಯವಸ್ಥೆ ಇದೆ.

ಶ್ರೀಗಳು 132 ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ ಮತ್ತು ಇವರನ್ನು ಕಾಯಕ ಯೋಗಿ, ತ್ರಿವಿಧ ದಾಸೋಹಿ ಮತ್ತು ಅಭಿನವ ಬಸವಣ್ಣ ಎಂದೂ ಜನರು ಕರೆಯುತ್ತಾರೆ. ಇವರು ವಿಜ್ಞಾನ, ವಾಣಿಜ್ಯ, ಕಲಾ ಮತ್ತು ಶುಶ್ರೂಷೆ ಮುಂತಾದ ಮಹಾವಿದ್ಯಾಲಯಗಳನ್ನು ಸ್ಥಾಪಿಸಿದ್ದಾರೆ. ಇವರನ್ನು ಎಲ್ಲಾ ಮನೆಗಳಲ್ಲೂ ಪೂಜಿಸುತ್ತಾರೆ. ಇವರು ಬಹಳ ಸಮಾಜ ಸೇವೆಯನ್ನು ಮಾಡಿದ್ದಾರೆ ಮತ್ತು ಸಮಾಜದ ಒಳಿತಿಗಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟು, ಇವರಿಂದಲೇ ತುಮಕೂರು ಅಭಿವೃದ್ಧಿಯಾಗಿದೆ, ಹಗಲಿರುಳು ಎನ್ನದೇ ಕಾಯಕವನ್ನು ಮಾಡುತ್ತಿದ್ದರು ಎಂದು ಹೇಳಬಹುದು. ಇವರ ಸಮಾಜ ಸೇವೆಯನ್ನು ನೋಡಿ ಇವರನ್ನು ಭೇಟಿಯಾಗಲು "ಎ.ಪಿ.ಜೆ. ಅಬ್ದುಲ್ ಕಲಾಂ" ಕೂಡ ಬಂದಿದ್ದರು. ಇಂತಹ ಮಹಾನ್ ಯೋಗಿ, ನಡೆದಾಡುವ ದೇವರು ತಮ್ಮ "111"ನೇ ವರ್ಷದಲ್ಲಿ ಲಿಂಗೈಕ್ಯರಾದರು. ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಶ್ರೀಗಳ ವರ್ಧಂತಿ ಮತ್ತು ಜಾತ್ರೆ ತುಂಬಾ ವಿಜೃಂಭಣೆಯಿಂದ ನಡೆಯುತ್ತದೆ.

ತುಮಕೂರಿನ ಪ್ರವಾಸಿ ತಾಣವಾದ "ಮಧುಗಿರಿ ಬೆಟ್ಟವು" ಏಷ್ಯಾದಲ್ಲಿಯೇ 2ನೇ ಅತೀ ಎತ್ತರವಾದ ಬೆಟ್ಟ ಎಂದು ಕರೆಸಿಕೊಂಡಿದೆ. ಇಲ್ಲಿರುವ ಮತ್ತೊಂದು ಜಾಗ "ಕೆರೆದಾಳ". ಈ ಜಾಗವು "ಅಮರ ಶಿಲ್ಪಿ ಜಕಣಾಚಾರಿ" ಅವರ ಹುಟ್ಟೂರು.

ಇವರು ತಮ್ಮ ಒಂದು ಕೈಯಲ್ಲಿ ಕೊನೆಯ ಕಲ್ಲಿನ ಕೆತ್ತನೆಯನ್ನು "ಕೈದಾಳ"ದಲ್ಲಿ ಮಾಡಿದ್ದಾರೆ ಎಂದು ಪ್ರತೀತಿ ಇದೆ. ಇಲ್ಲಿಯೇ ಅವರು ತಮ್ಮ ಎಡ ಕೈಯಲ್ಲಿ ನಿರ್ಮಿಸಿದ ಸುಂದರವಾದ "ಚೆನ್ನಕೇಶವ ದೇವಾಲಯ"ವಿದೆ. ಇದು ಅವರು ತಮ್ಮ ಜೀವಿತಾವಧಿಯಲ್ಲಿ ಕೆತ್ತಿಸಿದ ಕೊನೆಯ ದೇವಾಲಯವೆಂಬುದು ಐತಿಹಾಸಿಕ ವಿಚಾರ. ಈ ದೇಗುಲ ನಿರ್ಮಾಣದ ಕೊನೆಯ ಹಂತದಲ್ಲಿ ಜಕಣಾಚಾರಿಯವರಿಗೆ ಬಲಗೈ ಮತ್ತೆ ಮೂಡಿತು ಎನ್ನುವ ಪ್ರತೀತಿ ಇದೆ. ಹಾಗಾಗಿಯೇ ಇದಕ್ಕೆ ಕೈದಾಳ ಎಂದು ಕರೆಯಲಾಗುತ್ತದೆ.

ತುಮಕೂರಿನ "ಕುಣಿಗಲ್ ಕೆರೆ" ಒಂದು ಪ್ರಸಿದ್ಧವಾದ ಪ್ರವಾಸಿತಾಣ, ಅದು ಕರ್ನಾಟಕದ ದೊಡ್ಡಕೆರೆ ಎಂದು ಪ್ರಸಿದ್ಧಿಯನ್ನು ಹೊಂದಿದೆ. ಇದು ಸುಮಾರು 10-15 ಕಿ.ಮೀ. ವ್ಯಾಪ್ತಿಯನ್ನು ಆವರಿಸಿದೆ. ಈ ಕೆರೆಯು ತುಂಬಾ ಸುಂದರವಾಗಿದೆ ಮತ್ತು ಇಲ್ಲಿ ಕಮಲಗಳು ಯಾವಾಗಲೂ ಅರಳಿರುತ್ತವೆ. ಕೆರೆಯ ದಡದಲ್ಲಿ ವಾಯುವಿಹಾರ ಮಾಡಲು ಜನರು ಬೆಳಿಗ್ಗೆ ಮತ್ತು ಸಂಜೆಯ ಹೊತ್ತಿನಲ್ಲಿ ಬರುತ್ತಾರೆ. ಈ ಕೆರೆಯ ಕುರಿತಾಗಿ ಕೆಲವೊಂದು ಜನಪದ ಕತೆಗಳು, ಹಾಡುಗಳು ಪ್ರಚಲಿತದಲ್ಲಿವೆ.

ಇಲ್ಲಿರುವ ಇನ್ನೊಂದು ಸುಂದರವಾದ ಗಿರಿಧಾಮ "ದೇವರಾಯನ ದುರ್ಗ". ಈ ಬೆಟ್ಟದಲ್ಲಿ ಯೋಗ ನರಸಿಂಹ, ಭೋಗ ನರಸಿಂಹ ಹಾಗೂ ಲಕ್ಷ್ಮೀನರಸಿಂಹ ದೇವಾಲಯಗಳಿವೆ. ಬೆಟ್ಟದ ಸುತ್ತಲೂ ಇರುವ ವನಸಿರಿಯ ಚಿತ್ತಾರ ನೋಡಲು ಅತ್ಯಂತ ರಮಣೀಯ. ಬೆಟ್ಟದ ಕೆಳಗೆ ಇರುವ ಇನ್ನೊಂದು ಪೌರಾಣಿಕ ಹಿನ್ನೆಲೆ ಇರುವ ಸ್ಥಳವೇ "ನಾಮದ ಚಿಲುಮೆ" ಅಂದರೆ ರಾಮಾಯಣ ಕಾಲದಲ್ಲಿ ಶ್ರೀರಾಮನು ಸೀತಾ ಮಾತೆ ಹಾಗೂ ಲಕ್ಷ್ಮಣನೊಡನೆ ಕೆಲಕಾಲ ಇಲ್ಲಿ ನೆಲೆಸಿದ್ದರಂತೆ. ಆಗ ತನ್ನ ಹಣೆಗೆ ನಾಮ ಇಡಲು ನೀರಿಗಾಗಿ ಇಲ್ಲಿ ಹುಡುಕಾಡಿದಾಗ ಎಲ್ಲೂ ನೀರು ಸಿಗಲಿಲ್ಲವಂತೆ. ಆಗ ಶ್ರೀರಾಮನು ತನ್ನ ಬಾಣವನ್ನು ಭೂಮಿಗೆ ಬಿಟ್ಟನಂತೆ, ಆಗ ಭೂಮಿಯಿಂದ ನೀರಿನ ಚಿಲುಮೆ ಹುಟ್ಟಿ, ಆ ಜಾಗವನ್ನು ಇಂದು 'ನಾಮದ ಚಿಲುಮೆ' ಎಂದು ಕರೆಯಲಾಗುತ್ತದೆ ಮತ್ತು ಇಲ್ಲಿ ಶ್ರೀರಾಮನ ಕಾಲಿನ ಗುರುತನ್ನು ಕಾಣಬಹುದು.

ತುಮಕೂರಿನಲ್ಲಿರುವ "ಸಿದ್ಧರ ಬೆಟ್ಟ" ಇದೊಂದು ತಪೋಭೂಮಿಯೆಂದೇ ಪ್ರಸಿದ್ಧ. ಇಲ್ಲಿ ಅನೇಕ ಸಾಧು-ಸಂತರು ತಪಸ್ಸನ್ನು ಗೈದಿದ್ದಾರೆ. ಈಗಲೂ ಇಲ್ಲಿಗೆ ನಾಗಸಾಧುಗಳು ಬಂದು ತಪಸ್ಸನ್ನು ಆಚರಿಸುತ್ತಾರೆ. ಈ ಬೆಟ್ಟದಲ್ಲಿ ಅನೇಕ ಗಿಡಮೂಲಿಕೆ, ಔಷಧೀಯ ಸಸ್ಯಗಳಿವೆ. ಹೀಗೆ ತುಮಕೂರು ಹತ್ತು-ಹಲವು ಅಚ್ಚರಿಗಳನ್ನು ಹೊಂದಿಕೊಂಡ ಒಂದು ಜಿಲ್ಲೆಯಾಗಿದೆ. ಇದು ಅನೇಕ ಕೈಗಾರಿಕೆ ಹಾಗೂ ಔದ್ಯೋಗಿಕ ಕ್ಷೇತ್ರವೂ ಹೌದು. ಅನೇಕ ಸಾಹಿತಿಗಳು, ಕವಿಗಳು, ನಟ-ನಟಿಯರು ಹುಟ್ಟಿರುವ ಹುಟ್ಟೂರು ತುಮಕೂರಾಗಿದೆ.

●

ಮನುಷ್ಯತ್ವದ ಹುಡುಕಾಟ

ತನ್ನೊಳಗೆ ಕೋಟ್ಯಂತರ ಆಸೆಗಳನ್ನು ಬಚ್ಚಿಟ್ಟುಕೊಂಡು
ಮನದೊಳಗೆ ಲಕ್ಷಾಂತರ ಆಸೆ ಆಕಾಂಕ್ಷೆಗಳ ಮುಚ್ಚಿಟ್ಟುಕೊಂಡು
ಜೀವನದೊಳಗೆ ಸಾವಿರಾರು ಕಷ್ಟಗಳನ್ನು ಅನುಭವಿಸಿಕೊಂಡು
ಅಸಮಾಧಾನ ಎನ್ನುವ ತುತ್ತನ್ನು ನುಂಗಲಾಗದೆ, ಉಗುಳಲೂ ಆಗದೆ
ಅಲೆಮಾರಿಯಂತೆ ಹಸಿವನ್ನು ತಡೆದುಕೊಂಡು
ಒಂದೊತ್ತಿನ ಊಟ ಅರಸಿ ಹೊರಟಾಗ
ಮನುಷ್ಯತ್ವದ ಹುಡುಕಾಟ ನಡೆಸಿದಾಗ
ಹಸಿವಿನ ಬೆಲೆ ಮನುಷ್ಯರಿಗೆ ತಿಳಿಯದೆ ಹೋದಾಗ
ದುಡ್ಡಿಲ್ಲದಿದ್ದರೆ ಬದುಕೇ ಶೂನ್ಯವೆಂದು ತಿಳಿಯಿತು.

✍ **ಕೆ. ಈ. ದಿಶಾ,** ತೃತೀಯ ಬಿ.ಕಾಂ.

ನಮ್ಮೂರ ಸುಂದರ ಕುದ್ರುಗಳು

✍ **ಸುಷ್ಮಿತಾ ಎಸ್. ಗಾಣಿಗ,** ಪ್ರಥಮ ಬಿ.ಕಾಂ.

ಕುಂದಾಪುರಕ್ಕೆ 'ಸುಂದರ ಕುಂದಾಪುರ' ಎಂಬ ಹೆಸರು ಬಂದದ್ದು ಪ್ರಾಯಶಃ ಇಲ್ಲಿನ ಹಲವು ಪ್ರಕೃತಿ ರಮಣೀಯ ಕುದ್ರುಗಳಿಂದಲೇ ಇರಬಹುದು. ಕುದ್ರು ಎಂದರೆ ಸುತ್ತಲೂ ನೀರಿನಿಂದ ಸುತ್ತುವರಿದಿರುವ ಭೂ ಪ್ರದೇಶ. ವಿಶಾಲವಾದ ನದಿ ಮಧ್ಯೆ ಅಗಲವಾದ ಜಾಗದಲ್ಲಿ ಮರಳು ಸೇರಿ ಅಲ್ಲಿ ಕಾಂಡ್ಲ ಇತ್ಯಾದಿ ಗಿಡಮರ ಹುಟ್ಟುತ್ತವೆ. ಕಾಲಕ್ರಮೇಣ ಹರಿವ ನೀರಿನಿಂದ ಕೊಚ್ಚಿಕೊಂಡು ಬರುವ ಮರಳಿನ ಪ್ರಮಾಣ ಜಾಸ್ತಿ ಆಗುತ್ತದೆ. ಹೀಗೆ ವಿಸ್ತಾರವಾಗುತ್ತ ಹೋಗುತ್ತದೆ. ಇದು ಒಂದು ನಿರ್ದಿಷ್ಟ ಹಂತವನ್ನು ಮೀರಿ ಎತ್ತರವಾದಾಗ, ಅಂದರೆ ಅಲ್ಲಿ ನೀರು ಏರಲಾರದಷ್ಟು ಎತ್ತರವಾದಾಗ ಜನ ಅಲ್ಲಿ ನೆಲೆನಿಲ್ಲತೊಡಗುತ್ತಾರೆ. ಕೃಷಿ ಮುಂತಾದ ಚಟುವಟಿಕೆಯಲ್ಲಿ ತೊಡಗುತ್ತಾರೆ. ಹೀಗೆ ನದಿಯ ಮಧ್ಯದಲ್ಲಿ ಮನೆ ಮಾಡಿ ಬದುಕು ಆರಂಭಿಸುತ್ತಾರೆ. ಜನವಸತಿ ಆರಂಭ ಆಗುವ ಆ ವಿಸ್ತಾರ ಮರಳಿನ ಪ್ರದೇಶವನ್ನು 'ಹರವು' ಎನ್ನುತ್ತಾರೆ. ಹರವು ನಿರ್ಮಾಣ ಒಂದು ನಿರಂತರ ಕ್ರಿಯೆ. ಇದರಿಂದಾಗಿ ಹೊಸ ಹೆಸರಿನ ಕುದ್ರುಗಳು ಜನ್ಮ ತಳೆಯುತ್ತವೆ. ಹೀಗೆ ಕುದ್ರು ನಿರ್ಮಾಣವಾಗಲು ಕಾರಣವಾಗುವ ಬಹು ಮುಖ್ಯವಾದ ಅಂಶ ನದಿಯಲ್ಲಿ ಬೆಳೆಯುವ ಕಾಂಡ್ಲ ಮರಗಳು. ಇವು ಉದ್ದದ ಬೇರು ಬಿಟ್ಟು ಆಳಕ್ಕೆ ಇಳಿಯುತ್ತದೆ. ಈ ಬೇರು ಹೆಚ್ಚಿನ ಕೆಸರು ಮಣ್ಣನ್ನು ಒಗ್ಗೂಡಿಸಲು ನೆರವಾಗುತ್ತದೆ. ಹೀಗೆ ಕುದ್ರುಗಳ ನಿರ್ಮಾಣದಲ್ಲಿ ಈ ಮರಗಳ ಪಾತ್ರ ಮಹತ್ತರವಾದುದು. ಇಲ್ಲ 'ಪಂಚಗಂಗಾವಳಿ' ನದಿಯು ಹರಿಯುತ್ತಿದ್ದು ಅದು ಕುಬ್ಜಾ, ವಾರಾಹಿ, ಸೌಪರ್ಣಿಕಾ, ಚಕ್ರಾ ಮತ್ತು ಖೇದಕಾ ಹೊಳೆಗಳನ್ನು ಹೊಂದಿದೆ. ಈ ಹೊಳೆಗಳು ಹಲವು ಕುದ್ರುಗಳ ನಿರ್ಮಾಣಕ್ಕೆ ಕಾರಣವಾಗಿದೆ. ಅಂತಹ ಕೆಲವು ಕುದ್ರುಗಳನ್ನು ಪರಿಚಯಿಸುವ ಪ್ರಯತ್ನ ನಮ್ಮದು.

ಹಟ್ಟಿಕುದ್ರು:

ಹಟ್ಟಿಕುದ್ರು ಎಂದೊಡನೆ ನೆನಪಾಗುವುದು ಸವಿ ಬೆಲ್ಲ. ಕಬ್ಬು ಬೆಳೆಯೇ ಪ್ರಧಾನವಾದ ಈ ಕುದ್ರುವಿನಲ್ಲಿ ಬೆಲ್ಲ ತಯಾರಿಸುತ್ತಾರೆ. ವಿಶಿಷ್ಟ ರುಚಿ ಹಾಗೂ ಪರಿಮಳವನ್ನು ಹೊಂದಿರುವ ಕಾರಣ ಇಲ್ಲಿನ ಬೆಲ್ಲ ಕುಂದಾಪುರ ಪರಿಸರದಲ್ಲಿಯೇ ಪ್ರಸಿದ್ಧಿ ಪಡೆದಿದೆ. ಹಟ್ಟಿಕುದ್ರು ಫಲಭರಿತ ಕಬ್ಬಿನ ಗದ್ದೆಗಳನ್ನು ಹೊಂದಿದ್ದು ಎತ್ತ ನೋಡಿದರೂ ಹಸಿರು ಕಂಗೊಳಿಸುತ್ತದೆ.

ಇಲ್ಲಿ ಬಹಳ ಚೆನ್ನಾಗಿ ಉದ್ದವಾದ ಹುಲ್ಲು ಬೆಳೆದು ಹುಲ್ಲುಗಾವಲು ಇದ್ದಿತ್ತು. ಬಸ್ರೂರು ಸಂಸ್ಥಾನ ಹಟ್ಟಿಕುದ್ರು ಸಮೀಪ ಇದ್ದುದರಿಂದ ರಾಜನಿಗೆ ಸೇರಿದ ಮತ್ತು ಆ ಊರಿನ ದನಗಳು ಮೇಯಲು ಈ ಹುಲ್ಲುಗಾವಲಿಗೆ ಹೋಗುತ್ತಿದ್ದವು. ಹೀಗೆ ಹೋದ ದನಗಳು ವಾಪಾಸು ಬರಲು ಇಷ್ಟಪಡದೇ ಮತ್ತು ಅವು ಕೂಡ ಅಲ್ಲೇ ಇರಲು ಬಯಸಿ ಅದನ್ನು ಹಿಂದಕ್ಕೆ ತರಲು ಜನರಿಗೆ ಕಷ್ಟವಾದುದರಿಂದ ಅವುಗಳಿಗೆ ಅಲ್ಲೇ ಹಟ್ಟಿ (ಕೊಟ್ಟಿಗೆ)ಯನ್ನು ಕಟ್ಟಲಾಯಿತು. ನಂತರ ಅವು ಅಲ್ಲೇ ನೆಲೆಸಲು ಆರಂಭಿಸಿದ್ದರಿಂದ ಕ್ರಮೇಣ ಹಟ್ಟಿಕುದ್ರು ಎಂದು ಕರೆಯಲಾಯಿತು ಎಂದು ಪ್ರತೀತಿ ಇದೆ.

ಈಗ ಈ ಹಟ್ಟಿಕುದ್ರು ಬಸ್ರೂರು ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಡುತ್ತವೆ. ಇದು ವಾರಾಹಿ ನದಿ ದಂಡೆಯ ಮೇಲೆ ಇದೆ. ಇದು 400ರಿಂದ 500 ಎಕರೆ ವಿಸ್ತೀರ್ಣ ಹೊಂದಿದ್ದು 3000ಕ್ಕೂ ಅಧಿಕ ಜನಸಂಖ್ಯೆಯಿದೆ. ಹಾಗೆಯೇ ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಧರ್ಮದ ಒಂದೊಂದು ಕುಟುಂಬ ಇದೆ.

ನದಿಯಿಂದ ಸುತ್ತುವರಿದ ಹಟ್ಟಿಕುದ್ರು ಹಲವಾರು ವರ್ಷಗಳ ಹಿಂದೆ ಜನವಸತಿ ಇಲ್ಲದೆ ಕೇವಲ ಹುಲ್ಲುಗಾವಲು ಪ್ರದೇಶವಾಗಿತ್ತು. ಕಾಲ ಕಳೆದಂತೆ ಜನರು ಕೃಷಿ ಅವಲಂಬಿಸಿ ಈ ಕುದ್ರುವಿನಲ್ಲಿ ನೆಲೆಸಲು ಪ್ರಾರಂಭಿಸಿದರು. ಕೃಷಿ ಪ್ರಧಾನವಾದ ನಮ್ಮ ದೇಶದ ಹಲವು ಹಳ್ಳಿಗಳಲ್ಲಿ, ಕುದ್ರುಗಳಲ್ಲಿ ಕೃಷಿಯೇ ಮುಖ್ಯವಾದ ಕಸುಬಾಗಿದೆ. ಅಂತೆಯೇ ಹಟ್ಟಿಕುದ್ರುವಿನಲ್ಲೂ ಕೃಷಿ ಪ್ರಧಾನ ಉದ್ಯೋಗ. ಕಬ್ಬು ಇಲ್ಲಿನ ಪ್ರಧಾನ ಬೆಳೆ. ಇಲ್ಲಿ ಭತ್ತ, ತೆಂಗು, ಅಡಿಕೆಯನ್ನು ಸಹ ಬೆಳೆಯಲಾಗುತ್ತದೆ. ಇಲ್ಲಿನ ಜನರು ಕೃಷಿಯ ಜೊತೆಗೆ ಮೀನುಗಾರಿಕೆ, ಮರಳು ಉದ್ಯಮ, ಕಳ್ಳು (ಶೇಂದಿ) ತೆಗೆಯುವುದು ಇವೇ ಮೊದಲಾದ ಕೆಲಸ ಮಾಡುತ್ತಾರೆ. ತೆಂಗಿನ ಮರದಿಂದ ಕಳ್ಳು ತೆಗೆಯುವುದು ಹಾಗೂ ಕಬ್ಬು ಬೆಳೆ ಇಲ್ಲಿ ಪ್ರಸಿದ್ಧಿ ಪಡೆದಿದೆ ಎಂದರೆ ತಪ್ಪಾಗಲಾರದು. ಇಲ್ಲಿ ನಾಲ್ಕೈದು ಆಲೆಮನೆಗಳು (ಬೆಲ್ಲ ತಯಾರಿಕಾ ಕೇಂದ್ರ) ಇವೆ. ಬೆಲ್ಲದ ಸವಿ ಉಣಿಸುವ ಹಟ್ಟಿಕುದ್ರು, ಕುದ್ರುಗಳಲ್ಲೇ ವಿಶಿಷ್ಟ ಬಗೆಯದು ಎಂಬುದು ಸುತ್ತುಮುತ್ತಲಿನವರ ಅಭಿಪ್ರಾಯ.

ಹಟ್ಟಿಕುದ್ರುವಿನಲ್ಲಿ ಅಂಗನವಾಡಿ, ವಿದ್ಯುತ್, ದೂರವಾಣಿ, ಕುಡಿಯುವ ನೀರಿನ ಸಂಪರ್ಕ ಇದೆ. ಆಸ್ಪತ್ರೆ, ಕಾಲೇಜು ಇತ್ಯಾದಿಗಳಿಗೆ ಇವರು ದೂರದ ಕುಂದಾಪುರವನ್ನು ಅವಲಂಬಿಸಬೇಕಿದೆ. ಇಲ್ಲಿ ಪ್ರಸಿದ್ಧ ಹಟ್ಟಿಕುದ್ರು ಗಣಪತಿ

ದೇವಸ್ಥಾನ, ಪಂಜುರ್ಲಿ ಗುಡಿ, ಶಿವರಾಯ ಗರಡಿ, ನಂದಿಕೇಶ್ವರ ದೈವಸ್ಥಾನಗಳಿದ್ದು ಜಾತ್ರೆ ಕೂಡ ನಡೆಯುತ್ತದೆ. ಒಟ್ಟಿನಲ್ಲಿ ಬಾಯಿಗೆ ಸವಿಯನ್ನು ಮತ್ತು ಕಣ್ಣಿಗೆ ಹಸಿರಿನ ಸವಿಯನ್ನು ನೀಡುತ್ತಿರುವ ಹಟ್ಟಿಕುದ್ರು ಒಂದು ವಿಶಿಷ್ಟ ಕುದ್ರು ಎಂಬುದಕ್ಕೆ ಸಂದೇಹವಿಲ್ಲ.

ಉಪ್ಪಿನಕುದ್ರು:

ಯಾವುದೇ ಒಂದು ಕುದ್ರನ್ನು ಸಂಪರ್ಕಿಸಲು ಅಲ್ಲಿನ ಜನರು ದೋಣಿಯನ್ನು ಅವಲಂಬಿಸಬೇಕಾಗುತ್ತದೆ. ಇವುಗಳ ಎಲ್ಲಾ ಚಟುವಟಿಕೆ ಪ್ರಗತಿಗೆ ಅತೀ ಅವಶ್ಯವಾಗಿರುವುದು ಸಾರಿಗೆ ವ್ಯವಸ್ಥೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಉಪ್ಪಿನಕುದ್ರು. ಉಪ್ಪಿನಕುದ್ರು ತಲ್ಲೂರಿನಿಂದ ನಾಲ್ಕು ಕಿ.ಮೀ. ಪಶ್ಚಿಮಕ್ಕೆ ಇದೆ. ಇದು ಕುಂದಾಪುರದ ಎಲ್ಲಾ ಕುದ್ರುಗಳಿಗೆ ರಾಜನಂತಿದೆ. ಈ ಕುದ್ರು ಮೂರು ಕಡೆ ನೀರಿನಿಂದ ಸುತ್ತುವರಿದಿದ್ದು ಒಂದು ಕಡೆ ತಲ್ಲೂರು ರಾಷ್ಟ್ರೀಯ ಹೆದ್ದಾರಿಯ ಸಂಪರ್ಕವನ್ನು ಹೊಂದಿದೆ. 1972ರಲ್ಲಿ ಕಾಲುವೆಯಂತೆ ಈ ಕುದ್ರುವನ್ನು ಸುತ್ತಿರುವ ಹೊಳೆಗೆ ಒಂದು ಕಡೆ ಮಣ್ಣನ್ನು ಮುಚ್ಚಿಸಿ ರಸ್ತೆ ಸಂಪರ್ಕ ಕಲ್ಪಿಸಲಾಗಿತ್ತು. ಈಗ ಈ ಪ್ರದೇಶಕ್ಕೆ ಉತ್ತಮ ರಸ್ತೆಯನ್ನು ನಿರ್ಮಿಸಲಾಗಿದ್ದು ಬಸ್ಸು, ಲಾರಿಗಳು ಸರಾಗವಾಗಿ ಓಡಾಡುತ್ತವೆ. ಅಷ್ಟೇ ಅಲ್ಲದೆ ಈ ಕುದ್ರು ಹಂತ ಹಂತವಾಗಿ ಪ್ರಗತಿಯತ್ತ ಹೆಜ್ಜೆ ಇಡುತ್ತಿದೆ. ಹಲವು ಸಾಧನೆಗಳಿಗೆ ಈ ಕುದ್ರು ನೆಲೆಯಾಗಿದೆ, ವೈಶಿಷ್ಟ್ಯಗಳ ಬೀಡಾಗಿದೆ.

ಒಂದು ರೀತಿಯಲ್ಲಿ ಪರ್ಯಾಯ ದ್ವೀಪದಂತಿರುವ ಇಲ್ಲಿ ಮೊದಲು ಸುತ್ತಲೂ ಹರಿವ ನೀರನ್ನು ಗದ್ದೆಗೆ ಹರಿಸಿ, ತಡೆಗಟ್ಟಿ ಆವಿ ಮಾಡಿ ಉಪ್ಪನ್ನು ತಯಾರಿಸುತ್ತಿದ್ದರಂತೆ. ಅದನ್ನು ದೋಣಿಯಲ್ಲಿ ಸರಬರಾಜು ಮಾಡುತ್ತಿದ್ದರು. ಉಪ್ಪನ್ನು ತಯಾರಿಸುತ್ತಿದ್ದುದರಿಂದ ಈ ಕುದ್ರುವನ್ನು 'ಉಪ್ಪಿನಕುದ್ರು' ಎನ್ನುತ್ತಾರೆ. ಈಗ ಇಲ್ಲಿ ಉಪ್ಪನ್ನು ತಯಾರಿಸದಿದ್ದರೂ ಹೆಸರು ಮಾತ್ರ ಹಾಗೆ ಉಳಿದಿದೆ.

ಉಪ್ಪಿನಕುದ್ರು ಸುಮಾರು 500 ಎಕರೆಗೂ ಹೆಚ್ಚು ವಿಸ್ತೀರ್ಣ ಹೊಂದಿದೆ. ಆಸುಪಾಸಿನ ಕುದ್ರುಗಳಲ್ಲಿಯೇ ಇದು ಅತೀ ಎತ್ತರವಿದ್ದು ಹೆಚ್ಚಿನ ಜನವಸತಿ ಇದೆ. ಪ್ರಾಚೀನ ಕಾಲದಿಂದಲೂ ಇಲ್ಲಿ ಬೇಡರು ಮೊದಲಾದವರು ವಾಸಿಸುತ್ತಿದ್ದರು. ನಂತರ ವಿಜಯನಗರ ಅರಸರ ರಾಜ್ಯಪಾಲರು ಮಂಗಳೂರು, ಬಾರ್ಕೂರು ಮುಂತಾದ ಸ್ಥಳದಲ್ಲಿ ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿ ಬ್ರಾಹ್ಮಣರು ವಲಸೆ ಬಂದು ವಾಸಿಸಲಾರಂಭಿಸಿದರು. ಈಗ ಇಲ್ಲಿ ಬ್ರಾಹ್ಮಣರು ಮತ್ತು ರಾಮಕ್ಷತ್ರಿಯ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಮತ್ತು ಇತರ ಎಲ್ಲ ಜಾತಿಯ ಜನರೂ ಸಾಮರಸ್ಯದಿಂದ ಬದುಕುತ್ತಿದ್ದಾರೆ. ಇಲ್ಲಿನ ಜನರ ಮುಖ್ಯ ಉದ್ಯೋಗ ಕೃಷಿ. ಭತ್ತ, ತೆಂಗು, ಶೇಂಗಾ ಮುಖ್ಯ ಬೆಳೆಯಾಗಿರುವ ಇಲ್ಲಿ ಹಿಂದೆ ಕಬ್ಬು ಬೆಳೆಯುತ್ತಿದ್ದರು. ಕೃಷಿ ಅಲ್ಲದೆ ಇಲ್ಲಿನ ಜನರು ಹೋಟೆಲು ಉದ್ಯಮದಲ್ಲಿ ಪರ ಊರಿನಲ್ಲೂ ಹೆಸರು ಗಳಿಸಿದ್ದಾರೆ. ಇಲ್ಲಿನ ಜನರ ಮತ್ತೊಂದು ಮುಖ್ಯ ಉದ್ಯೋಗ ಚಿಪ್ಪು ತೆಗೆಯುವುದು. ಇದು ಸ್ಥಳೀಯ ಆರ್ಥಿಕ ಪ್ರಗತಿಗೆ ಬಹುಮುಖ್ಯ ಕೊಡುಗೆಯಾಗಿದೆ. ಇಲ್ಲಿನ ಚಿಪ್ಪಿಗೆ ರಾಜ್ಯದ ಎಲ್ಲಡೆ ಬೇಡಿಕೆ ಇದೆ. ಇಲ್ಲಿ ಅಷ್ಟ ಮಠಗಳಿವೆ. ಐಗಳ ಮಠ, ತೆಂಕೋಣ ಮಠ ಇವುಗಳಲ್ಲಿ ಕೆಲವು. ಇಲ್ಲಿ ವಾಸುದೇವ ದೇವಸ್ಥಾನ, ಸಿದ್ಧಿವಿನಾಯಕ ದೇವಸ್ಥಾನ, ಗೋಪಾಲಕೃಷ್ಣ ದೇವಸ್ಥಾನ ಎಂಬ ಮೂರು ಪುರಾತನ ದೇವಸ್ಥಾನಗಳಿದ್ದು, ಬೇಡರ ಕೊಟ್ಟಿಗೆ ಬೊಬ್ಬರ್ಯ ಎಂಬ ಪ್ರಮುಖ ದೇವಸ್ಥಾನವೂ, ಹಲವು ಇತರ ದೈವ-ದೇವರನ್ನು ಪೂಜಿಸುವ ಸ್ಥಳಗಳೂ ಇವೆ. ಇಲ್ಲಿನ ಎರಡು ದೇವಸ್ಥಾನಗಳಲ್ಲಿ ರಥೋತ್ಸವ ನಡೆಯುತ್ತದೆ. ಉಪ್ಪಿನಕುದ್ರು ಪ್ರಸಿದ್ಧಿ ಪಡೆಯಲು ಇನ್ನೊಂದು ಮುಖ್ಯ ಕಾರಣ ಇಲ್ಲಿನ 'ಯಕ್ಷಗಾನ ಬೊಂಬೆಯಾಟ'. ಇದು ಬೊಂಬೆಯಾಟದ ತವರೂರು. ಇದು ವಿದೇಶಗಳಲ್ಲಿಯೂ ತನ್ನ ಪ್ರಭಾವ ಬೀರಿದೆ. ಇದನ್ನು ಮುನ್ನಡೆಸಿಕೊಂಡು ಹೋಗುತ್ತಿರುವವರು ಕಾಮತ್ ಮನೆತನದವರು. ದೇವಣ್ಣ ಕಾಮತ್, ಕೊಗ್ಗ ಕಾಮತ್ ಮೊದಲಾದವರು ತಮ್ಮ ಕಾಲದಲ್ಲಿ ಇದನ್ನು ಶ್ರೀಮಂತಗೊಳಿಸಿದರು. ಈಗ ಅದನ್ನು ಸಮರ್ಥವಾಗಿ ನಡೆಸಿಕೊಂಡು ಹೋಗುತ್ತಿರುವವರು ಭಾಸ್ಕರ್ ಕಾಮತ್. ಉಪ್ಪಿನಕುದ್ರುವಿನಲ್ಲಿ ಉತ್ತಮ ಸಾರಿಗೆ ವ್ಯವಸ್ಥೆ, ವಿದ್ಯುತ್, ದೂರವಾಣಿ, ಪಶು ಚಿಕಿತ್ಸಾಲಯ, ಪ್ರಾಥಮಿಕ ಮತ್ತು ಪ್ರೌಢ ಶಾಲೆ, ಹಾಲಿನ ಡೈರಿ, ಅಂಗನವಾಡಿ ಕೇಂದ್ರಗಳಿವೆ. ಇವು ಇದರ ಬೆಳವಣಿಗೆಯನ್ನು ಸೂಚಿಸುತ್ತದೆ. ಒಟ್ಟಿನಲ್ಲಿ ಸಾಮಾಜಿಕ ಸಾಮರಸ್ಯ, ಶೈಕ್ಷಣಿಕ, ಆರ್ಥಿಕ ಪ್ರಗತಿ ಇವುಗಳಿಂದಾಗಿ 'ಕುದ್ರುಗಳ ರಾಜ' ಎಂಬ ಸೂಕ್ತ ಹೆಸರನ್ನೇ ಇದು ಪಡೆದಿದೆ. 'ಲವಣಪುರ' ಎಂಬ ಪರ್ಯಾಯ ಹೆಸರನ್ನೂ ಹೊಂದಿರುವ ಈ ಕುದ್ರು ಉಳಿದ ಕುದ್ರುಗಳಿಗಿಂತ ಉನ್ನತ ಮಟ್ಟದಲ್ಲಿದೆ.

●

ನೇತ್ರಾಣಿ ದ್ವೀಪ

✍ **ಮೋನಿಷಾ ಎಂ. ಮೊಗೇರ್,** ಪ್ರಥಮ ಬಿ.ಕಾಂ.

ಪಾರಿವಾಳ ದ್ವೀಪ ಎಂದು ಕರೆಯಲ್ಪಡುವ ನೇತ್ರಾಣಿ ಅರಬ್ಬೀ ಸಮುದ್ರದಲ್ಲಿರುವ ಭಾರತದ ಒಂದು ದ್ವೀಪ. ಇದು ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನಲ್ಲಿ ಕಾಣಸಿಗುತ್ತದೆ. ಮುರುಡೇಶ್ವರದಿಂದ ಸರಿಸುಮಾರು 10 ಕಿ.ಮೀ. ದೂರದಲ್ಲಿದೆ. ಇಲ್ಲಿ ಪಾರಿವಾಳಗಳಲ್ಲದೇ, ಕಾಡು ಮೇಕೆಗಳು ಕಂಡುಬರುತ್ತವೆ. ಇಲ್ಲಿ ಸ್ಕೂಬಾ ಡೈವಿಂಗ್ ನಡೆಸಲು ಪ್ರಶಸ್ತವಾದ ಜಾಗವಾಗಿದೆ. ಇದನ್ನು ಸ್ಥಳೀಯವಾಗಿ ನೇತ್ರಾ, ಗುಡ್ಡೆ ಎಂದು ಕರೆಯುತ್ತಾರೆ. ಇಲ್ಲಿ ಪ್ರಸಿದ್ಧ ಹಿಂದೂ ದೇವಾಲಯವಾದ ಜೈ ಭಜರಂಗಬಲಿ ದೇವಾಲಯವೂ ಇದೆ. ಇದು ಹೃದಯಾಕಾರದ ದ್ವೀಪವಾಗಿದೆ.

ಅಷ್ಟೇ ಅಲ್ಲದೇ ನೇತ್ರಾಣಿ ಹವಳದ ದ್ವೀಪವಾಗಿದ್ದು, ಇಲ್ಲಿ ವಿವಿಧ ಜಾತಿಯ ಮೀನುಗಳು, ಈಲ್ ಮತ್ತು ಸಿಗಡಿಗಳ ಅನೇಕ ಪ್ರಭೇದಗಳನ್ನು ಕಾಣಬಹುದು. ಈ ದ್ವೀಪಕ್ಕೆ ಹೋಗಲು ಎಲ್ಲಾ ಸಮಯದಲ್ಲೂ ಅವಕಾಶವನ್ನು ನೀಡುವುದಿಲ್ಲ. ಮಳೆಗಾಲದಲ್ಲಿ ಇಲ್ಲಿ ಅವಕಾಶವೇ ಇರುವುದಿಲ್ಲ.

ಭಾರತೀಯ ನೌಕಾಪಡೆಯ ಗುರಿ ಅಭ್ಯಾಸಕ್ಕಾಗಿ ಕೂಡ ಈ ದ್ವೀಪವನ್ನು ಬಳಸುತ್ತಾರೆ. ಆ ಸಮಯದಲ್ಲಿ ಅಲ್ಲಿಗೆ ಹೋಗಲು ಅನುಮತಿಯೇ ಇರುವುದಿಲ್ಲ. ಎರಡು ದಿನಗಳ ಹಿಂದೆಯೇ ಸುತ್ತ-ಮುತ್ತಲಿನ ಪ್ರದೇಶಗಳಿಗೆ ಯಾವುದೇ ದೋಣಿ ಹಾಗೂ ಬೋಟ್‌ಗಳು ಬರದಂತೆ ನೋಡಿಕೊಳ್ಳುತ್ತಾರೆ. ನಮಗೆಲ್ಲ ಆ ಸಮಯದಲ್ಲಿ ದೊಡ್ಡ ದೊಡ್ಡ ಬಂದೂಕಿನ ಶಬ್ದಗಳು ಹಾಗೂ ಬಾಂಬ್ ದಾಳಿಗಳಾದಂತೆ ಅನ್ನಿಸುತ್ತಿತ್ತು.

ಸ್ಕೂಬಾ ಡೈವಿಂಗ್: ನೇತ್ರಾಣಿ ದ್ವೀಪವು 15 ರಿಂದ 20 ಮೀಟರ್ (49.2 ರಿಂದ 65.6 ಅಡಿ) ವರೆಗಿನ ಆಳವನ್ನು ಹೊಂದಿರುವ ಹಲವಾರು ಡೈವ್ ಸೈಟ್‌ಗಳನ್ನು ಹೊಂದಿದೆ. ಡೈವಿಂಗ್ ಜೂನ್ ಮತ್ತು ಸೆಪ್ಟೆಂಬರ್ ನಡುವೆ ಜನಪ್ರಿಯವಾಗಿದೆ ಮತ್ತು ದ್ವೀಪದ ಹತ್ತಿರ ಲಂಗರು ಹಾಕಲಾದ ದೋಣಿಯಿಂದ ಮಾಡಲಾಗುತ್ತದೆ. ದ್ವೀಪದ ಸುತ್ತಲೂ ಬೃಹತ್ ಅನೇಕ ಜಾತಿಯ ವೈವಿಧ್ಯಮಯ ಮೀನುಗಳೊಂದಿಗೆ ಅನೇಕ ಹವಳದ ಬಂಡೆಗಳಿವೆ. ಭಜರಂಗಬಲಿ ದೇವಾಲಯ ಅತೀ ಪುರಾತನವಾದ ದೇವಾಲಯವಾಗಿದೆ. ಪುರಾತನವಾದ ಈ ಹನುಮಾನ್ ದೇವಾಲಯಕ್ಕೆ ಪ್ರತಿ ವರ್ಷ ಸಾವಿರಾರು ಜನರು ಭೇಟಿ ನೀಡುತ್ತಾರೆ. ಹನುಮಂತ ದೇವರು ಇಲ್ಲಿ ಇಳಿದು ಶ್ರೀರಾಮನ ಜೇಡಿಮಣ್ಣಿನ ಪ್ರತಿಮೆಯನ್ನು ರಚಿಸಿದ್ದಾರೆ ಎಂದು ಹೇಳಲಾಗುತ್ತದೆ.

ಲಕ್ಷ್ಮಣನನ್ನು ರಕ್ಷಿಸಲು ಭಗವಾನ್ ಹನುಮಂತನು ಸಂಜೀವಿನಿ ಪರ್ವತವನ್ನು ಹುಡುಕುತ್ತಾ ಬರುವಾಗ ಅವನು ಇಲ್ಲಿ ಸ್ವಲ್ಪ ಕಾಲ ವಿಶ್ರಮಿಸಿದನು ಮತ್ತು ಭಗವಾನ್ ರಾಮನ ಪ್ರತಿಮೆಯನ್ನು ಮಾಡಿ ಇಲ್ಲಿ ಪೂಜಿಸಿ ಸ್ಥಳವನ್ನು ತೊರೆದನು ಎಂಬ ಪ್ರತೀತಿ ಇದೆ.

ಈ ದ್ವೀಪವು ಅನೇಕ ವಿಶೇಷತೆಗಳನ್ನು ಒಳಗೊಂಡಿದೆ. ನೀರಿನಲ್ಲಿ ಹಲವಾರು ರೀತಿಯ ಸಾಹಸಿ ಆಟಗಳನ್ನು ಈ ನೇತ್ರಾಣಿ ಪರಿಸರದಲ್ಲಿ ನಡೆಸಲಾಗುತ್ತವೆ. ಸ್ಕೂಬಾ ಡೈವ್ ಮತ್ತು ಸ್ಕೂಬಾ ಡೈವಿಂಗ್ ನಡೆಸುವ ತರಬೇತಿಗಳನ್ನು ನಡೆಸುವ ಖಾಸಗಿ ಕಂಪನಿಗಳು ಇವೆ. ಇವರು ನೀರಿಗಿಳಿಯುವ ಮುನ್ನ ಡೈವಿಂಗ್‌ನ ತರಬೇತಿಯನ್ನು ನೀಡುತ್ತಾರೆ. ಹಾಗಾಗಿ ನೀರಿನೊಳಗೆ ಮೀನಿನಂತೆ ಈಜಲು ಸಾಧ್ಯವಾಗುವುದು. ವಿವಿಧ ರೀತಿಯ ಜಲಚರಗಳನ್ನು ನೀರೊಳಗಿನ ತಮ್ಮ ನೈಜ ಪರಿಸರದಲ್ಲಿ ನೋಡುವುದು ಮತ್ತು ವರ್ಣರಂಜಿತ ಹವಳಗಳನ್ನು ನೋಡುವುದು ಮರೆಯಲಾಗದ ಅನುಭವವನ್ನು ಉಂಟುಮಾಡುತ್ತದೆ. ಇದು ಕರಾವಳಿಯ ಪ್ರತಿಯೊಬ್ಬರೂ ನೋಡಲೇಬೇಕಾದ ಒಂದು ಸುಂದರ ಸ್ಥಳವಾಗಿದೆ.

●

ಮಳೆಗಾಲದಲ್ಲಿ ಮಲೆನಾಡು

✍ **ವರುಣ್ ಹೆಗಡೆ,** ಪ್ರಥಮ ಬಿ.ಕಾಂ.

ಮಲೆನಾಡು ತನ್ನದೇ ಆದ ಭೌಗೋಳಿಕತೆ, ಮಳೆಕಾಡು, ತಿಂಗಳುಗಟ್ಟಲೆ ಸುರಿಯುವ ಮಳೆ ಮತ್ತು ಹವಾಮಾನದಿಂದ ಪ್ರಸಿದ್ಧಿ ಪಡೆದಿದೆ. ಮಲೆನಾಡು ಅರ್ಥಾತ್ ಮಳೆಯ ನಾಡು ಎಂದು ಹೇಳಬಹುದು. ಮಳೆಗಾಲದಲ್ಲಿ ಮಲೆನಾಡಿನ ಸೌಂದರ್ಯ ಇಮ್ಮಡಿಗೊಳ್ಳುವುದಂತೂ ಸತ್ಯ. ಅದನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬವೇ ಸರಿ. ಮಳೆಗಾಲದಲ್ಲಿ ಭೂಮಿಯ ಹಸಿ ಮೈಗೆ ಹನಿ ಹನಿಯಾಗಿ ಉದುರುವ ಮಳೆ ಹನಿಗಳು, ಮಳೆಯ ಬರುವಿಕೆಗೆ ಕಾದು ಕುಳಿತಿರುವ ಭೂಮಿ, ಮಳೆ ಹನಿ ಧರೆಗಿಳಿದು ಭೂಮಿಯನ್ನು ತೊಯ್ದು ಬಳಿಕ ಚಿಗುರೊಡೆದು ಬೆಳೆಯುವ ವಿವಿಧ ಪ್ರಭೇದದ ಸಸ್ಯರಾಶಿಗಳು ಬೆಳೆದು ಇಡಿಯ ಭೂಮಂಡಲಕ್ಕೆ ಹಸಿರು ಸೀರೆಯನ್ನು ಉಡಿಸಿದಂತೆ ಕಂಡುಬರುತ್ತದೆ. ಇದೇ ಸಂದರ್ಭದಲ್ಲಿ ಮಣ್ಣಿನ ಮಕ್ಕಳಾದ ರೈತರ ಸಂಭ್ರಮ, ಸೂರ್ಯನೇ ಮರೆಯಾಗುವಂತೆ ಕಾಣುವ ಆ ಮಳೆಯ ನಡುವಲ್ಲಿ ರೈತರು ಗದ್ದೆಗಳ ಕಡೆಗೆ ಕೆಲಸಕ್ಕೆ ಹೋಗುವುದನ್ನು ನೋಡುವ ಸಂಭ್ರಮವೇ ಇನ್ನೊಂದು ರೀತಿಯ ಆನಂದ. ವ್ಹಾ! ನಿಜಕ್ಕೂ ಮಲೆನಾಡು ಭೂಲೋಕದ ಸ್ವರ್ಗವೇ ಸರಿ.

ಮಳೆಗಾಲವನ್ನು ಉತ್ತರಿಸಲು ಮಲೆನಾಡಿಗರ ಪೂರ್ವತಯಾರಿ:

ಮಳೆಗಾಲ ಪ್ರಾರಂಭವಾಗುತ್ತಿದೆ ಎಂದಾದರೆ ಮಲೆನಾಡಿಗರಿಗೆ ಎಷ್ಟು ಆನಂದವೋ ಅಷ್ಟೇ ಮಳೆಗಾಲವನ್ನು ಕಳೆಯಲು ಮಲೆನಾಡಿನ ಜನರು ಪೂರ್ವತಯಾರಿಯನ್ನು ಮಾಡಿಕೊಳ್ಳುತ್ತಾರೆ. ಒಂದು ಕಡೆಯಲ್ಲಿ ಬೇಸಿಗೆಯ ಸೂರ್ಯನ ತಾಪಕ್ಕೆ ಬತ್ತಿರುವ ಕೆರೆ, ಹೊಳೆಗಳು ತುಂಬಿ ಹರಿಯುತ್ತವೆ. ಬಿಸಿಲಿನ ಝಳಕ್ಕೆ ತಮ್ಮ ಜಮೀನು-ಹೊಲಗಳು ಒಣಗಿ ನಿಂತಿರುವ ಆ ಕಾಲಕ್ಕೆ ಮುಂಗಾರಿನ ಪ್ರವೇಶದಿಂದ ತಂಪನ್ನು ನೀಡುತ್ತದೆ ಎನ್ನುವ ಸಂತೋಷ ಜನರಿಗೆ ಒಂದು ಕಡೆಯಾದರೆ, ಮುಂಗಾರಿನ ಪ್ರವೇಶಕ್ಕೂ ಮುನ್ನ ಅತಿ ಅವಶ್ಯವಾಗಿ ಮಾಡಿಕೊಳ್ಳಲೇಬೇಕಾದ ಕೆಲಸ-ಕಾರ್ಯದ ತಲೆಬಿಸಿ ಇನ್ನೊಂದು ಕಡೆ. ಸಾಮಾನ್ಯವಾಗಿ ಮಲೆನಾಡಿನ ಬಹುತೇಕ ಜನರ ಮನೆಗಳಲ್ಲಿ ಹಂಡೆಯ ನೀರನ್ನು ಕಾಯಿಸುವುದಕ್ಕೆ ಕಟ್ಟಿಗೆಯ ಅವಶ್ಯಕತೆ ಇದೆ, ಆದ ಕಾರಣ ಜನರು ಮುಂಗಾರಿನ ಪ್ರವೇಶಕ್ಕೂ ಮುನ್ನ ಕಟ್ಟಿಗೆಯನ್ನು ಸಿದ್ಧಪಡಿಸಿ ಮನೆಯೊಳಗೆ ಸಾಗಿಸುವ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಇನ್ನು ರೈತರು, ಮಲೆನಾಡಿನ ವಾಣಿಜ್ಯ ಬೆಳೆ ಅಡಿಕೆ. ಮಲೆನಾಡಿನಲ್ಲಿ ಇರುವ ಹೆಚ್ಚಿನ ಪ್ರಮಾಣದ ರೈತರು ಅಡಿಕೆ ಬೆಳೆಗಾರರು. ಆದಕಾರಣ ರೈತರು ಮಳೆಗಾಲದ ಪ್ರಾರಂಭಕ್ಕೂ ಮುನ್ನ ತೋಟದ ಬಣ್ಣದ ಕಾಲಿಗೆಯನ್ನು ಎತ್ತುವುದು ಅಂದರೆ ಸುರಿದ ಮಳೆಯ ನೀರು ಸರಾಗವಾಗಿ ಹರಿದು ಹೋಗುವುದಕ್ಕೆ ದಾರಿಯನ್ನು ಮಾಡಿಕೊಡುತ್ತಾರೆ. ಇನ್ನು ಬೇಸಿಗೆಯಲ್ಲಿ ತೋಟಕ್ಕೆ ಗೊಬ್ಬರವನ್ನು ಹಾಕುವುದೋ, ದರಕನ್ನು ಕಾಡಿನಿಂದ ತಂದು ತೋಟದ ಬಣ್ಣಕ್ಕೆ ಮುಚ್ಚುವುದೋ ಇತ್ಯಾದಿ ಕೆಲಸದಲ್ಲಿ ಕಾರ್ಯನಿರತರಾಗುತ್ತಾರೆ. ಇತ್ತೀಚಿನ ದಿನಗಳಲ್ಲಿ ಡ್ರೈನೇಜ್ ವ್ಯವಸ್ಥೆಯನ್ನು ತೋಟಕ್ಕೆ ಅಳವಡಿಸಿದ ಕಾರಣ ರೈತರಿಗೆ ಕೆಲಸ ಸ್ವಲ್ಪ ಕಡಿಮೆ. ಇನ್ನು ಗದ್ದೆಯನ್ನು ಹೊಂದಿರುವ ರೈತರು ಗದ್ದೆಯ ಹಾಳಿಯನ್ನು ಕಡಿದು, ಭತ್ತದ ಬೀಜದ ಬಿತ್ತನೆಯನ್ನು ಮಾಡಿ ಮುಂಗಾರಿನ ನಿರೀಕ್ಷೆಯಲ್ಲಿರುತ್ತಾರೆ. ಮಲೆನಾಡಿನಲ್ಲಿ ಮಳೆಗಾಲದ ಪ್ರಾರಂಭಕ್ಕೂ ಮುನ್ನ ಪ್ರಮುಖವಾಗಿ ಮಾಡಲೇಬೇಕಾದ ಇನ್ನೊಂದು ಕಾರ್ಯವಿದೆ. ಮಲೆನಾಡಿಗರ ಹೊರತು ಎಷ್ಟೋ ಜನರಿಗೆ ಇದು ಗೊತ್ತಿರದೇ ಇರಬಹುದು. ಅದೇನೆಂದರೆ, ವಿದ್ಯುತ್ ತಂತಿಯನ್ನು ಸವರುವುದು. ಆಡು ಭಾಷೆಯಲ್ಲಿ ಹೇಳಬೇಕು ಅಂದರೆ ಮಲೆನಾಡಿನಲ್ಲಿ ಬಹುತೇಕ ವಿದ್ಯುತ್ ತಂತಿಗಳು ಕಾಡಿನ ಮಧ್ಯೆ ಹಾದು ಹೋಗುತ್ತದೆ. ಆ ತಂತಿಗಳ ಮೇಲೆ ಇರುವ ಮರದ ಹೆಣೆಗಳನ್ನು ಊರಿನ ಜನರೆಲ್ಲಾ ಒಂದು ದಿವಸ ಒಟ್ಟಾಗಿ ಕಡಿದು ವಿದ್ಯುತ್ ಲೈನ್‌ಗಳನ್ನು ಸ್ವಚ್ಛಗೊಳಿಸುತ್ತಾರೆ. ಒಂದು ದಿನವಿಡೀ ಬೆಳಿಗ್ಗೆಯಿಂದ ಸಂಜೆಯವರೆಗೆ ಕಾಡನ್ನು ಸುತ್ತಾಡಿ ಎಲ್ಲೆಲ್ಲಿ ವಿದ್ಯುತ್ ಲೈನುಗಳು ಹಾದು ಹೋಗಿದೆ ಎಂದು ವೀಕ್ಷಿಸಿ ಲೈನ್‌ಗಳನ್ನು

ಸ್ವಚ್ಛಗೊಳಿಸುತ್ತಾರೆ. ಮರ ಏರುವುದರಲ್ಲಿ ಪ್ರವೀಣತೆಯನ್ನು ಪಡೆದ ವ್ಯಕ್ತಿಗೆ ಅಂದಿನ ದಿನ ತುಂಬಾ ಕೆಲಸ ಪಾಪ. ಊರಿನ ಹಿರಿಯವರ ಜೊತೆಯಲ್ಲಿ ಕಿರಿಯರು, ಮಕ್ಕಳು, ಈ ಕೆಲಸದಲ್ಲಿ ಭಾಗವಹಿಸಿ ಹರಟೆ, ಕೇಕೆಯನ್ನು ಹೊಡೆದು ಸೂರ್ಯ ಮುಳುಗುವುದರ ಒಳಗೆ ಅಂತೂ ಇಂತೂ ಅಂದಿನ ಕೆಲಸ ಮುಗಿಸಿ ತಮ್ಮ ತಮ್ಮ ಮನೆಗೆ ಹೋಗುವುದು. ಮಲೆನಾಡಿನ ಊರಿನ ಜನರೆಲ್ಲಾ ಸೇರಿಕೊಂಡು ಮಾಡುವ ಕೆಲಸದಲ್ಲಿ ಈ ಲೈನ್ ಸವರುವುದು ಒಂದು. ಎತ್ತರವಾದ ಏಣಿ, ಅರಗತ್ತಿ, ಕತ್ತಿ ಮತ್ತೆ ಈ ಕೆಲಸ ಮಾಡುವುದಕ್ಕೆ ಉತ್ಸಾಹ ತರಲು ಎಲೆ-ಅಡಿಕೆ (ಕೌಳ) ಜನರಿಗೆ ಬೇಕಾಗುವ ವಸ್ತುಗಳು. ಆದರೆ ಕೆಲವೊಮ್ಮೆ ವಿಪರೀತ ಮಳೆಯ ಕಾರಣ ಜನರ ಶ್ರಮ ಎನ್ನುವುದು ವ್ಯರ್ಥವಾಗುತ್ತದೆ. ಈ ಕೆಲಸದಲ್ಲಿ ಲೈನ್‌ಮ್ಯಾನ್‌ಗಳು ಸಹಕರಿಸುತ್ತಾರೆ. ಇನ್ನು ಹೆಂಗಸರಿಗಂತೂ ಮಳೆಗಾಲ ಪ್ರಾರಂಭವಾಗುವ ಮುನ್ನ ಬೇಸಿಗೆಯಲ್ಲಿ ಮಳೆಗಾಲದ ಖರ್ಚಿಗೆ ಬೇಕಾಗಿ ಹಲಸಿನಕಾಯಿ ಹಪ್ಪಳ, ಸಂಡಿಗೆ ಮಾಡಿ ಸಂಗ್ರಹಿಸಿಟ್ಟುಕೊಳ್ಳುವುದೇ ಒಂದು ದೊಡ್ಡ ಕೆಲಸ. ಇದಕ್ಕೆ ಬೇಕಾಗಿ ಹಲಸಿನಕಾಯಿಯನ್ನು ಮರದಿಂದ ಇಳಿಸಿಕೊಡಲು ದಿನ ಬೆಳಗಾದರೆ ಮನೆಯ ಗಂಡಸರಿಗೆ ಒತ್ತಾಯಿಸುತ್ತಾರೆ ಇಲ್ಲದೇ ಹೋದರೆ ಕೆಲಸಕ್ಕೆ ಬರುವ ಕೂಲಿಗರಿಗೆ ಒತ್ತಾಯಿಸುತ್ತಾರೆ.

ಹೀಗೆ ಮಲೆನಾಡಿನ ಜನರು ಬೇಸಿಗೆಯಲ್ಲಿ ಅನೇಕ ಕೆಲಸ-ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಮಳೆಗಾಲಕ್ಕೆ ಬೇಕಾದ ಎಲ್ಲಾ ಕಾರ್ಯಗಳನ್ನು ಮಾಡಿಕೊಂಡು ಮುಂಗಾರಿನ ನಿರೀಕ್ಷೆಯಲ್ಲಿರುತ್ತಾರೆ.

ಮಲೆನಾಡಿನಲ್ಲಿ ಮಳೆಗಾಲದಲ್ಲಿ ಕಾಣಸಿಗುವ ಆಹಾರ ಪದಾರ್ಥಗಳು ಮತ್ತು ಜೀವರಾಶಿಗಳು:

ಮಲೆನಾಡು ಎಂದರೆ ಪ್ರಾಕೃತಿಕ ಸೊಬಗಿನ ತವರೂರು. ಅದರಲ್ಲಿಯೂ ಮಳೆಗಾಲದಲ್ಲಿ ಕಾಣಸಿಗುವ ಅಂದರೆ ಭೂಮಿಯಲ್ಲಿ, ಗಿಡದಲ್ಲಿ ಹುಟ್ಟಿಕೊಳ್ಳುವ ಆಹಾರ ಪದಾರ್ಥಗಳಿಂದ ಮಳೆಗಾಲದಲ್ಲಿ ಜೀವ ತಳೆಯುವ ಅಥವಾ ಕ್ರಿಯಾಶೀಲಗೊಳ್ಳುವ ಅನೇಕ ಜೀವರಾಶಿಗಳಿಂದ ಮಲೆನಾಡಿನ ಸೊಬಗು ಇಮ್ಮಡಿಯಾಗುತ್ತದೆ. ಮಳೆಗಾಲ ಪ್ರಾರಂಭವಾಗಿ ಶ್ರಾವಣ ಮಾಸದಲ್ಲಿ ಬಿದಿರುಮಟ್ಟಿಯಲ್ಲಿ ಕಳಲೆಗಳು ಬಿಡುತ್ತವೆ. ಕಳಲೆ ಎಂದರೆ ಎಳೆಯ ಬಿದಿರು - ಇದೇ ಮುಂದೆ ಬೆಳೆದು ಬಿದಿರುಗಳಾಗುವುದು. ಈ ಕಳಲೆಯನ್ನು ಜನರು ಕತ್ತರಿಸಿ ತಂದು ಎರಡು-ಮೂರು ದಿನ ನೀರಿನಲ್ಲಿ ನೆನೆಸಿ, ನೀರನ್ನು ಬದಲಿಸಿ ಅದನ್ನು ಸಾರು, ಪಲ್ಯ ಇತ್ಯಾದಿಗಳನ್ನು ಮಾಡಿ ತಿನ್ನುತ್ತಾರೆ. ಹಾಗೆಯೇ ನೀರಿನಲ್ಲಿ ನೆನೆಸದೆ ತಿನ್ನಲು ಅದು ಬಲು ಕಹಿ. ಆದರೆ ನೀರಿನಲ್ಲಿ ನೆನೆಸಿ ಸಾರು, ಪಲ್ಯಗಳನ್ನು ಮಾಡಿ ತಿಂದರೆ ಬಾಯಲ್ಲಿ ನೀರೂರುವಷ್ಟು ರುಚಿಯಾಗುತ್ತದೆ. ಈ ಕಳಲೆಯ ವಿಶೇಷವೇನೆಂದರೆ, ದನಕರುಗಳು ಮಟ್ಟಿಯಲ್ಲಿ ಇರುವಾಗಲೇ ಅದನ್ನು ಮುರಿದು ತಿಂದು ಬಿಡುತ್ತವೆ. ಆಗ ಏನು ಸಮಸ್ಯೆಯಿಲ್ಲ. ಆದರೆ ಕಳಲೆಗೆ ಕಬ್ಬಿಣ ತಾಗಿತು ಎಂದಾದರೆ ಅದನ್ನು ದನಕರುಗಳು ತಿಂದರೆ ಅದು ಅವುಗಳಿಗೆ ವಿಷ. ಆದ್ದರಿಂದ ಕಳಲೆಯನ್ನು ಕತ್ತಿಯಲ್ಲಿ ಸೋಯಿಸಿದ ಬಳಿಕ ಅದರ ಬೇಡದೇ ಇರುವ ಪದಾರ್ಥವನ್ನು ದನಕರುಗಳಿಗೆ ತಿನ್ನಲು ಕೊಡುವುದಿಲ್ಲ. ಮತ್ತೆ ಈ ಕಳಲೆಯನ್ನು ಜನರು ತಿಂದರೆ ಎಲ್ಲಿಯಾದರೂ ಬಿದಿರುಮುಳ್ಳು ಜನರಿಗೆ ನಾಟಿದರೆ ಅದು ನಂಜಾಗುವುದಿಲ್ಲ. ಇನ್ನು ಕೊಡೆ ಅಮಾವಾಸ್ಯೆ ಮತ್ತು ನಾಗರಪಂಚಮಿಯ ಸಮಯದಲ್ಲಿ ಏಳುವ ಹುತ್ತದ ಅಣಬೆ ಮತ್ತು ಮುಂಗಾರಿನ ಪ್ರಾರಂಭದಲ್ಲಿ ಜೋರಾದ ಮಳೆ ಮತ್ತು ಗುಡುಗಿನಿಂದ ಭೂಮಿಯ ಅಡಿಯಿಂದ ಮೇಲಕ್ಕೆ ಬರುವ ಕರಿತಲೆಯ ಅಣಬೆಗಳನ್ನು ಮಲೆನಾಡಿನ ಜನರು ತಿನ್ನುತ್ತಾರೆ. ಅಣಬೆಯನ್ನು ಕಿತ್ತು ತಂದು ಅದನ್ನು ತೊಳೆದು, ಸೋಯಿಸಿ ಅದರಿಂದ ಕೂರ್ಮ ಮಾಡಿ ರೊಟ್ಟಿಯ ಜೊತೆಗೆ ತಿನ್ನುತ್ತಾರೆ. ಮಲೆನಾಡಿನಲ್ಲಿ ಮಳೆಗಾಲದಲ್ಲಿ ಸಿಗುವ ತಿನ್ನಲು ಬರಬಹುದಾದ ಕೆಲವು ಅಣಬೆಗಳು: ಚುಳ್ಳಣಬಿ, ಹೆಗ್ಗಲಣಬಿ, ನುಚ್ಚಣಬಿ, ಅಡಕೆ ಅಣಬಿ, ಹಯ್ಗನ ಅಣಬಿ ಇತ್ಯಾದಿ. ಈ ಅಣಬೆಗಳು ತಿನ್ನುವುದಕ್ಕೆ ಎಷ್ಟು ರುಚಿಯೋ ಅಷ್ಟೇ ಪೌಷ್ಟಿಕಾಂಶವನ್ನು ಹೊಂದಿರುತ್ತದೆ. ಇನ್ನು ಹತ್ತು ಮೀನು, ಮಳೆಗಾಲದ ಶುರುವಿಗೆ ಜಮೀನಿನ ನೀರು ಹಳ್ಳಕ್ಕೆ ಬಿದ್ದು ಹಳ್ಳದ ನೀರು ಹೊಳೆಗೆ ಸೇರಲು ಶುರುವಾದಾಗ ಹೊಳೆಯಲ್ಲಿರುವ ಮೀನುಗಳು ನೀರಿನ ವಿರುದ್ಧ ದಿಕ್ಕಿಗೆ ಈಜುತ್ತಾ ಹೊಳೆಯಿಂದ ಹಳ್ಳಕ್ಕೆ, ಹಳ್ಳದಿಂದ ಜಮೀನಿಗೆ ಮೊಟ್ಟೆ ಇಡಲು ಬಂದು ಸೇರುತ್ತವೆ, ಅದನ್ನು ಜನರು ಬಲೆ ಹಾಕಿ ಹಿಡಿದು ತಿನ್ನುತ್ತಾರೆ. ಇನ್ನು ಮಲೆನಾಡಿನಲ್ಲಿ ಮಳೆಗಾಲ ಪ್ರಾರಂಭವಾದ ಮೇಲೆ ಅನೇಕ ರೀತಿಯ ಜೀವರಾಶಿಗಳು ಕ್ರಿಯಾಶೀಲತೆಗೊಳ್ಳುತ್ತದೆ. ಅವುಗಳಲ್ಲಿ ಪ್ರಮುಖವಾದುದು ಉಂಬಳ. ಈ ಉಂಬಳ ಮಲೆನಾಡಿನ ಸಾಮಾನ್ಯವಾಗಿ ಎಲ್ಲಾ ಪ್ರದೇಶದಲ್ಲಿಯೂ ಇರುತ್ತದೆ. ಜನರು ಮನೆಯಿಂದ ಹೊರಗೆ ಬಂದರೆ ಸಾಕು ಅವರ ಕಾಲಿಗೆ ಹತ್ತಿ ಮೈಯಿಂದ ರಕ್ತವನ್ನು ಹೀರಿ ಕುಡಿಯುತ್ತದೆ. ವಿಚಿತ್ರವೆಂದರೆ ಈ ಉಂಬಳ ನಮ್ಮ ಕಾಲಿಗೆ ಹತ್ತಿಕೊಂಡು ರಕ್ತವನ್ನು ಹೀರಿದ್ದು ಗೊತ್ತೇ ಆಗುವುದಿಲ್ಲ. ಈ ಜಂತುವಿನ ಕಾರಣದಿಂದ ಎಷ್ಟೋ ಜನರು ಮಳೆಗಾಲದಲ್ಲಿ ಮನೆಯಿಂದ ಹೊರಗೆ ಬರುವುದಕ್ಕೆ ಹೆದರುತ್ತಾರೆ ಮತ್ತು ಹೊರಗಡೆಯಿಂದ ಮನೆಗೆ ಹಿಂತಿರುಗಿದಾಗ ಮನೆಯ ಬಾಗಿಲನ್ನು ದಾಟುವ ಮುನ್ನ ತಮ್ಮ ಕಾಲುಗಳನ್ನು ಒಮ್ಮೆ ನೋಡಿಕೊಂಡು ಒಳಗೆ ಹೋಗುತ್ತಾರೆ. ಎಲ್ಲಿಯಾದರೂ ಉಂಬಳ ಹತ್ತಿದೆಯೋ ಏನೋ ಎಂದು. ಇನ್ನು ಕಪ್ಪೆ, ಚೋರಟೆ, ವೊಡುಹುಳ ಇತ್ಯಾದಿ ಜೀವಿಗಳು ಮಳೆಗಾಲದ ಸಮಯದಲ್ಲಿ

ಅಧಿಕವಾಗುವುದು ಮಲೆನಾಡಿನಲ್ಲಿ ಸರ್ವೇಸಾಮಾನ್ಯ. ಮಳೆಗಾಲದಲ್ಲಿ ದಟ್ಟವಾದ ಹುಲ್ಲುಗಳು ಬೆಳೆದು, ದನಕರುಗಳಿಗೆ, ಜಿಂಕೆ-ಮಿಕಗಳಿಗೆ ಮೇಯಲು ಒಳ್ಳೆಯ ಮೇವು ಲಭ್ಯವಾಗುತ್ತದೆ.

ಮಳೆಗಾಲದಲ್ಲಿ ಮಲೆನಾಡಿನ ಜನರು ಎದುರಿಸುವ ಸಮಸ್ಯೆಗಳು:

ಮುಂಗಾರಿನ ಪ್ರಾರಂಭಕ್ಕೂ ಮುನ್ನ ಚಂಡಮಾರುತದ ಪ್ರಭಾವದಿಂದ ಉಂಟಾಗುವ ವಿಪರೀತ ಗುಡುಗು, ಮಿಂಚು, ಸಿಡಿಲು ಸಮೇತ ಬರುವ ಗಾಳಿ ಮಳೆಯಿಂದಾಗಿ ದಟ್ಟ ಅರಣ್ಯದ ಮಧ್ಯ ಹಾದು ಹೋದ ವಿದ್ಯುತ್ ಕಂಬಗಳು ಮುರಿದು ಬೀಳುತ್ತದೆ. ಇಲ್ಲದೇ ಇದ್ದರೆ ದೊಡ್ಡ ಮರಗಳು ತಂತಿಯ ಮೇಲೆ ಬಿದ್ದು ತಂತಿ ಹರಿದು ಹೋಗಿ ಒಂದು ವಾರ, 15 ದಿನ ಕೆಲವೊಮ್ಮೆ ಒಂದು ತಿಂಗಳವರೆಗೂ ವಿದ್ಯುತ್ ಇಲ್ಲದೇ ಇರುವ ಸಂದರ್ಭ ಎದುರಾದದ್ದೂ ಉಂಟು. ಮುಂಗಾರು ಪ್ರಾರಂಭವಾದ ಬಳಿಕ ವಿದ್ಯುತ್‌ನ ಸಮಸ್ಯೆ ಮಲೆನಾಡಿನ ಜನರಿಗೆ ಕಟ್ಟಿಟ್ಟ ಬುತ್ತಿ. ಇನ್ನು ವಿಪರೀತ ಮಳೆಯಿಂದಾಗಿ ಹೊಳೆಗಳು ಉಕ್ಕಿ ಹರಿದು ನೆರೆ ಬಂದು ಜಮೀನು ಕೊಚ್ಚಿ ಹೋಗುವ ಸಾಧ್ಯತೆಯು ಇರುತ್ತದೆ. ವಿಪರೀತ ಮಳೆಯಿಂದಾಗಿ ರಸ್ತೆಯ ಮೇಲೆಲ್ಲಾ ನೀರು ಬಂದು ಮಲೆನಾಡಿನ ಜನಕ್ಕೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಂಪರ್ಕ ಸಾಧ್ಯ ಕಡಿಮೆ. ಹೀಗೆ ಮಳೆಗಾಲದಲ್ಲಿ ಮಲೆನಾಡಿನ ಜನರು ಅನೇಕ ತೊಂದರೆಗಳನ್ನು ಅನುಭವಿಸುತ್ತಾರೆ. ಮಲೆನಾಡಿನ ಅಡಿಕೆ ಬೆಳೆಗಾರರು ವಿಪರೀತ ಮಳೆಯಿಂದಾಗಿ ಅಡಿಕೆ ಗೊನೆಗೆ ಬರುವ ಕೊಳೆರೋಗದ ತೊಂದರೆಯನ್ನು ಅನುಭವಿಸುತ್ತಾರೆ. ಅದಕ್ಕಾಗಿ ಈ ರೋಗ ಬಾರದೇ ಇರಲಿ ಎಂದು ಮುಂಜಾಗ್ರತಾ ಕ್ರಮವಾಗಿ ಅಡಿಕೆ ಗೊನೆಗೆ ಮದ್ದನ್ನು ಎರಡು-ಮೂರು ಬಾರಿಯೆಲ್ಲಾ ಸಿಂಪಡಿಸುವುದು ಉಂಟು. ಹೀಗೆ ಮಲೆನಾಡಿನ ಜನರು ಮಳೆಗಾಲದಲ್ಲಿ ಅನೇಕ ತೊಂದರೆಗಳನ್ನು ಅನುಭವಿಸುತ್ತಾ ವರ್ಷಧಾರೆಯ ಸೊಬಗನ್ನು ಸವಿಯುತ್ತಾ ಮಳೆಗಾಲವನ್ನು ಕಳೆಯುತ್ತಾರೆ. ಮಲೆನಾಡಿನ ಪ್ರಾಕೃತಿಕ ಸಿರಿಯನ್ನು ಹೆಚ್ಚಿಸುವಲ್ಲಿ ಮಳೆ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದು ಹೇಳಬಹುದಾಗಿದೆ.

●

ದೇಹ

ಪ್ರೀತಿ ಆತ್ಮವ ಸೇರಿ, ನವರಸಗಳನು ಹೀರಿ
ಸ್ವಚ್ಛ ಬೆಳದಿಂಗಳಾಗಿದ್ದ ದೇಹದೊಳು
ಯುಗ ಉರುಳಿದಂತೆ ಸುಖ-ಭೋಗಗಳು ತುಂಬಿ
ಮುಳುಗಿಹುದು ಈಗ...

ಪ್ರೀತಿಯ ಮೊಳಕೆಯೊಡೆದು ಹಸಿರಾಗಿ,
ಮನ್ಮಥನು ಅದರೊಳಗೆ ಜನಿಸಿ, ಮಿತದಲಿ ಸುಖವಿತ್ತು
ಕ್ಷಣಕ್ಷಣವು ಕಾಮಾಗ್ನಿ ಹೆಚ್ಚಿ
ಹಾಲುಹಸುಳೆಯನು ಬಿಡದೆ ನುಂಗುವುದನು ಕಂಡು ಪರಿತಪಿಸುವುದು ಮನವೀಗ

ಮನ್ಮಥನೆಂಬ ಸಮುದ್ರ ಜ್ವಾಲೆಜ್ವಾಲೆಯಾಗಿ ಉರಿದು ಸ್ಫೋಟಗೊಂಡು,
ಪ್ರವಾಹವಾಗಿ ಉಕ್ಕಿ ಹರಿದು, ಸುನಾಮಿಯಾಗಿ ಕಬಳಿಸಿ
ಬಹುದೂರದವರೆಗೆ ಕೊಚ್ಚಿ ಹೋಗಿ
ಅನಾಮಧೇಯವಾಗುವುದು ದೇಹ...

ಉಳ್ಳವರ ಧನದಾಹದೆದುರು
ಸುಳ್ಳು ಸತ್ಯವಾಗಿ, ಸತ್ಯ ಶೋಚನೀಯವಾಗಿಹುದೂ
ಕೋರ್ಟು, ಕಛೇರಿ ಅಲೆದು ದಿಕ್ಕು ತೋಚದಂತಾಗಿ ಆತ್ಮ,
ಬೂದಿಯ ರಾಶಿಯಾಗಿ ಬೀಳುವುದು ದೇಹ...

✍ **ಶಿಲ್ಪಾ ಎಸ್.**, ತೃತೀಯ ಬಿ.ಎ.

ನಾನು ಮತ್ತು ಮಳೆ

✍ **ಕೆ. ಎಂ. ಪವಿತ್ರಾ**, ಪ್ರಥಮ ಬಿ.ಎ.

ಕಾಗದದ ದೋಣಿಯನ್ನು ಮಾಡುವಂತ ಹೊತ್ತಾಯಿತೇ..!! ಹೀಗೆ ಹೇಳ್ದೆ ಅಂತ ಏನು ಯೋಚನೆ ಮಾಡ್ತಾ ಇದ್ದೀರಾ?

ಮಳೆ ಅಂದರೆ ಯಾರಿಗೆ ತಾನೆ ಇಷ್ಟ ಇಲ್ಲ ಹೇಳಿ, ನನಗಂತೂ ಮಳೆಯಲ್ಲಿ ನೆನೆಯುವುದರ ಜೊತೆಗೆ ಆಗ ತಾನೇ ಬೇರೊಡೆದ ಹಸಿರಾದ ಗೇರುಬೀಜವನ್ನು ತಿನ್ನುವ ಕಾತುರ.

ಕೆಲವರಿಗೆ ಮಳೆ ಅಂದ್ರೆ, ಕೆಸರು ನೀರು, ಹುಳ-ಹುಪ್ಪಟೆ, ಕಾಲು ಕೆಸರಾಗೋದು, ಇನ್ನು ಕೆಲವರಿಗೆ ಅನಾರೋಗ್ಯದ ಚಿಂತೆಯಾದರೆ ನನ್ನ ಪಾಲಿಗೆ ಮಳೆ ಅಥವಾ ಮಳೆಗಾಲ ಅಂದ್ರೆ ಸ್ವರ್ಗಕ್ಕೆ ಮೂರೇ ಗೇಣು ಅನ್ನೋ ಭಾವ. ಯಾಕೆ ಅಂತೀರಾ? ಮಳೆ ನೀರಿನ ಸದ್ದು ಒಂದು ಕಡೆ ಆದ್ರೆ, ಇನ್ನೊಂದು ಕಡೆ ಮಂಜು ಕವಿದ ವಾತಾವರಣದಲ್ಲಿ ಅರೆಬರೆ ಕಾಣುವ ಸಹ್ಯಾದ್ರಿ ಬೆಟ್ಟವನ್ನು ನೋಡ್ತಾ ಕಡಲು ಮಾಡುವ ನಾದವನ್ನು ಆಲಿಸುತ್ತ ಬಿಸಿ ಬಿಸಿ ಚಹಾಗೆ ಬಿಸ್ಕತ್ ಅದ್ದಿ ತಿನ್ನುವುದರಲ್ಲಿ ಇರುವ ಮಜಾನೇ ಬೇರೆ ಕಣ್ರಿ... ಇನ್ನು ಮನೆಯಲ್ಲಿ ದೊಡ್ಡ ಬೇಕರಿಯೇ ತೆರೆದ ಹಾಗೆ... ಹಲಸಿನ ಕಾಯಿ ಹಪ್ಪಳ, ಚಿಪ್ಸ್, ಹುರಿದ ಶೇಂಗಾ, ಸುಟ್ಟ ಹಲಸಿನ ಬೀಜ, ಸಂಡಿಗೆ, ಸುಟ್ಟ ಜೋಳ, ಹುರಿದ ಕಡಲೆಬೀಜ – ಹೀಗೆ ನಾನಾ ಬಗೆಯ ತಿಂಡಿ ತಿನಿಸುಗಳು.

ಮಳೆ ಬಂದ್ರೆ ಪರಿಸರಕ್ಕೆ ಖುಷಿ ಆಗುತ್ತೋ ಇಲ್ವೋ ಗೊತ್ತಿಲ್ಲ. ಆದರೆ ನಂಗೆ ಸಿಗೋ ಮಜಾನೇ ಬೇರೆ ಅನ್ನಿ. ಹೇಗೆ ಅಂತೀರಾ? ಮುಂಜಾನೆ ಮಸುಕಿನಲ್ಲಿ ಶುರು ಆಗೋ ಮಳೆ ಎಡೆಬಿಡದೆ ಹೊಯ್ತಾ ಇದ್ರೆ ಅಮ್ಮ ಬಂದು ಎಬ್ಬಿಸಿದಾಗ ಇನ್ನೊಂದು ಸ್ವಲ್ಪ ಹೊತ್ತು ಅಂತ ಹೇಳಿ ಮಲಗಿ ಮನಸ್ಸಿಲ್ಲದ ಮನಸ್ಸಿನಿಂದ ಎದ್ದು ಕಾಲೇಜಿನ ಕಡೆ ಪಯಣ ಬೆಳೆಸಿದಾಗ ಬಸ್ಸಿಗೆ ಕಾದು ಅರ್ಧಂಬರ್ಧ ಒದ್ದೆಯಾಗಿ ಆ ಚುಮು ಚುಮು ಚಳಿಯಲ್ಲಿ ಕ್ಲಾಸ್ ಕೇಳುವ ಬದಲು ಈ ಸಮಯದಲ್ಲಿ ಬಿಸಿ ಬಿಸಿ ಸಮೋಸ, ಚಹಾ ಇದ್ದರೆ ಆಹಾ..! ಎಂದು ಮನಸ್ಸಿನಲ್ಲೇ ಖುಷಿಯ ಅನುಭವವನ್ನು ಆನಂದಿಸುವುದೇ ಒಂಥರಾ ಚಂದ..

ಮಳೆ ಬರುವುದು ಕ್ಷಣಿಕ ಅಂದ್ರೆ, 3ರಿಂದ 4 ತಿಂಗಳು ಆದರೆ ಮಳೆ ಬಂದಾಗ ಇಳೆ ತಂಪಾಗುತ್ತೋ ಇಲ್ಲವೋ ಗೊತ್ತಿಲ್ಲ ನನ್ನ ಮನವಂತೂ ತಂಪಾಗುತ್ತದೆ. ●

ಜೀವನ

ಕತ್ತಲಲ್ಲಿ ಬೆಳಕ ಹುಡುಕುವ ಯತ್ನ
ಸದಾ ನನ್ನವರನ್ನು ಅರಸುವ ಪ್ರಯತ್ನ
ಎಲ್ಲರ ಭವ ಭಾವಗಳಲ್ಲಿ
ನನ್ನನ್ನು ಹುಡುಕುತ ಹುಡುಕುತ ಕಳೆದು ಹೋಯಿತೇ ನನ್ನತನವಲ್ಲಿ
ನನಗಿಲ್ಲಿ ಏಳು ಬೀಳಿನ ಬಾಳು
ಸಾಧ್ಯವೇ ಆಗದಿರಲು ಮನದ ಅಳು
ಕಷ್ಟ ಬಂದಾಗ ಕುಗ್ಗದೆ
ಅದನ್ನೆದುರಿಸಬೇಕು ನೀ ಜಗ್ಗದೆ
ಅರಿಯದ ಬದುಕಿಗೆ ಚಿಂತನೆಯ ಶಬ್ದಕೋಶ
ಕೆಲವೊಮ್ಮೆ ಅರಿಯದಾಯಿತೆನಿಸುತ್ತದೆ ಅದರೊಳಗಿನ ದೋಷ
ಮರೆಯದಿರು ಜೀವನದ ಆದಿ
ಸಾರ್ಥಕವಾಗಲಿ ಬಾಳಿನ ದಾರಿ.

✍ **ವೈಭವಿ**, ದ್ವಿತೀಯ ಬಿ.ಎಸ್ಸಿ.

ಸಣ್ಣ ಕತೆ

‘ಮಾನವಿ’ಯ ಕನಸು

✍ **ರಕ್ಷಿತಾ ಭಟ್**, ದ್ವಿತೀಯ ಬಿ.ಸಿ.ಎ.

ಈ ಕಥೆ ಪುಟ್ಟ ಸಂಸಾರದಲ್ಲಿ ಹುಟ್ಟಿ, ತನ್ನ ಕನಸನ್ನು ನನಸಾಗಿಸುವ ಪ್ರಯತ್ನದಿಂದ ದಾರಿಯಲ್ಲಿ ಎದುರಾಗುವ ಸಂಕಷ್ಟಗಳನ್ನು ಎದುರಿಸುತ್ತಾ ದಾಪುಗಾಲಿನಿಂದ ಮುಂದುವರೆಯುತ್ತಿರುವ ಹುಡುಗಿಯದು. ಕಥಾ ನಾಯಕಿಯ ಹೆಸರು ಮಾನವಿ. ತಂದೆ ಒಂದು ಚಿಕ್ಕ ಕಂಪೆನಿಯಲ್ಲಿ ದುಡಿಯುತ್ತಿರುವ ಕೆಲಸಗಾರ. ತಾಯಿ ಗೃಹಿಣಿ. ಗಂಡ ತರುವ ಸಂಬಳದಲ್ಲಿ ಬಹಳ ಜಾಗರೂಕವಾಗಿ ಲೆಕ್ಕಾಚಾರ ಮಾಡಿ, ಚಾಕಚಕ್ಯತೆಯಿಂದ ಮನೆ ನಡೆಸುವಾಕೆ. ಮನೆಯಲ್ಲಿ ಎಷ್ಟೇ ಹಣದ ಸಮಸ್ಯೆ ಇದ್ದರೂ, ನಾವು ಪಟ್ಟ ಕಷ್ಟವನ್ನು ನಮ್ಮ ಮಗಳು ಪಡಬಾರದು, ಅವಳು ಸ್ವಾಭಿಮಾನದಿಂದ ತನ್ನ ಕಾಲಮೇಲೆ ನಿಂತು ಒಳ್ಳೆಯ ಜೀವನ ನಡೆಸಬೇಕೆಂಬ ಆಸೆ. ಕಥಾನಾಯಕಿಯ ತಂದೆ ಒಬ್ಬ ಕೆಲಸಗಾರ. ಮನೆಯಲ್ಲಿ ಇದ್ದ ಕಷ್ಟದಿಂದ ಮುಂದಿನ ವಿದ್ಯಾಭ್ಯಾಸ ಪೂರ್ಣಗೊಳಿಸಲಾಗದೆ ತಂದೆ-ತಾಯಿಯನ್ನು ಕಳೆದುಕೊಂಡು ಬಹಳ ಕಷ್ಟದಿಂದ ಜೀವನದಲ್ಲಿ ಒಂದು ಹಂತ ತಲುಪಿದವಳು.

ಇನ್ನು ನಮ್ಮ ಮಾನವಿಯ ವಿಷಯಕ್ಕೆ ಬಂದರೆ ಅವಳು ತುಂಬಾ ಚುರುಕು ಹುಡುಗಿ. ಆದರೆ ಶಾಂತ ಸ್ವಭಾವ. ವಠಾರದ ಒಂದು ಸಣ್ಣ ಮನೆಯಲ್ಲಿ ವಾಸಿಸುವ ಅವರು, ಅಲ್ಲೇ ಹತ್ತಿರದಲ್ಲಿದ್ದ ಒಂದು ಸರ್ಕಾರಿ ಶಾಲೆಗೆ ಮಾನವಿಯನ್ನು ಸೇರಿಸಿದ್ದರು. ವಠಾರದ ಎಲ್ಲರಿಗೂ ಮಾನವಿ ಎಂದರೆ ಅಚ್ಚುಮೆಚ್ಚು. ಎಲ್ಲರೊಂದಿಗೂ ಮುದ್ದಾಗಿ ಮಾತನಾಡುತ್ತಾ, ಆಟವಾಡುತ್ತಾ ಬೆಳೆದ ಹುಡುಗಿ. ಓದುವುದರಲ್ಲಿಯೂ ತುಂಬಾ ಚುರುಕಾಗಿದ್ದಳು. ಅವಳು ಪ್ರಾಥಮಿಕ ಶಾಲೆಯನ್ನು ಮುಗಿಸಿ ಪ್ರೌಢಶಾಲೆಗೆ ಕಾಲಿಟ್ಟಿದ್ದಳು. ಹತ್ತಿರದಲ್ಲಿ ಶಾಲೆ ಇರದ ಕಾರಣ ಅವಳನ್ನು ದೂರದ ಊರಿಗೆ ಕಳಿಸಬೇಕಾಗಿತ್ತು. ತಂದೆ ತಮ್ಮ ಕೆಲಸವನ್ನು ಮುಗಿಸಿ ಬರುವಾಗ ಅವಳನ್ನು ಶಾಲೆಯಿಂದ ಕರೆತರುತ್ತಿದ್ದರು.

ಮಗಳು ಬೆಳೆದು ದೊಡ್ಡವಳಾಗಿದ್ದಾಳೆ, ಪ್ರೌಢಶಾಲೆಗೆ ಹೋಗುತ್ತಿದ್ದಾಳೆ ಎಂದ ತಕ್ಷಣ ತಾಯಂದಿರಿಗೆ ಭಯವಾಗುವುದು, ಭಯ ಎನ್ನುವುದಕ್ಕಿಂತ ಕಾಳಜಿ ಹೆಚ್ಚಾಗುವುದು ಸಾಮಾನ್ಯ. ಸಮಾಜ ಹಾಗೂ ಜನರ ಬಗ್ಗೆ ಸರಿಯಾಗಿ ಅರಿವಿಲ್ಲದ ಸಮಯದಲ್ಲಿ ದಾರಿ ತಪ್ಪಿಸುವ ಜನರು ಹಲವರಿರುತ್ತಾರೆ. ಒಬ್ಬರನ್ನು ನೋಡಿ ಅವರು ಹೇಗೆ ಎಂದು ನಿರ್ಣಯಿಸುವುದು ಕಷ್ಟ. ನಮ್ಮ ಮುಗ್ಧತೆಯನ್ನು ದುರುಪಯೋಗಪಡಿಸಿಕೊಂಡು ದಾರಿ ತಪ್ಪಿಸುವವರಿರುತ್ತಾರೆ. ಹೀಗಾಗಿ ನಮ್ಮ ಎಚ್ಚರಿಕೆಯಿಂದ ನಾವು ಇರಬೇಕು. ಸ್ನೇಹಿತರನ್ನು ಮಾಡಿಕೊಳ್ಳುವಾಗಲೂ ಅಷ್ಟೇ ಜಾಗರೂಕರಾಗಿರಬೇಕು ಎಂದು ಪ್ರತಿಯೊಂದು ತಾಯಿಯೂ ತನ್ನ ಮಗಳಿಗೆ ಕಿವಿಮಾತು ಹೇಳುವುದು ಸಹಜ. ತಾಯಿಯೇ ಮೊದಲ ಗುರು ಎನ್ನುವ ಮಾತು ಸುಳ್ಳಲ್ಲ. ನಮ್ಮ ಜೀವನಕ್ಕೆ ಬೇಕಾದ ಎಷ್ಟೋ ಪಾಠಗಳನ್ನು ಆಕೆ ನಮಗೆ ಕಲಿಸುತ್ತಾಳೆ.

ಮಾನವಿ ತನ್ನ ತಾಯಿಯ ಮಾತಿನಂತೆ ನಡೆಯುತ್ತಾ ವಿದ್ಯಾಭ್ಯಾಸದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಳು. ಶಾಲೆಯ ಶಿಕ್ಷಕರಿಗೂ ಅಷ್ಟೇ ಮಾನವಿ ಪ್ರಿಯ ವಿದ್ಯಾರ್ಥಿನಿ. ಅವಳು ಯಾವಾಗಲೂ ಉತ್ತಮ ಅಂಕ ತರುತ್ತಿದ್ದರಿಂದ ಎಲ್ಲರ ಪ್ರೀತಿಗೆ ಪಾತ್ರಳಾಗಿದ್ದಳು. ಅವಳಿಗೆ ತನ್ನ ಮನೆಯ ಪರಿಸ್ಥಿತಿ ಬಹಳ ಚೆನ್ನಾಗಿ ತಿಳಿದಿತ್ತು. ಹೀಗಾಗಿ ಅವಳು ಓದಿ ಮುಂದೆ ಬಂದು ತಂದೆ-ತಾಯಿಯ ಕನಸನ್ನು ನನಸಾಗಿಸಬಯಸಿದ್ದಳು. ಮನೆಯ ಪರಿಸ್ಥಿತಿ ಅವಳಿಗೆ ಹಣದ ಬೆಲೆ ತಿಳಿಸಿತ್ತು. ಹೀಗಾಗಿ ಅವಳು ಎಂದಿಗೂ ದಾರಿ ತಪ್ಪದೇ ತನ್ನ ಗುರಿಯತ್ತ ಸಾಗುತ್ತಿದ್ದಳು. ಅವಳ ಮೇಲೆ ಮನೆಯ ಜವಾಬ್ದಾರಿ ಕೂಡಾ ಇತ್ತು. ತಂದೆ-ತಾಯಿಗೆ ಇವಳನ್ನು ಬಿಟ್ಟು ಬೇರೆ ಸಂತಾನವಿಲ್ಲದ ಕಾರಣ ಅವರು ಇವಳನ್ನು ಮಗನೆಂದೇ ಭಾವಿಸಿದ್ದರು. ಅವಳೂ ತನ್ನ ಜವಾಬ್ದಾರಿಯನ್ನು ನಿಭಾಯಿಸಲು ಸಿದ್ಧಳಾಗಿದ್ದಳು.

ಒಂದು ದಿನ ಮಾನವಿ ತನ್ನ ಗೆಳತಿಯರೊಡನೆ ಮಾತನಾಡುತ್ತಾ ನಿಂತಿದ್ದಾಗ ಹುಡುಗರ ಗುಂಪೊಂದು ಅವರ ಎದುರಿನಿಂದ ಹಾದು ಹೋಯಿತು. ಅವರಲ್ಲಿದ್ದ ಒಬ್ಬ ಯುವಕನನ್ನು ನೋಡಿ ಮಾನವಿ ತನ್ನನ್ನೇ ಮರೆತಳು. ಅರೆಕ್ಷಣದಲ್ಲಿ ಎಚ್ಚೆತ್ತುಕೊಂಡು ಅದು ಕೇವಲ ಆಕರ್ಷಣೆ ಎಂದು ತಿಳಿಹೇಳಿದಳು. ಹೀಗೆ ಕೆಲಕಾಲ ಉರುಳಿದರೂ ಮಾನವಿಗೆ ಆ ಯುವಕನನ್ನು ಮರೆಯಲಾಗುತ್ತಿರಲಿಲ್ಲ. ಒಂದೇ ಶಾಲೆಯಾದ ಕಾರಣ ಕಣ್ಣುಗಳು ಅವನಿಗಾಗಿ ಹುಡುಕಾಡುತ್ತಿದ್ದವು. ಪ್ರತಿದಿನ ಮುಂಜಾನೆ ಅವನಿಗಾಗಿ ಕಾಯುವುದು, ಅವನನ್ನು ನೋಡಿ ಸಂತೋಷಪಡುತ್ತಿದ್ದಳು. ಆದರೆ ಇದು ಸರಿಯಲ್ಲ ಎನ್ನುವುದು ಅವಳಿಗೂ ತಿಳಿದಿತ್ತು. ಹೀಗಾಗಿ ಇದನ್ನು ನಿರ್ಲಕ್ಷ್ಯ ಮಾಡಿ ಮುಂದುವರಿಯಲು ಯತ್ನಿಸಿದಳು. ಆದರೆ ಮನಸ್ಸಿಗೆ ನಾವು ಯಾವುದು ಮಾಡಬಾರದೆಂದು ತಡೆಯುತ್ತೇವೋ ಅದೇ ಆಗುತ್ತದೆ. ಅದನ್ನೇ ಅದು ಮಾಡುತ್ತದೆ. ಮರೆಯಲೆತ್ನಿಸುವುದನ್ನೇ ಪದೇ ಪದೇ ಜ್ಞಾಪಿಸುತ್ತದೆ. ಹೀಗೆ ಮೂರು ವರ್ಷಗಳು ಉರುಳಿದರೂ ಕೂಡಾ ಮಾನವಿಯ ಭಾವನೆಗಳು ಅವನ ಮೇಲೆ ಹೆಚ್ಚುತ್ತಿದ್ದವೇ ವಿನಃ

ಕಡಿಮೆಯಾಗುತ್ತಿರಲಿಲ್ಲ. ಒಬ್ಬ ಸಾಮಾನ್ಯ ಮಧ್ಯಮ ವರ್ಗದಿಂದ ಬಂದಿರುವಂತಹ ಹುಡುಗಿ, ತನ್ನ ಮನೆಯ ಪರಿಸ್ಥಿತಿ ಹಾಗೂ ತನ್ನ ತಂದೆ-ತಾಯಿ ತನ್ನ ಮೇಲೆ ಇಟ್ಟಿರುವ ಆಕಾಂಕ್ಷೆ, ನಂಬಿಕೆ ಹಾಗೂ ಅವರು ಪಟ್ಟ ಶ್ರಮದ ಬಗ್ಗೆ ತಿಳಿದೂ ತನ್ನ ಭಾವನೆಗಳನ್ನು ಒಪ್ಪಿಕೊಳ್ಳಲು ಹೇಗೆ ಸಾಧ್ಯ? ಮಾನವಿಗೆ ಅವಳ ಜವಾಬ್ದಾರಿ ತಿಳಿದಿತ್ತು. ಹೀಗಾಗಿ ಯುವಕನ ಮೇಲೆ ಅಪಾರ ಪ್ರೀತಿ ಇದ್ದರೂ ಕೂಡಾ ಅದನ್ನು ತನ್ನ ಹೃದಯದಲ್ಲೇ ಮುಚ್ಚಿಟ್ಟುಕೊಂಡಿದ್ದಳು.

ಮುಂದೆ ಪದವಿಪೂರ್ವ ಶಿಕ್ಷಣಕ್ಕಾಗಿ ಬೇರೆ ಪಟ್ಟಣಕ್ಕೆ ಹೋಗಬೇಕಾಗಿ ಬಂತು. ತಂದೆ-ತಾಯಿಯ ಕನಸು ಪೂರೈಸಲು ದೃಢ ನಿರ್ಧಾರದೊಂದಿಗೆ ಮುಂದೆ ಸಾಗಿದಳು ಮಾನವಿ. ಆದರೆ ಭಗವಂತನ ಯೋಚನೆ ಏನಿತ್ತೋ ಯಾರಿಗೂ ತಿಳಿಯದು. ಆ ಯುವಕ ಕೂಡ ಅದೇ ಕಾಲೇಜಿನಲ್ಲಿ ದಾಖಲಾತಿ ಪಡೆದ. ಒಂದು ಹಂತದಲ್ಲಿ ಮಾನವಿಗೆ ಆ ಯುವಕನಿಗೂ ತನ್ನ ಮೇಲೆ ಪ್ರೇಮವಿದೆ ಎಂದು ಅನಿಸಲಾರಂಭಿಸಿತು. ಇವಳು ಪರಿವೆಯೇ ಇಲ್ಲದೆ ಕನಸು ಕಟ್ಟಿಕೊಳ್ಳಲು ಆರಂಭಿಸಿದಳು. ಅವನ ಮಾತು ಕೇಳಿ ಖುಷಿಪಡುತ್ತಿದ್ದಳು. ದೂರದಿಂದಲೇ ಅವನನ್ನು ಪ್ರೀತಿಸಲಾರಂಭಿಸಿದಳು. ಆದರೆ ಯಾವಾಗಲೂ ತನ್ನ ಗುರಿ ಹಾಗೂ ತನಗಿರುವ ಜವಾಬ್ದಾರಿಯನ್ನು ಮರೆಯಲಿಲ್ಲ.

ಒಂದು ದಿನ ಆಘಾತಕಾರಿ ಸಂಗತಿಯೊಂದು ಅವಳಿಗಾಗಿ ಕಾದಿತ್ತು – ಅವಳ ತಂದೆ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು. ಕಂಪೆನಿಗೆ ಆದ ಅನಿರೀಕ್ಷಿತ ನಷ್ಟದಿಂದಾಗಿ ಇವಳ ತಂದೆಯನ್ನು ಕೆಲಸದಿಂದ ತೆಗೆದುಹಾಕಲಾಗಿತ್ತು. ಈ ವಿಷಯ ತಿಳಿದು ಅವರು ಅದನ್ನು ಅರಗಿಸಿಕೊಳ್ಳಲಾಗದೇ ಹೃದಯಾಘಾತವಾಗಿತ್ತು. ಮಾನವಿ ಲಗುಬಗೆಯಿಂದ ಆಸ್ಪತ್ರೆಗೆ ಧಾವಿಸಿದಳು.

ಲೈಟ್ ಆಗಿ ಹೃದಯಾಘಾತವಾಗಿದೆ, ಜೀವಕ್ಕೆ ಏನೂ ತೊಂದರೆ ಇಲ್ಲ. ಆದರೆ ಇವರ ಬಗ್ಗೆ ಸ್ವಲ್ಪ ಕಾಳಜಿ ವಹಿಸಿ. ಹೆಚ್ಚು ಒತ್ತಡ ಆಗದಂತೆ ನೋಡಿಕೊಳ್ಳಿ ಎಂದು ವೈದ್ಯರು ಹೇಳಿದರು.

ಮನೆಗೆ ಇದ್ದ ಒಂದೇ ಒಂದು ಆದಾಯವೂ ಈಗ ಇರಲಿಲ್ಲ. ಹೀಗಾದರೆ ಮುಂದೆ ಬದುಕುವುದಾದರೂ ಹೇಗೆ. ಮಾನವಿಯ ತಂದೆ ಚೇತರಿಸಿಕೊಂಡು ಕೆಲಸಕ್ಕಾಗಿ ಅಲೆದಾಡತೊಡಗಿದರು. ಅವರ ಕಷ್ಟವನ್ನು ನೋಡಲಾಗದೇ ಮಾನವಿ ಒಂದು ಚಿಕ್ಕ ಕೆಫೆಯಲ್ಲಿ ಅಟೆಂಡರ್ ಆಗಿ ಕೆಲಸಕ್ಕೆ ಸೇರಿದಳು. ಕಾಲೇಜಿನ ಜೊತೆಗೆ ಕೆಲಸ ಕೂಡಾ ಮಾಡತೊಡಗಿದಳು. ಸ್ವಲ್ಪ ದಿನಗಳ ನಂತರ ಅವಳ ತಂದೆಗೂ ಕೂಡಾ ಒಂದು ಗ್ಯಾರೇಜ್‌ನಲ್ಲಿ ಕೆಲಸ ಸಿಕ್ಕಿತು. ಮನೆಯ ಪರಿಸ್ಥಿತಿ ಒಂದು ಮಟ್ಟಕ್ಕೆ ಬಂದಿತ್ತು. ಎಲ್ಲ ಒಂದು ಹದದಲ್ಲಿ ನಡೆಯುತ್ತಿರುವಾಗ ಮಾನವಿಯ ಹೃದಯದಲ್ಲಿ ಪ್ರೀತಿಯ ಬೀಜ ಬೆಳೆಯುತ್ತಲೇ ಇತ್ತು.

ಆ ಯುವಕನನ್ನು ಪ್ರತಿದಿನ ನೋಡಿ ಆನಂದ ಪಡುತ್ತಿದ್ದಳು. ಹೀಗಿರುವಾಗ ಒಂದು ದಿನ ಆ ಯುವಕನಿಗೆ ತನ್ನ ಪ್ರೀತಿಯನ್ನು ಹೇಳಿಕೊಳ್ಳಬೇಕು ಎಂದು ನಿರ್ಧಾರ ಮಾಡಿದಳು. ಹೀಗಿರುವಾಗ ಒಂದು ದಿನ ಲಘುಬಗೆಯಿಂದ ಕಾಲೇಜಿನಿಂದ ಕ್ಲಾಸ್ ಮುಗಿಸಿ ಆ ಯುವಕನಿಗಾಗಿ ಹುಡುಕಾಡುತ್ತಿದ್ದಳು. ಆಗ ಅವಳು ಆ ಯುವಕನನ್ನು ಇನ್ನೊಬ್ಬ ಯುವತಿಯೊಡನೆ ಬರುತ್ತಿರುವುದನ್ನು ನೋಡಿದಳು. ಒಂದು ಕ್ಷಣ ಪ್ರಪಂಚವೇ ಮುಳುಗಿ ಹೋದಂತೆ ಅನಿಸಿತು. ಆದರೂ ಇಷ್ಟು ಬೇಗ ನಿರ್ಧಾರಕ್ಕೆ ಬರಬಾರದು ಎಂದು ಸಮಾಧಾನಪಟ್ಟುಕೊಂಡಳು. ಆದರೂ ಮನಸ್ಸಿನ ಯಾವುದೋ ಮೂಲೆಯಲ್ಲಿ ಭಯವಾಗುತ್ತಿತ್ತು. ಸತ್ಯವನ್ನು ಅರಿಯಲು ಮುಂದಿನ ಕೆಲವು ದಿನ ಅವಳು ಅವನನ್ನು ಗಮನಿಸತೊಡಗಿದಳು. ಆಗ ಅವಳಿಗೆ ಆ ಯುವಕನಿಗೆ ಆ ಯುವತಿಯೆಂದರೆ ಬಹಳ ಇಷ್ಟ ಎನ್ನುವ ವಿಷಯ ತಿಳಿಯಿತು.

ಪ್ರೀತಿಯ ಬದಲಾಗಿ ಪ್ರೀತಿ ಸಿಗುವುದು ಅವಶ್ಯಕವಲ್ಲ ಎಂಬ ಮಾತಿದೆ. ಆದರೆ ಅಂತಹ ಪ್ರೀತಿ ಮಾಡುವುದು ನಿಜವಾಗಿಯೂ ಸಾಧ್ಯವೇ? ಎನ್ನುವುದು ಪ್ರಶ್ನೆ. ಮಾನವಿಯ ಹೃದಯ ಒಡೆದು ಚೂರಾಗಿ ಹೋಗಿತ್ತು. 5 ವರ್ಷಗಳಿಂದ ಇಷ್ಟಪಡುತ್ತಿದ್ದ ಹುಡುಗನಿಗೆ ಇನ್ನೊಬ್ಬ ಹುಡುಗಿ ಇಷ್ಟ ಎನ್ನುವ ವಿಷಯವನ್ನು ಅರಗಿಸಿಕೊಳ್ಳಲು ಕಷ್ಟವಾಗುತ್ತಿತ್ತು. ಅವಳು ಮೊದಲಿನಿಂದಲೂ ಯಾವುದೇ ವಸ್ತುವಿಗಾಗಿಯೂ ಆಸೆ ಪಟ್ಟಿರಲಿಲ್ಲ. ಮನೆಯ ಪರಿಸ್ಥಿತಿ ತಿಳಿದ ಕಾರಣ ವಸ್ತುಗಳ ಬಗ್ಗೆ ಮೋಹ ಇಟ್ಟುಕೊಂಡಿರಲಿಲ್ಲ. ಆದರೆ ಈಗ ಅವಳಿಗೆ ನಾನು ಯಾವುದಕ್ಕಾಗಿ ಬದುಕಬೇಕು? ಜೀವನ ಇಷ್ಟೇ. ಕೇವಲ ನೋವಿನಿಂದ ತುಂಬಿದೆ ಎಂದು ಅನಿಸತೊಡಗಿತು. ಎಷ್ಟು ಅತ್ತರೂ ಕಣ್ಣೀರು ಮುಗಿಯುತ್ತಿರಲಿಲ್ಲ. ಹೇಗೂ ಅವಳ ಪದವಿಪೂರ್ವ ವಿದ್ಯಾಭ್ಯಾಸ ಮುಗಿದಿದ್ದರಿಂದ ಎಲ್ಲಾದರೂ ದೂರ ಹೋಗಬಯಸಿದಳು. ಹೇಳದೆ ಮನಸ್ಸಿನಲ್ಲಿ ಬಚ್ಚಿಟ್ಟ ಪ್ರೀತಿ ಅವಳನ್ನು ಕಲ್ಲಾಗಿ ಮಾಡಿತ್ತು. ಈ ಪ್ರೀತಿ ಪ್ರೇಮವೆಲ್ಲ ಸುಳ್ಳು ಇನ್ನು ಎಂದೂ ಯಾರನ್ನೂ ಪ್ರೀತಿಸುವುದಿಲ್ಲ ಎಂದು ನಿರ್ಣಯಿಸಿದಳು.

ಅವಳ ತಂದೆ-ತಾಯಿಗಾಗಿ ಅವಳು ಬದುಕಬೇಕಾಗಿತ್ತು. ಜಾಗ ಬದಲಾದರೆ ಮನಸ್ಸು ಕೂಡಾ ಬದಲಾಗುತ್ತದೆ ಎಂದು ಬಹಳ ದೂರ ಬಂದಳು. ಎಷ್ಟೇ ದೂರ ಬಂದರೂ ಭಾವನೆಗಳಿಂದ ನಾವು ಓಡಲು ಸಾಧ್ಯವಿಲ್ಲ. ಎಲ್ಲವನ್ನೂ ನಾಶ ಮಾಡಬಹುದು ಆದರೆ ನೆನಪುಗಳು ಶಾಶ್ವತ. ಕಾಲವೇ ಎಲ್ಲದಕ್ಕೂ ಮದ್ದು ಎನ್ನುತ್ತಾರೆ. ಮಾನವಿ ಕಾಲ ಕಳೆದಂತೆ ಮತ್ತೆ ತನ್ನ ವಿದ್ಯಾಭ್ಯಾಸದ ಕಡೆ ಗಮನ ಹರಿಸಿದಳು. ಹೀಗೆ ಒಳ್ಳೆಯ ಅಂಕದೊಂದಿಗೆ ಪದವಿಯನ್ನೂ ಪಡೆದಳು.

ಬಿ.ಎ. ಪದವಿಯನ್ನು ಮಾಡಿದ ಮಾನವಿ ಮುಂದೆ ಪಾರ್ಟ್‌ಟೈಮ್ ಕೆಲಸ ಮಾಡುತ್ತಾ ಓದಿ ಎಂ.ಎ. ಪದವಿ ಪಡೆದಳು. ಬಿ.ಎಡ್. ಮಾಡಿ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿದಳು. ಆದರೆ ಅವಳ ಕನಸು ಬೇರೆಯೇ ಇತ್ತು. ಮಾನವಿ ಸಮಾಜಕ್ಕಾಗಿ ಏನಾದರೂ ಮಾಡಬಯಸಿದ್ದಳು. ಜನರಿಗಾಗಿ, ಅವರ ಕಷ್ಟಗಳನ್ನು ಕಣ್ಣಾರೆ ಕಂಡ ಅವಳು ಅದನ್ನು ದೂರ ಮಾಡಬಯಸಿದ್ದಳು.

ಈ ನಡುವೆ ಒಂದು ರಸ್ತೆ ಅಪಘಾತದಲ್ಲಿ ಅವಳ ತಂದೆ-ತಾಯಿ ದೇಹಾಂತ್ಯವಾಯಿತು. ಅವರಿಗಾಗಿಯೇ ಬದುಕುತ್ತಿದ್ದ ಮಾನವಿಗೆ ಯಾರೂ ಇಲ್ಲದಂತಾಯಿತು. ಆದರೆ ಒಂಟಿಯಾಗಿ ಯಾರೂ ಇಲ್ಲದಿದ್ದರೂ ಬದುಕುತ್ತಿರುವ ಹಲವು ಜನರನ್ನು ನೋಡಿ ಅವರಲ್ಲಿ ಒಬ್ಬಳಾದಳು.

ಮುಂದೆ ಕಷ್ಟಪಟ್ಟು ಹಗಲು ರಾತ್ರಿ ಎನ್ನದೇ ಓದಿ UPSC ಪರೀಕ್ಷೆ ಬರೆದು ಅದರಲ್ಲಿ ತೇರ್ಗಡೆ ಹೊಂದಿ, ಆಯ್ಕೆಯಾಗಿ ಜಿಲ್ಲಾಧಿಕಾರಿಯಾದಳು. ಎಂದೂ ಜನರನ್ನು ವಂಚಿಸಲು ನೋಡದೇ ಒಬ್ಬ ಒಳ್ಳೆಯ ಅಧಿಕಾರಿಯಾಗಿ ಸಮಾಜದ ಒಳಿತಿಗಾಗಿ ಸೇವೆ ಸಲ್ಲಿಸಿದಳು.

ತಾನು ಶ್ರಮವಹಿಸಿ ದುಡಿದ ಹಣದಿಂದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆಯನ್ನು ತೆರೆದಳು. ಅನಾಥಾಶ್ರಮಕ್ಕಾಗಿ ಹಣ ದಾನ ಮಾಡಿದಳು.

ತಾನು ಒಂಟಿಯಾಗಿ ಬದುಕುತ್ತಾ, ಬೇರೆಯವರು ಕಷ್ಟ ಎಂದಾಗ ಅದನ್ನು ಪರಿಹರಿಸಿ ಅವರ ಖುಷಿಯಲ್ಲಿ ತನ್ನ ಖುಷಿ ಕಂಡಳು. ಹಿರಿಯರಲ್ಲಿ ತನ್ನ ತಂದೆ-ತಾಯಿಯನ್ನು ಕಂಡಳು. ಜೀವನ ಬಂದಂತೆ ಬದುಕುತ್ತಾ, ಜೀವನವನ್ನು ಒಪ್ಪಿಕೊಂಡು, ಅಪ್ಪಿಕೊಂಡು ಬದುಕಿದಳು.

●

ನೆನಪು

ಮರುಕಳಿಸುತಿದೆ ಹಳೆಯ ನೆನಪುಗಳು
ಕಳೆದ ಆ ಸುಂದರ ದಿನಗಳು
ಪಟ ಪಟ ಉದುರುತ್ತಿದ್ದ ಮುಗ್ಧ ಮಾತುಗಳು
ಮನಬಿಚ್ಚಿ ನಗುತ್ತಿದ್ದ ಕ್ಷಣಗಳು
ಮುನಿಸಿಕೊಂಡು ಕೂರುತ್ತಿದ್ದ ಮುದ್ದು ಮುಖಗಳು
ಕಣ್ಣುಮುಚ್ಚಿ ಆಡಿದ ಕಣ್ಣಾಮುಚ್ಚಾಲೆ ಆಟಗಳು
ತೆರೆದುಕೊಂಡಿದೆ ಬಾಲ್ಯದ ಹಳೆಯ ಪುಟಗಳು
ಅದ ಮುಚ್ಚಲು ಮನಸ್ಸಿಲ್ಲದೆ ಒದ್ದೆಯಾಗಿದೆ ಕಣ್ಣಂಚುಗಳು.

✍ **ಶ್ರೇಯಾ ಪೂಜಾರಿ,** ದ್ವಿತೀಯ ಬಿ.ಎಸ್ಸಿ.

ಅಂಕ ಮತ್ತು ಶ್ರೇಯಾಂಕ

✍ **ಅನ್ವಿತಾ ಎಂ. ತಂತ್ರಿ**, ಪ್ರಥಮ ಬಿ.ಎಸ್ಸಿ.

"ಪ್ರತಿಯೊಬ್ಬ ಯಶಸ್ವೀ ಮನುಷ್ಯನ ಹಿಂದೆ ಸೋತ ಎಷ್ಟೋ ವರ್ಷಗಳು ಇರುತ್ತವೆ. ಕಠಿಣ ಪರಿಶ್ರಮ ಮತ್ತು ಆತ್ಮವಿಶ್ವಾಸ ಎಂಬುದು ನಿಮಗೆ ಸದಾ ಕಾಲ ಯಶಸ್ಸನ್ನು ಗಳಿಸಿಕೊಡುತ್ತದೆ".

ಒಂದೊಂದು ಮಗುವೂ ಒಂದೊಂದು ಅದ್ಭುತ ಸೃಷ್ಟಿ. ಆ ಸೃಷ್ಟಿಯಲ್ಲಿ ಸುವಾಸನೆಯುಕ್ತ ಪುಷ್ಪವಾಗಿ ಅರಳಬೇಕಾದ ಮಕ್ಕಳ ಬುದ್ಧಿಮಟ್ಟ ಅಳೆಯಲು ಅಂಕಗಳು ಮಾನದಂಡ ಅಲ್ಲ ಎಂಬುದು ಎಲ್ಲರೂ ಒಪ್ಪುವಂತಹ ಮಾತೇ? ಇದನ್ನೇ ಎಲ್ಲರೂ ಹೇಳುವುದು. ಆದರೆ ವಾಸ್ತವದಲ್ಲಿ ಅಂಕಗಳು, ಶ್ರೇಯಾಂಕಗಳನ್ನು ನೋಡಿಯೇ ಅಲ್ಲವೇ! ಶಿಕ್ಷಣ ಸಂಸ್ಥೆಗಳಲ್ಲಿ ಅವಕಾಶ ಸಿಗುವುದು, ವೈದ್ಯಕೀಯ ಕ್ಷೇತ್ರದಲ್ಲಿ, ತಂತ್ರಜ್ಞಾನದ ಕ್ಷೇತ್ರದಲ್ಲಿ ಓದಬೇಕು ಅನ್ನುವ ಹಿರಿಯರ ಕನಸು ನನಸಾಗೋದು ಅಲ್ಲವೇ?...

ತರಗತಿಯಲ್ಲಿನ ಅಂಕಗಳಿಂದ ಮಗುವನ್ನು ನಿರ್ಣಯಿಸಬೇಡಿ. ಜೀವನದಲ್ಲಿ ಅವರು ಏನು ಗಳಿಸುತ್ತಾರೆ ಎಂಬುದರ ಕುರಿತು ಹೆಚ್ಚು ಚಿಂತಿಸಬೇಕು. ಅಂಕಗಳನ್ನು ಪಡೆಯುವುದು ತಮ್ಮ ಭವಿಷ್ಯಕ್ಕೆ ಮುಖ್ಯವಾಗಬಹುದು ಅಥವಾ ಇಲ್ಲದಿರಬಹುದು. ಆದರೆ ಉತ್ತಮ ಸಾಧನೆ ಮಾಡಿದವರಿಗೆ ಅಭಿನಂದನೆಗಳನ್ನು ಸಲ್ಲಿಸಲೇಬೇಕು. ಆಗ ಎಲ್ಲರೂ ಕೂಡ ಹೆಮ್ಮೆ ಪಡುತ್ತಾರೆ.

ಗುರುಕುಲ ಶಿಕ್ಷಣ ಪದ್ಧತಿ ಆರಂಭಗೊಂಡು ಸರಿಸುಮಾರು ಎರಡು ದಶಕಗಳಷ್ಟು ಹಿಂದಿನವರೆಗೆ 'ಶಿಕ್ಷೆ' ಈ ಪದವನ್ನು 'ಶಿಕ್ಷಣ'ದೊಂದಿಗೆ ಸಮನ್ವಯ ಮಾಡಿಕೊಂಡಂತೆ ಕಾಣುತ್ತದೆ. 'ಶಿಕ್ಷಾ' ಎಂದಾಗ 'ಶಿಕ್ಷಣ' ಮತ್ತು 'ಶಿಕ್ಷೆ' ಇವುಗಳ ನಡುವೆ ಅದೇನೋ ಸಂಬಂಧವಿದೆ ಎಂಬ ಕಲ್ಪನೆಯಿತ್ತು. ಮನೋವಿಜ್ಞಾನದ ಬೆಳವಣಿಗೆ, ಬೋಧನೆಯ ವಿಧಾನಗಳ ರೂಪಾಂತರ, ಸಾಮರ್ಥ್ಯ ಮತ್ತು ಆಸಕ್ತಿ ಆಧಾರಿತ ವಿಷಯಗಳ ಕಲಿಕೆಗೆ ಅವಕಾಶ, ಸಾರ್ವತ್ರಿಕ ದಾಖಲಾತಿ ಮತ್ತು ಹಾಜರಾತಿಗಳ ಆಶಯ ಮೊದಲಾದುವು ಶಿಕ್ಷಣದಿಂದ ಶಿಕ್ಷೆಯನ್ನು ದೂರ ಮಾಡುವ ಕಲ್ಪನೆಯತ್ತ ಹೊರಳತೊಡಗಿತು. ವಿದ್ಯಾರ್ಥಿಗಳ ಆತ್ಮಹತ್ಯೆ, ಪಲಾಯನ, ಚಿತ್ತವೈಕಲ್ಯ ಮತ್ತು ದೈಹಿಕ ವಿಕಲತೆಗಳಿಗೆ ಕಾರಣವಾದ ಶಿಕ್ಷಣದೊಳಗಿನ ಕೆಲವು ಘಟನೆಗಳೂ 'ಶಿಕ್ಷೆ ರಹಿತ ಶಿಕ್ಷಾ' ಆಗಬೇಕೆಂಬ ಅಭಿಪ್ರಾಯವನ್ನು ಪುಷ್ಟೀಕರಿಸಿದೆ.

'ಶಿಕ್ಷಣ' ಎಂದರೆ 'ತಿದ್ದುವುದು' ಎಂದೇ ಅರ್ಥ. ಮಗು ಹುಟ್ಟಿನಿಂದಲೇ ಜ್ಞಾನಿ. ಅವನು ಪ್ರತೀ ಕ್ಷಣವೂ ಪ್ರಕೃತಿಯಲ್ಲಿ ಕಲಿಯುತ್ತಲೇ ಸಾಗುತ್ತಾನೆ. ಕಲಿಯುವ ಹಂತದಲ್ಲಿ ಮಗು ಅಥವಾ ವಿದ್ಯಾರ್ಥಿಯು ಮಾಡುವ ದೋಷಗಳನ್ನು ತಿದ್ದಿ, ಸೂಕ್ತವಾದುದ್ದನ್ನು ಹೇಳಿಕೊಟ್ಟು ಅವನ ಕಲಿಕೆಯನ್ನು ಸುಗಮಗೊಳಿಸುವ ಕೆಲಸವಷ್ಟೇ ಶಿಕ್ಷಕನದ್ದು ಎಂಬ ಹೊಸ ಕಲ್ಪನೆಯತ್ತ ನಾವು ಸಾಗುತ್ತಿದ್ದೇವೆ. ಶಿಕ್ಷೆ ರಹಿತ ಶಿಕ್ಷಣಕ್ಕೆ ಶಿಕ್ಷಕರು ಸಂಪೂರ್ಣವಾಗಿ ಒಗ್ಗಿಕೊಳ್ಳಲೇಬೇಕಾದ ಅನಿವಾರ್ಯತೆಯೂ ಇಂದು ಇದೆ.

ಅಂಕಗಳು ಚೆನ್ನಾಗಿ ಬರಲಿಲ್ಲವೆಂದರೆ ಬೆಲೆಯೇ ಇಲ್ಲ. 85% ಬಂದರೆ ಹಿಂದೆ ಒಳ್ಳೆಯ ವಿದ್ಯಾರ್ಥಿ. ಆದರೆ ಈಗ ದಡ್ಡ ವಿದ್ಯಾರ್ಥಿ ಅನ್ನುವಷ್ಟು ಬದಲಾವಣೆಯಾಗಿದೆ. 99% ಬಂದರೆ ಮಾತ್ರ ಅವರಿಗೆ ಬೆಲೆ. ಇಲ್ಲದಿದ್ದರೆ ಎಲ್ಲಿಯೂ ಸಲ್ಲದವನು ಎಂಬ ಅಭಿಪ್ರಾಯ. ಈಗಂತೂ ಪುಟ್ಟ ಮಗುವಿಗೂ ಪ್ರವೇಶ ಪರೀಕ್ಷೆ ಪಡೆದುಕೊಂಡೇ ಶಾಲೆಯಲ್ಲಿ ಪ್ರವೇಶ ಕೊಡುವುದು. ಆ ಪರೀಕ್ಷೆಯಲ್ಲಿ ಚೆನ್ನಾಗಿ ಅಂಕ ಬಂದರೆ ಮಾತ್ರ ಅಲ್ಲಿ ಕಲಿಯಲು ಅವಕಾಶ. ಇಲ್ಲವೆಂದರೆ ಕಾಡಿ ಬೇಡಿ ನಿಗದಿಪಡಿಸಿದ ಶುಲ್ಕಗಳಿಗಿಂತ ಹೆಚ್ಚಿನ ಶುಲ್ಕ ಕಟ್ಟಿ ಸೇರಿಸಬೇಕು. "ಇಲ್ಲಿ ದುಡ್ಡು ಇದ್ದೋನೇ ದೊರೆ, ಇಲ್ಲದಿದ್ದೋನು ಹೆತ್ತೋರಿಗೂ ಹೊರೆ". ಕಾಲ ಬದಲಾಗಿದೆಯೋ, ಅಥವಾ ನಾವೇ ಬದಲಾಗಿದ್ದೇವೋ ತಿಳಿಯದಾಗಿದೆ.

ಅಂಕಗಳ ಪರಿ ಇಂತಾದರೆ ಶ್ರೇಯಾಂಕಗಳದ್ದೇ ವಿಭಿನ್ನ. ಶೈಕ್ಷಣಿಕ ಶ್ರೇಯಾಂಕವು ಕೆಲಸದ ನೀತಿ ಮತ್ತು ಪ್ರೇರಣೆಗೆ ಸಂಬಂಧಿಸಿದಂತೆ ಒಬ್ಬರ ಶೈಕ್ಷಣಿಕ ಮತ್ತು ವೈಯಕ್ತಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ನೀಡುತ್ತದೆ.

ಶ್ರೇಯಾಂಕಗಳನ್ನು ಸಾಮಾನ್ಯವಾಗಿ ನಿಯತಕಾಲಿಕೆಗಳು, ಪತ್ರಿಕೆಗಳು, ಅಂತರ್ಜಾಲಗಳು, ಸರಕಾರಗಳು ಅಥವಾ ಶಿಕ್ಷಣ ತಜ್ಞರುಗಳು ನಡೆಸುತ್ತಾರೆ.

ನಾನು 'ಅಂಕಗಳಿಗಾಗಿ' ಅಥವಾ 'ಜ್ಞಾನಕ್ಕಾಗಿ' ಅಧ್ಯಯನ ಮಾಡಬೇಕು? ಈ ಪ್ರಶ್ನೆಗೆ ಉತ್ತರವು ನಮ್ಮ ದೈನಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಹುದುಗಿದೆ. ಒಬ್ಬ ವಿದ್ಯಾರ್ಥಿಗೆ ಶ್ರೇಯಾಂಕಗಳಿಗಾಗಿ ಬಹುಮಾನ ನೀಡಲಾಗುತ್ತದೆ. ಆದರೆ ಕಲಿಕೆಗಾಗಿ ಅಪರೂಪವಾಗಿ ಬಹುಮಾನ ನೀಡಲಾಗುತ್ತದೆ. ವಿದ್ಯಾರ್ಥಿಗಳಾದ ನಾವೆಲ್ಲರೂ ನಮ್ಮ ಶ್ರೇಣಿಗಳ ಪ್ರಾಮುಖ್ಯತೆಯ ಬಗ್ಗೆಯೇ ಯೋಚಿಸುತ್ತೇವೆ. ಅಧ್ಯಯನ ಎಂಬ ಪದವು ಸಾಮಾನ್ಯವಾಗಿ ನಕಾರಾತ್ಮಕ ಪ್ರತಿಕ್ರಿಯೆಯನ್ನು ತರುತ್ತದೆ. ಓದುವುದು ಒಂದು ಕೆಲಸದಂತೆ ತೋರುತ್ತದೆ. ಶಾಲೆ ಮತ್ತು ಪದವಿ ತರಗತಿಗಳಲ್ಲಿ ಉತ್ತಮ ಅಂಕಗಳನ್ನು ಪಡೆಯಲು ನಾವು ಓದಲೇಬೇಕು. ಇದು

ಆಶ್ಚರ್ಯವೇನಲ್ಲ. ಏಕೆಂದರೆ ನಮ್ಮಲ್ಲಿ ಹೆಚ್ಚಿನವರು ತಮ್ಮ ಇಡೀ ಜೀವನವನ್ನು ಈ ರೀತಿಯಲ್ಲಿಯೇ ಅಧ್ಯಯನ ಮಾಡಿದ್ದಾರೆ, ಮಾಡುತ್ತಿದ್ದಾರೆ, ಮಾಡುತ್ತಾರೆ ಕೂಡ ಅಲ್ಲವೇ? ಆದರೆ ಅಧ್ಯಯನವನ್ನು ಸಮೀಪಿಸಲು ಎರಡು ಮಾರ್ಗಗಳಿವೆ. ಒಂದು ಅಂಕಗಳಿಗಾಗಿ, ಮತ್ತೊಂದು ಜ್ಞಾನಕ್ಕಾಗಿ. ಇತ್ತೀಚಿನ ದಿನಗಳಲ್ಲಿ ಅನೇಕ ವಿದ್ಯಾರ್ಥಿಗಳು ಕೇವಲ ಅಂಕಗಳಿಗಾಗಿ ಓದುತ್ತಾರೆ. ಅವರು ಉನ್ನತ ಶ್ರೇಣಿಯನ್ನು ಪಡೆಯಲು ಮಾತ್ರ ಆಸಕ್ತಿ ಹೊಂದಿರುತ್ತಾರೆ. ಅವರು ಓದಿದ ವಿಷಯದಿಂದ ಏನನ್ನಾದರೂ ಕಲಿಯಲು ಆಸಕ್ತಿ ಹೊಂದಿಲ್ಲ. ಇದು ಅಧ್ಯಯನಕ್ಕೆ ಹಾನಿಕಾರಕ ಮಾರ್ಗವಾಗಿದೆ. ಏಕೆಂದರೆ ಇದು ಶಿಕ್ಷಣದ ಮೌಲ್ಯವನ್ನು ದುರ್ಬಲಗೊಳಿಸುತ್ತದೆ. ಕಲಿಕೆಯು ಮೌಲ್ಯಯುತವಾದದ್ದು. ಅದು ಅರ್ಥ ಮಾಡಿಕೊಳ್ಳಲು ಮತ್ತು ಬೆಳೆಯಲು ಆಂತರಿಕ ಬಯಕೆಯಿಂದ ಬಂದಾಗ ಮಾತ್ರವೇ ಹೊರತು ಅಂಕಗಳನ್ನು ಮತ್ತು ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ಬಯಕೆಯಿಂದಲ್ಲ.

ಅಂಕಗಳಿಗಾಗಿ ಅಧ್ಯಯನ ಮಾಡುವುದಕ್ಕಿಂತ ಜ್ಞಾನಕ್ಕಾಗಿ ಅಧ್ಯಯನ ಮಾಡುವುದು ಬಹಳ ದೊಡ್ಡ ಪ್ರಯೋಜನಗಳನ್ನು ಹೊಂದಿದೆ. ಜ್ಞಾನಕ್ಕಾಗಿ ಅಧ್ಯಯನ ಮಾಡುವುದು ನಮ್ಮ ಸುತ್ತಲಿನ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು. ಜ್ಞಾನವಿಲ್ಲದೆ ನಾವು ಜೀವನದಲ್ಲಿ ಏನನ್ನೂ ಪಡೆಯಲಾಗುವುದಿಲ್ಲ. ಅಂಕಗಳು ನಮ್ಮ ಅಧ್ಯಯನದಿಂದ ನಾವು ಎಷ್ಟು ಕಲಿತಿದ್ದೇವೆ ಎಂದು ನಿರ್ಣಯಿಸುವ ಒಂದು ಮಾರ್ಗವಾಗಿದೆ. ಅಂಕಗಳನ್ನು ಪಡೆಯಲು ತರಗತಿಯಲ್ಲಿ ಕಲಿಸಿದ ಎಲ್ಲವನ್ನೂ ನಾವು ಉರುಹೊಡೆದು ನೆನಪಿನಲ್ಲಿಟ್ಟುಕೊಳ್ಳಬಹುದು. ಆದರೆ ಇದು ನಮಗೆ ಜ್ಞಾನವನ್ನು ಪಡೆಯಲು ಸಹಾಯ ಮಾಡುವುದಿಲ್ಲ. ಇದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಏಕೆಂದರೆ ಕಲಿಯುವುದನ್ನು ಅರ್ಥಮಾಡಿಕೊಳ್ಳುವುದರೊಂದಿಗೆ ಜ್ಞಾನವು ಬರುತ್ತದೆ.

ಜ್ಞಾನವು ನಮಗೆ ಉತ್ತಮ ಆಯ್ಕೆಗಳನ್ನು ಮಾಡಲು ವಿಮರ್ಶಾತ್ಮಕವಾಗಿ ಯೋಚಿಸಲು ಮತ್ತು ಜೀವನವನ್ನು ಹೆಚ್ಚು ಆನಂದದಾಯಕವಾಗಿಸುವ ರೀತಿಯಲ್ಲಿ ನಮ್ಮ ಮೆದುಳನ್ನು ಬಳಸುವ ಶಕ್ತಿಯನ್ನು ನೀಡುತ್ತದೆ.

ಜ್ಞಾನಕ್ಕಿಂತ ಅಂಕಗಳೇ ಮುಖ್ಯವಾದ ಸಮಾಜದಲ್ಲಿ ನಾವು ಬದುಕುತ್ತಿದ್ದೇವೆ. ಭಾರತದಲ್ಲಿ ಶೈಕ್ಷಣಿಕ ವ್ಯವಸ್ಥೆಯು ಪರೀಕ್ಷೆಗಳಲ್ಲಿ ಗಳಿಸಿದ ಅಂಕಗಳಿಗೆ ಅಗಾಧ ಪ್ರಾಮುಖ್ಯತೆಯನ್ನು ನೀಡುತ್ತದೆ. ಭಾರತದಲ್ಲಿ ಶಿಕ್ಷಣ ವ್ಯವಸ್ಥೆಯು ಹೆಚ್ಚು ಸ್ಪರ್ಧಾತ್ಮಕವಾಗಿದೆ. ಸ್ಪರ್ಧಾತ್ಮಕ ಪ್ರಪಂಚದ ಬೇಡಿಕೆಗಳು ಮತ್ತು ನಮ್ಮ ಶಿಕ್ಷಣ ವ್ಯವಸ್ಥೆಯು ವಿದ್ಯಾರ್ಥಿಗಳನ್ನು ಹೆಚ್ಚಿನ ಅಂಕಗಳನ್ನು ಪಡೆಯಲು ಮಾತ್ರ ಅಧ್ಯಯನ ಮಾಡಲು ಒತ್ತಾಯಿಸುವಂತಿದೆ.

ಪ್ರತಿ ಮಗುವೂ ವಿಭಿನ್ನವಾಗಿದೆ ಮತ್ತು ಅವರ ಆಸಕ್ತಿಗಳು ಮತ್ತು ಸಾಮರ್ಥ್ಯಗಳೂ ಕೂಡ ಭಿನ್ನವಾಗಿರುತ್ತದೆ. ಪೋಷಕರು ತಮ್ಮ ಮಕ್ಕಳಿಗೆ ಬಾಲ್ಯದಿಂದಲೂ, ಪರೀಕ್ಷೆಗಳಲ್ಲಿ ಉತ್ತಮ ಅಂಕಗಳು/ಶ್ರೇಯಾಂಕಗಳ ಮೂಲಕ ಶ್ರೇಷ್ಠ ವೃತ್ತಿಜೀವನವು ದೊರಕುತ್ತದೆ ಎಂದು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ. ಮನೆಯಲ್ಲಿ ಪೋಷಕರು, ಶಾಲೆಯಲ್ಲಿ ಶಿಕ್ಷಕರು ಶಿಕ್ಷಣದ ಏಕೈಕ ಗುರಿ ಅಂಕ ಗಳಿಸುವುದು ಎಂಬಂತೆ ಬಿಂಬಿಸುತ್ತಾರೆ.

ಬದಲಾಗುತ್ತಿರುವ ಸಮಯದೊಂದಿಗೆ, ಮಕ್ಕಳಿಗೆ ಸಾಕಷ್ಟು ಅವಕಾಶಗಳು ಕಾಯುತ್ತಿವೆ ಎಂದು ಪೋಷಕರು ತಿಳಿದಿರಬೇಕು. ಉತ್ತಮ ಅಂಕಗಳು ವಿದ್ಯಾರ್ಥಿಯು ಆರಂಭದಲ್ಲಿ ಉತ್ತಮ ಉದ್ಯೋಗವನ್ನು ಪಡೆಯಲು ಸಾಧ್ಯವಾಗುತ್ತದೆ. ಆದರೆ ನಿಜವಾದ ಪರೀಕ್ಷೆಯು ಜೀವನ ಮತ್ತು ಬೌದ್ಧಿಕ ಬೆಳವಣಿಗೆಯಲ್ಲಿದೆ. ಉತ್ತಮ ಅಂಕಗಳು ವೃತ್ತಿಜೀವನದಲ್ಲಿ ಒಳ್ಳೆಯ ಉದ್ಯೋಗವನ್ನು ನೀಡುತ್ತವೆಯಾದರೂ, ಉನ್ನತ ಸ್ಥಾನದಲ್ಲಿ ಉಳಿಯುವುದು ನಮ್ಮ ಜ್ಞಾನದ ಮಿತಿಯನ್ನು ಅವಲಂಬಿಸಿರುತ್ತದೆ. ನಮ್ಮ ಶೈಕ್ಷಣಿಕ ಜ್ಞಾನವನ್ನು ನೈಜ ಜಗತ್ತಿನಲ್ಲಿ ಬಳಸಲು ನಮಗೆ ಸಾಧ್ಯವಾದಾಗ ಮಾತ್ರ ಉತ್ತಮ ವೃತ್ತಿ ಜೀವನವನ್ನು ನಡೆಸಬಹುದು.

ವಾಸ್ತವವಾಗಿ, ಶೈಕ್ಷಣಿಕವಾಗಿ ಹೆಚ್ಚಿನ ಸಾಧನೆ ಮಾಡದ ಆದರೆ ಅಸಾಧ್ಯವೆಂದು ತೋರಿದ್ದನ್ನು ಸಾಧಿಸುವಲ್ಲಿ ಯಶಸ್ವಿಯಾಗಿರುವ ಹಲವಾರು ಮಹಾನ್ ವಿದ್ವಾಂಸರು ಮತ್ತು ಸಾಧಕರ ಬಹಳಷ್ಟು ಉದಾಹರಣೆಗಳಿವೆ. ಅದರಲ್ಲಿ ಒಂದು ಬಹಳ ಪ್ರೇರೇಪಿಸಿದ ಉದಾಹರಣೆ ಬಿಲ್‌ಗೇಟ್ಸ್ ಅವರ ಒಂದು ಕುತೂಹಲಕಾರಿ ಉಲ್ಲೇಖ ಹೀಗಿದೆ: "ನಾನು ತರಗತಿಯಲ್ಲಿ ಕೆಲವು ವಿಷಯಗಳಲ್ಲಿ ನನ್ನ ಪರೀಕ್ಷೆಯಲ್ಲಿ ಅನುತ್ತೀರ್ಣನಾಗುತ್ತಿದ್ದೆ, ಆದರೆ ನನ್ನ ಸ್ನೇಹಿತ ಎಲ್ಲದರಲ್ಲೂ ಉತ್ತೀರ್ಣನಾಗುತ್ತಿದ್ದನು. ಈಗ ಅವನು ಯಂತ್ರಶಾಸ್ತ್ರಜ್ಞ (ಇಂಜಿನಿಯರ್)ನಾಗಿ ಕೆಲಸ ನಿರ್ವಹಿಸುತ್ತಿದ್ದಾನೆ. ನಾನು ಅದರ ಮಾಲೀಕನಾಗಿದ್ದೇನೆ." ಜ್ಞಾನ ಎಷ್ಟೊಂದು ಪ್ರಾಮುಖ್ಯತೆಯನ್ನು ಪಡೆಯುತ್ತದೆ ಎಂದು ಇದರಿಂದ ತಿಳಿದುಬರುತ್ತದೆ.

●

ಮತದಾರರಲ್ಲಿ ಜಾಗೃತಿ

✍ ಐಸಿರಿ ಎಸ್. ಕಲ್ಮಾಡಿ, ಪ್ರಥಮ ಬಿ.ಎಸ್ಸಿ.

ಭಾರತದ ಸಾರ್ವಭೌಮ ಪ್ರಜೆಗಳಾದ ನಮಗೆ ಈ ದೇಶದ ಸಂವಿಧಾನ ಮಹತ್ತರ ಜವಾಬ್ದಾರಿಯನ್ನೊದಗಿಸಿದೆ. ಅದುವೇ ಮತದಾನವೆಂಬ ಪವಿತ್ರ ಕಾರ್ಯ.

ಹಿಂದೆ ಈ ದೇಶ ಸಹಸ್ರಾರು ವರ್ಷಗಳಿಂದ ಹಲವು ರಾಜ, ಮಹಾರಾಜರಿಂದ ತುಂಡು ತುಂಡುಗಳಾಗಿ ಆಳಲ್ಪಟ್ಟಿದೆ. ಹಲವು ಶತಮಾನಗಳ ಕಾಲ ವಿದೇಶೀಯರು ನಮ್ಮ ದೇಶದ ಆಳ್ವಿಕೆ ನಡೆಸಿದ್ದಾರೆ. ಆ ಸಮಯದಲ್ಲಿ ಈ ದೇಶದ ಪ್ರಜೆಗಳು ಸಾಕಷ್ಟು ಕಷ್ಟನಷ್ಟಕ್ಕೊಳಗಾಗಿ ಗುಲಾಮಗಿರಿಯ ಬದುಕನ್ನು ನಡೆಸಬೇಕಾಯಿತು. ಹಾಗಾಗಿ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿದ ನಮ್ಮ ಹಿರಿಯರು ಪರದೇಶಿಯರಿಂದ ಸ್ವಾತಂತ್ರ್ಯ ಪಡೆಯಲು ಶತಮಾನಗಳ ಕಾಲ ಹೋರಾಡಬೇಕಾಯಿತು. ಆ ಹೋರಾಟದ ಫಲವೇ ನಮಗಿಂದು ದೊರಕಿದ ಸ್ವಾತಂತ್ರ್ಯ. ಸ್ವಾತಂತ್ರ್ಯದ ನಂತರ ಡಾ। ಬಿ. ಆರ್. ಅಂಬೇಡ್ಕರ್ ರೂಪಿಸಿದ ಸಂವಿಧಾನವು ನಮಗೆ ಕೆಲವು ಪಾಲಿಸಬೇಕಾದ ಹಕ್ಕು ಮತ್ತು ಕರ್ತವ್ಯಗಳನ್ನು ನೀಡಿದೆ. ಅದರಲ್ಲಿ ಈ ಮತದಾನವೂ ಒಂದು.

18 ವರ್ಷ ಮೀರಿದ ದೇಶದ ಪ್ರತಿಯೊಬ್ಬ ಪ್ರಜೆಗೂ ಈ ದೇಶದ ಸಂವಿಧಾನ ಮತದಾನದ ಹಕ್ಕನ್ನು ಕಲ್ಪಿಸಿದೆ. ಆದರೆ ನಮಗೆ ದೊರಕಿದ ಈ ಪವಿತ್ರವಾದ ಹಕ್ಕನ್ನು ನಾವು ಹೇಗೆ ಚಲಾಯಿಸುತ್ತೇವೆ ಎನ್ನುವುದರ ಮೇಲೆ ಈ ದೇಶದ ಭವಿಷ್ಯ ನಿಂತಿದೆ.

ಆದರೆ ನಮಗೆ ದೊರಕಿದ ಈ ಪರಮೋಚ್ಚ ಹಕ್ಕನ್ನು ನಾವು ಸರಿಯಾಗಿ ನಿರ್ವಹಿಸುತ್ತಿದ್ದೇವೆಯೇ ಎಂಬ ಪ್ರಶ್ನೆಯನ್ನು ಇಂದು ಪ್ರತಿಯೊಬ್ಬ ನಾಗರೀಕನೂ ತನ್ನನ್ನು ತಾನು ಕೇಳಿಕೊಳ್ಳಬೇಕಿದೆ.

ಇಂದಿನ ಪರಿಸ್ಥಿತಿಯಲ್ಲಿ ನಮ್ಮ ರಾಜಕೀಯ ಕುಲಗೆಟ್ಟು ಹೋಗಿದೆ. ರಾಜಕಾರಣಿಗಳು ಅತಿ ಭ್ರಷ್ಟರಾಗಿದ್ದಾರೆ. ಹೆಚ್ಚಿನ ರಾಜಕಾರಣಿಗಳು ತಮ್ಮ ಹಲವು ಪೀಳಿಗೆಗಾಗುವಷ್ಟು ಸಂಪಾದಿಸಿದರೂ ಅವರ ಧನದಾಹ ನಿಲ್ಲುವುದಿಲ್ಲ. ಒಂದೊಮ್ಮೆ ತಾನು ರಾಜಕೀಯದಲ್ಲಿ ಅಪ್ರಸ್ತುತನಾದರೆ ತಮ್ಮ ಮಕ್ಕಳು, ಮೊಮ್ಮಕ್ಕಳನ್ನೂ ರಾಜಕೀಯಕ್ಕೆ ತಂದು ಅವರ ಮೂಲಕವೂ ತನ್ನ ಧನದಾಹವನ್ನು ತೀರಿಸಿಕೊಳ್ಳುತ್ತಿದ್ದಾನೆ. ದೇಶ ಸೇವೆ ಎಂಬ ನೆಪದಿಂದ ನಡೆಯುವ ಈ ಕುಟುಂಬ ಭ್ರಷ್ಟ ರಾಜಕಾರಣಕ್ಕೆ ಅಂತ್ಯವೇ ಇಲ್ಲದಂತಾಗಿದೆ.

ಇಂತಹ ಭ್ರಷ್ಟ ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಅಧಿಕಾರಶಾಹಿಯನ್ನೂ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಹೀಗಾಗಿಯೇ ಅಧಿಕಾರ ಶಾಹಿಯೂ ಭ್ರಷ್ಟತೆಯ ರೂಪವಾಗಿ ಅಧಿಕಾರಿಗಳು ಭ್ರಷ್ಟರಾಗುತ್ತಿದ್ದಾರೆ.

ಇಂದು ಯಾವುದೇ ಸರಕಾರಿ ಇಲಾಖೆಯ ಯಾವುದೇ ಕಡತಗಳು ಲಂಚ ಕೊಡದೆ ಚಲಿಸದು. ಈ ಪರಿಸ್ಥಿತಿಗೆ ಈ ದೇಶವನ್ನು ನಮ್ಮ ರಾಜಕಾರಣಿಗಳು ಕೊಂಡೊಯ್ದಿದ್ದಾರೆ.

ವಿಶ್ವ ಭೂಪಟದಲ್ಲಿ ನಮ್ಮ ದೇಶವು ವಿಜೃಂಭಿಸುತ್ತಿದೆ ಎಂದು ಮಾಧ್ಯಮಗಳು ಬಡಾಯಿಕೊಚ್ಚುತ್ತಿವೆ. ಆದರೆ ವಾಸ್ತವ ಹಾಗಿದೆಯೇ?

ದುರಂತವೇನೆಂದರೆ ಸ್ವಾತಂತ್ರ್ಯ ದೊರೆತು ಏಳು ದಶಕಗಳಾದರೂ ಈ ದೇಶದ ರೈತರು ಇಂದಿಗೂ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅಸಂಘಟಿತ ಕೂಲಿ ಕಾರ್ಮಿಕರು ತುತ್ತು ಅನ್ನ ಸಂಪಾದಿಸಲಿಕ್ಕಾಗಿ ದಿನಗಟ್ಟಲೆ ಅಲೆಯುತ್ತಿದ್ದಾರೆ. ಉಳ್ಳವರ ಕೈ ಕೆಳಗೆ ಗಂಟೆಗಳ ಲೆಕ್ಕವಿಲ್ಲದೆ ಕೆಲಸ ಮಾಡುವ ಇಂತಹ ಕೂಲಿ ಕಾರ್ಮಿಕರು ಯಾವ ಕಾರ್ಮಿಕ ಹಕ್ಕುಗಳನ್ನು ನಿರೀಕ್ಷಿಸುವಂತಿಲ್ಲ. ತಮ್ಮ ಕುಟುಂಬದ ಪೋಷಣೆಗಾಗಿ ತಮ್ಮ ಮಾಲಕರ ಕೈ ಕೆಳಗೆ ಗುಲಾಮರಂತೆ ದುಡಿಯಬೇಕಾಗಿದೆ.

ಸಂವಿಧಾನ ಈ ಪ್ರಜೆಗಳಿಗೆ ನೀಡಿರುವ ಎಲ್ಲ ಹಕ್ಕುಗಳನ್ನು ಒಂದೊಂದಾಗಿ ನಮ್ಮನ್ನು ಪ್ರತಿನಿಧಿಸುವ ಭ್ರಷ್ಟ ರಾಜಕಾರಣಿಗಳು ನಮ್ಮಿಂದ ಕಸಿಯುತ್ತಿದ್ದಾರೆ. "ಎಲ್ಲಿ ಸ್ತ್ರೀಯರು ಪೂಜಿಸಲ್ಪಡುವರೋ ಅಲ್ಲಿ ದೇವರು ನೆಲೆಸುವರೆನ್ನುವ" ಈ ದೇಶದಲ್ಲಿ ದಿನನಿತ್ಯ ಹೆಣ್ಣುಮಕ್ಕಳು ಅತ್ಯಾಚಾರಕ್ಕೀಡಾಗುತ್ತಿದ್ದಾರೆ. ಎಳೆ ಹಸುಳೆಗಳನ್ನೂ ಈ ಅತ್ಯಾಚಾರಿಗಳು ಬಿಡುತ್ತಿಲ್ಲ. ಇಂತಹ ಅತ್ಯಾಚಾರಿಗಳಿಗೆ ನಮ್ಮ ರಾಜಕಾರಣಿಗಳೇ ಮಾದರಿಗಳಾಗುತ್ತಿದ್ದಾರೆ.

ಬಡಜನರಿಗೆ ರಕ್ಷಣೆಯೇ ಇಲ್ಲವಾಗಿದೆ. ನಮ್ಮನ್ನು ರಕ್ಷಿಸಬೇಕಾದ ಶಾಸಕರಿಂದ, ಕಾರ್ಯಾಂಗದ ಜೊತೆ ನ್ಯಾಯಾಂಗವೂ ಭ್ರಷ್ಟವಾಗಿರುವುದರಿಂದ ಬಡವರಿಗೆ ನ್ಯಾಯ ದೊರೆಯುವುದು ಮರೀಚಿಕೆಯಾಗಿದೆ.

ವಿಶ್ವದ ಅಗ್ರಮಾನ ರಾಷ್ಟ್ರಗಳಲ್ಲಿ ನಮ್ಮ ದೇಶವೂ ಒಂದು ಎಂದು ನಾವು ಹೆಮ್ಮೆಯಿಂದ ಹೇಳಿಕೊಳ್ಳುವ ಮುನ್ನ ನಮ್ಮ ಬೆನ್ನ ಹಿಂದಿನ ಹೆಜ್ಜೆ ಗುರುತುಗಳನ್ನು ಗೌರವದಿಂದ ಗುರುತಿಸುವುದು ನಮ್ಮ ಕರ್ತವ್ಯವಲ್ಲವೇ?

ಆದರೆ ನಾವು ಆ ದೆಸೆಯಲ್ಲಿ ಸಾಗುತ್ತಿದ್ದೇವೆಯೇ? ನಮ್ಮ ಈ ದೇಶವು ಅಧಃಪತನದತ್ತ ಸಾಗುವಲ್ಲಿ ಮತದಾರರಾದ ನಮ್ಮ

ಕೊಡುಗೆಯೂ ಸಾಕಷ್ಟಿದೆ ಎಂಬ ಅರಿವು ನಮಗಿದೆಯೇ? ಚುನಾವಣೆಯ ಸಮಯದಲ್ಲಿ ಮತದಾನ ಎಂಬ ಪವಿತ್ರ ಕರ್ತವ್ಯವನ್ನು ಜವಾಬ್ದಾರಿಯಿಂದ ನಾವು ನಿಭಾಯಿಸಿದ್ದರೆ ನಮ್ಮನ್ನು ಆಳುವವರೂ ಜವಾಬ್ದಾರಿ ಅರಿತು ದೇಶ ಮುನ್ನಡೆಸುತ್ತಿದ್ದರು.

ಆದರೆ ಪ್ರಾಮಾಣಿಕವಾಗಿ ಮತದಾನ ಮಾಡಬೇಕಾದ ಈ ದೇಶದ ನಾಗರಿಕರಾದ ನಾವು ಭ್ರಷ್ಟ ರಾಜಕಾರಣಿಗಳ ಕಿಂಚಿತ್ ಆಮಿಷಕ್ಕೊಳಗಾಗಿ ನಮ್ಮ ಕರ್ತವ್ಯವನ್ನೇ ಮರೆಯುತ್ತಿದ್ದೇವೆ. ಅವರು ಕೊಡುವ ಜುಜುಬಿ ಹಣ ಮತ್ತು ಒಂದಿಷ್ಟು ಮದ್ಯಕ್ಕಾಗಿ ನಮ್ಮ ಮತವನ್ನೇ ಮಾರಿಕೊಳ್ಳುತ್ತೇವೆ. ಇಂತಹ ಅನೈತಿಕ ರೀತಿಯಿಂದ ಆರಿಸಿ ಬಂದ ಯಾವುದೇ ಮೌಲ್ಯಗಳಿಲ್ಲದ ರಾಜಕಾರಣಿಗಳು ದೇಶವನ್ನು ಗುಡಿಸಿ ಗುಂಡಾಂತರ ಮಾಡುವುದನ್ನು ನೋಡುವುದಲ್ಲದೆ ನಾವು ಇನ್ನೇನು ನಿರೀಕ್ಷಿಸಲು ಸಾಧ್ಯ?

ಹಾಗಾಗಿ ದೇಶವನ್ನು ಮುನ್ನಡೆಸಬೇಕಾದ ಮುಂದಿನ ಜನಾಂಗವಾದ ನಾವು ಯುವ ಜನತೆಯ ಮೇಲೆ ಸಾಕಷ್ಟು ಜವಾಬ್ದಾರಿಯಿದೆ. ನಮ್ಮ ದೇಶವು ಈ ಭ್ರಷ್ಟ ವ್ಯವಸ್ಥೆಯಿಂದ ಮುಕ್ತವಾಗಲು ನಾವು ಇನ್ನಾದರೂ ನಮ್ಮ ಕರ್ತವ್ಯವನ್ನು ಸರಿಯಾಗಿ ನಿಭಾಯಿಸಬೇಕಾಗಿದೆ.

ಯಾಕೆ ನಾವು ಮತ ಚಲಾಯಿಸಬೇಕು? ಭಾರತವು ಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿದೆ. ಮತದಾನದ ಹಕ್ಕು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಅರ್ಹ ಪ್ರಜೆಗಳು ತಮ್ಮ ಹಕ್ಕನ್ನು ಚಲಾಯಿಸುವುದು ಪ್ರತಿಯೊಂದು ಪ್ರಜಾಪ್ರಭುತ್ವದ ಹೃದಯದಲ್ಲಿಯೇ ಇದೆ. ನಾವು ಈ ರಾಷ್ಟ್ರದ ಜನರು, ನಮ್ಮ ಮತ ಚಲಾಯಿಸುವ ಹಕ್ಕಿನ ಮೂಲಕ ಸರ್ಕಾರವನ್ನು ನಡೆಸುವಂತಹ ನಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ದೇಶದ ವಿಧಿಯನ್ನು ಬದಲಿಸುವ ಅಂತಿಮ ಅಧಿಕಾರವನ್ನು ಹೊಂದಿರುತ್ತೇವೆ ಮತ್ತು ಪ್ರಗತಿ, ಅಭಿವೃದ್ಧಿ ಹಾಗೂ ಸರ್ವ ಜನರ ಲಾಭದ ನಿರ್ಧಾರಗಳನ್ನು ಕೈಗೊಳ್ಳುತ್ತೇವೆ.

ಯಾರು ಮತ ಹಾಕಬಹುದು? ಯಾವ ವರ್ಷದಲ್ಲಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲಾಗಿದೆಯೋ ಆ ವರ್ಷದ ಜನವರಿ ಒಂದರಂದು 18 ವರ್ಷ ವಯಸ್ಸನ್ನು ತುಂಬಿದ ಭಾರತದ ಎಲ್ಲ ಪ್ರಜೆಗಳೂ ತಾನು ಈಗಾಗಲೇ ವಾಸಿಸುತ್ತಿರುವ ಕ್ಷೇತ್ರದಲ್ಲಿ ಮತದಾರನಾಗಿ ನೋಂದಣಿ ಹೊಂದಲು ಅರ್ಹತೆಯನ್ನು ಪಡೆದಿರುತ್ತಾನೆ/ಳೆ. ಅಸ್ವಸ್ಥ ಮನಸ್ಸಿನ ವ್ಯಕ್ತಿಗಳು ಅಥವಾ ಭ್ರಷ್ಟ ಕೆಲಸಗಳಿಗಾಗಿ ಅಥವಾ ಚುನಾವಣೆಗೆ ಸಂಬಂಧಿಸಿದ ಅಪರಾಧಗಳಿಗಾಗಿ ಅನರ್ಹರಾದವರು ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಿಸಿಕೊಳ್ಳಲು ಅರ್ಹತೆಯನ್ನು ಹೊಂದಿರುವುದಿಲ್ಲ.

ಮತದಾರರ ಪಟ್ಟಿ ಎಂದರೆ ಏನು? ಒಂದು ಚುನಾವಣೆಯಲ್ಲಿ ತಮ್ಮ ಮತವನ್ನು ಚಲಾಯಿಸಲು ಅರ್ಹತೆಯನ್ನು ಪಡೆದ ಅರ್ಹ ನಾಗರಿಕರ ಪಟ್ಟಿಯನ್ನು ಮತದಾರರ ಪಟ್ಟಿ ಎಂದು ಕರೆಯುತ್ತಾರೆ. ಮತದಾರರ ಪಟ್ಟಿಯನ್ನು ವಿಧಾನಸಭಾ ಕ್ಷೇತ್ರವಾರು ಸಿದ್ಧಪಡಿಸಲಾಗುತ್ತವೆ. ಯಾವುದೇ ಒಂದು ವಿಧಾನಸಭಾ ಕ್ಷೇತ್ರಕ್ಕೆ ಮತದಾರರ ಪಟ್ಟಿಯನ್ನು ಮತಗಟ್ಟೆಗಳಿಗೆ ತಕ್ಕಂತೆ ಭಾಗಗಳಾಗಿ ವಿಂಗಡಣೆ ಮಾಡಲಾಗುತ್ತದೆ.

ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಿಸುವುದು ಹೇಗೆ? ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಿಸಿಕೊಳ್ಳಲು ಸೂಕ್ತ ದಾಖಲೆಗಳೊಂದಿಗೆ ಅರ್ಜಿ ನಮೂನೆ 6ರನ್ನು ಭರ್ತಿ ಮಾಡಿ ಸಂಬಂಧಪಟ್ಟ ಚುನಾವಣಾ ನೋಂದಣಿ ಅಧಿಕಾರಿಗಳಿಗೆ ಸಲ್ಲಿಸಬೇಕು.

ಮತದಾರರ ಪಟ್ಟಿಯ ಪ್ರತಿಗಳು ಎಲ್ಲೆಲ್ಲಿ ಲಭ್ಯವಿರುತ್ತವೆ? ಕರಡು ಮತದಾರರ ಪಟ್ಟಿಯ ಕಾಗದ ರೂಪದ ಪ್ರತಿಗಳು ಈ ಕೆಳಗಿನ ಕಚೇರಿಗಳಲ್ಲಿ ಲಭ್ಯ:

1. ವಾರ್ಡ್ ಕಚೇರಿಗಳು
2. ಮತದಾರ ಸೌಲಭ್ಯ ಕೇಂದ್ರಗಳು
3. ಜಿಲ್ಲಾಧಿಕಾರಿ/ವಿಭಾಗಾಧಿಕಾರಿ/ತಹಸೀಲ್ದಾರ್/ಬಿಬಿಎಂಪಿ ಆರ್.ಓ. ಕಚೇರಿಗಳು
4. ಮತಗಟ್ಟೆ ಅಧಿಕಾರಿಗಳು
5. ಸಾಫ್ಟ್ ಪ್ರತಿಯು ಸಿಇಓ ವೆಬ್‌ಸೈಟ್‌ನಲ್ಲಿ ಕೂಡ ಲಭ್ಯವಿರುತ್ತದೆ.

ಮತದಾರ ಸೌಲಭ್ಯ ಕೇಂದ್ರ ಎಂದರೆ ಏನು?

ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿಯೂ ಕೂಡ ಆಯಾ ಕ್ಷೇತ್ರದ ಮತದಾರರ ಸಮಸ್ಯೆಗಳನ್ನು ಪರಿಹರಿಸಲು ನಾವು ವಿಎಫ್‌ಸಿ ಕೇಂದ್ರಗಳು ನಾಗರಿಕ ಸ್ನೇಹಿ ಕೇಂದ್ರಗಳಾಗಿದ್ದು ಇಲ್ಲಿ ಮತದಾರರ ಪಟ್ಟಿಗೆ ಸಂಬಂಧಿಸಿದ ವಿಷಯಗಳು ಮತ್ತು ಎಪಿಕ್ ಕಾರ್ಡ್‌ಗಳಿಗೆ ಸಂಬಂಧಿಸಿದ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

ಮುಂದಿನ ಚುನಾವಣೆಗಳಲ್ಲಿ ಮತದಾನ ಮಾಡುವಾಗ ನಾವು ಯಾವುದೇ ಆಮಿಷಕ್ಕೊಳಗಾಗದೆ ಸಂವಿಧಾನ ಕಲ್ಪಿಸಿದ ಪವಿತ್ರ ಕರ್ತವ್ಯವನ್ನು ನಿಭಾಯಿಸುವುದಲ್ಲದೆ ಸಮಾಜದಲ್ಲಿ ಈ ಕುರಿತು ಜಾಗೃತಿ ಮೂಡಿಸಿ ನಮ್ಮ ಸಾಮಾಜಿಕ ಜವಾಬ್ದಾರಿ ನಿಭಾಯಿಸಬೇಕಾಗಿದೆ. ಆಗ ಮಾತ್ರ ನಮ್ಮ ಈ ದೇಶ ಪ್ರಪಂಚದ ಅತಿದೊಡ್ಡ ಪ್ರಜಾಪ್ರಭುತ್ವ ಎಂಬ ಹಿರಿಮೆಗೆ ಬೆಲೆ ಬಂದೀತು.

(ಸಂಗ್ರಹ ಬರಹ)

ಅಮ್ಮ ...

✍ **ಪ್ರತೀಕ್ಷಾ ಮಲ್ಯ**, ದ್ವಿತೀಯ ಬಿ.ಸಿ.ಎ.

ಬಹುಶಃ ಈ ಪದ ಕೇಳಿದೊಡನೆ ಅಥವಾ ನೋಡಿದೊಡನೆ ಮನಸ್ಸಿಗೆ ಆಗುವ ಸಂತೋಷವೇ ವರ್ಣಿಸಲಾಗದು... ನಮಗೆ ಹೇಳಿದಂತೆ ಯಾವುದಾದರೂ ಒಂದು ವಿಷಯದ ಕುರಿತು 4-5 ಪುಟಗಳನ್ನು ಬರೆಯಲು ಬಂದ ಮೊದಲನೆಯ ವಿಷಯವೇ ಅಮ್ಮ... ನನಗೆ ಕಂಡಂತೆ ಕನ್ನಡದ ವರ್ಣಮಾಲೆಯಾಗಲೀ ಅಥವಾ ಇಂಗ್ಲಿಷ್‌ನ ಆಲ್ಫಾಬೆಟ್ ಆಗಲಿ, ಈ ಯಾವ ಪದಗಳ ಮಿಶ್ರವು ಅಮ್ಮ ಅಥವಾ ಅಮ್ಮನ ಸಮನಾರ್ಥಕವನ್ನು ವರ್ಣಿಸಲಾಗದು... ಬರೆಯಲು ಕುಳಿತರೆ ನಾಲ್ಕೈದು ಪುಟಗಳೇನು ಪುಸ್ತಕವಿದ್ದರೂ ಸಾಲದು ಈ ವಿಷಯವನ್ನು ವರ್ಣಿಸಲು. ನಮಗೆ ಹೇಳಿದ ಪ್ರಕಾರ ನಾವು ಯಾವುದೇ ವಿಷಯವನ್ನು ಅಥವಾ ಕಥೆಯನ್ನು ಬರೆಯಬಹುದು. ಆದರೆ ನಾನು ಯಾವ ವಿಷಯವನ್ನು ಬರೆಯುತ್ತಿಲ್ಲ. ನನ್ನ ಅನುಭವ, ನನಗೆ ಈ ಪದವು ಎಷ್ಟು ಪ್ರಾಮುಖ್ಯವೆಂದು ಬರೆಯುತ್ತಿದ್ದೇನೆ.

ಹುಟ್ಟಿದಾಗ ಅಥವಾ ಹುಟ್ಟಿದ ಮೇಲೆ ಒಂದು ಮಗುವನ್ನು ಪ್ರೀತಿಸುವುದು ಸಾಮಾನ್ಯವಾಗಿದೆ. ಆದರೆ ಒಂದು ಮಗು ತಾನು ಹುಟ್ಟೋ ಮೊದಲೇ, ಅದು ಯಾವ ಮಗು, ಹೇಗಿದೆ ಎಂದು ತಿಳಿದು ನೋಡುವ ಮೊದಲೇ ಪ್ರೀತಿಸುವ ಏಕೈಕ ಜೀವ ಎಂದರೆ ಅಮ್ಮ ಎಂದರೂ ತಪ್ಪಾಗದು. ಅಮ್ಮ ಎರಡೇ ಅಕ್ಷರವಾದರೂ ಈ ಜೀವಿಯ ಋಣವನ್ನು ತೀರಿಸಲು ಏಳೇಳು ಜನ್ಮಗಳಿದ್ದರೂ ಸಾಲದು. ಮುಖ್ಯವಾಗಿ ನನ್ನ ಈ ಜೀವನಕ್ಕೆ ಅಮ್ಮ ಬಹುಮುಖ್ಯ ಪ್ರಾಮುಖ್ಯವನ್ನು ನೀಡುತ್ತೆ. ಬಿದ್ದೊಡನೆ ಬರುವ ಪದವು, ನಾವೇನೂ ಅಲ್ಲವೆಂದು ಅನಿಸುವಾಗ, ನಮಗ್ಯಾರೂ ಇಲ್ಲವೆಂದು ನೆನೆದಾಗ ಬರುವ ಒಂದೇ ಪದ, ಅದುವೇ ಅಮ್ಮ...

ಅಮ್ಮ ಎಂದರೆ ಎಲ್ಲರಿಗೂ ಇಷ್ಟ. ಹುಟ್ಟಿದ ಕೂಡಲೇ ಆಕೆಯ ಎದೆಯ ಮೇಲಿರಿಸಿ ಆಕೆಯ ಎದೆಬಡಿತ ಕೇಳಿ ಇದ್ದ ಈ ಜೀವವು, ಎಂದಾದರೂ ತಾಯಿಯನ್ನು ದ್ವೇಷಿಸುವುದು ಉಂಟೇ? ಜಗತ್ತಿನಲ್ಲಿ ಕೆಟ್ಟ ಮಕ್ಕಳಿರಲು ಮಾತ್ರ ಸಾಧ್ಯ. ಹಾಗಂತ ಎಲ್ಲಾ ಅಮ್ಮಂದಿರು ಹೇಗೆಂದು ನನಗೆ ತಿಳಿದಿಲ್ಲ. ಆದರೆ ನನ್ನ ಅಮ್ಮ, ನನ್ನ ಪ್ರೀತಿಯ ಅಮ್ಮ ನನಗೆ ಕೊಟ್ಟ ಪ್ರೀತಿಯನ್ನು ಕಾಣುವಾಗ ನನಗೆನಿಸುವ ಒಂದೇ ಮಾತು ಅದೇ ಜಗತ್ತಿನಲ್ಲಿ ಕೆಟ್ಟ ತಾಯಿ ಇರಲು ಸಾಧ್ಯವಿಲ್ಲ!!

ಇನ್ನು ನಾನು ನನ್ನ ಅಮ್ಮನ ವಿಷಯಕ್ಕೆ ಬರುವುದಾದರೆ, ಮಾತೃವಾತ್ಸಲ್ಯ ಎಂಬ ಪದವು ಹೇಗೆ ಹುಟ್ಟಿತು ಎಂಬ ಪ್ರಶ್ನೆಗೆ ನನ್ನ ಅಮ್ಮನನ್ನು ಕಂಡು ಉತ್ತರ ಪಡೆದುಕೊಂಡೆ. ನನ್ನ ಅಮ್ಮ ಈಗಲೂ ಹೇಳುತ್ತಾಳೆ "ನೀನು ಹುಟ್ಟುವಾಗಲೇ ತುಂಬಾ ಜೋರಿದ್ದಿ ಎಂದು ತಿಳಿದಿತ್ತು ನನಗೆ" ಎಂದು. ನಾನು ಚಿಕ್ಕಂದಿನಿಂದಲೂ ತುಂಬಾ ಜೋರು ಹೌದು, ಹಟಮಾರಿಯೂ ಹೌದು. ಏನಾದರೂ ನನಗೆ ಇಷ್ಟವಾಗಿಲ್ಲ ಅಂದಲ್ಲಿ ನಾನು ಅದನ್ನು ಒಪ್ಪಿಕೊಳ್ಳುವುದಿಲ್ಲ. ನಾನು ಹೇಗೇ ಇರಲಿ, ಏನೇ ಮಾಡಲಿ, ನಾನು ಮಾಡುವ ಪ್ರತಿಯೊಂದು ಕೆಲಸವು ಬಹಳ ಸಲ ನನ್ನ ಅಮ್ಮನಿಗೆ ಕೋಪ, ಬೇಜಾರು ಉಂಟು ಮಾಡಿದೆ. ಆದರೂ ನನಗೆ ಕೊಡುವ ಪ್ರೀತಿಯಲ್ಲಿ ಯಾವತ್ತೂ ಕೊರತೆ ಮಾಡಲಿಲ್ಲ. ನಾನು ತುಂಬಾ ಮಾತನಾಡುತ್ತೇನೆ, ಕೆಲವೊಮ್ಮೆ ನಾನೇನು ಮಾತನಾಡುತ್ತಿದ್ದೇನೆ ಎಂದು ನನಗೇ ಅರಿವಿರುವುದಿಲ್ಲ. ಇಂತಹ ವಿಷಯಗಳಿದ್ದರೂ ನನ್ನ ಅಮ್ಮ ನನಗಾಗಿ ಆಕೆಯ ಜೀವನವೇ ಮುಡಿಪಾಗಿಟ್ಟಳು.

ನಾನು ಯಾವತ್ತಾದರೂ, ಯಾವುದಾದರೂ ಒಂದು ವಸ್ತು ಕಂಡು ಇಷ್ಟಪಟ್ಟು ಅಮ್ಮ ನನಗೆ ಇಷ್ಟ ಆಯಿತು ಎಂದು ಹೇಳಿದರೆ ಸಾಕು ಕೆಲವು ದಿನದಲ್ಲಿ ಆ ವಸ್ತು ನಮ್ಮ ಮನೆಯಲ್ಲಿ ಇರುತ್ತಿತ್ತು.

ನನ್ನ ತಂದೆ ಕೆಲಸದ ವಿಷಯವಾಗಿ ಬೇರೆ ಊರಲ್ಲಿ ಇರುತ್ತಿದ್ದರು. ಎರಡು ತಿಂಗಳಿಗೆ ಒಮ್ಮೆ ನನಗೆ ಬೇಕಾದುದ್ದನ್ನೆಲ್ಲಾ ತಂದು ನಮ್ಮೊಂದಿಗೆ ಕೆಲದಿನವಿದ್ದು ಕೆಲಸಕ್ಕೆ ಹೋಗುತ್ತಿದ್ದರು. ಆದರೆ ನನ್ನ ಅಮ್ಮ ಯಾವತ್ತೂ ಕೂಡ ಅಪ್ಪ ಬೇರೆ ಕಡೆ ಇದ್ದಾರೆ, ನನಗೆ ತಂದೆಯ ಪ್ರೀತಿ ಸಿಗುತ್ತಿಲ್ಲ ಎಂದು ಅನಿಸುವ ಹಾಗೆ ಮಾಡಲಿಲ್ಲ. ನನ್ನ ಅಮ್ಮ, ತಂದೆ-ತಾಯಿ ಎರಡೂ ಸ್ಥಾನವನ್ನು ತುಂಬಿ ಸದಾ ನಮ್ಮೊಂದಿಗೆ ನನ್ನ ಹಾಗೂ ನನ್ನ ಅಕ್ಕನಿಗೆ ಆಧಾರಸ್ತಂಭವಾಗಿ ಇದ್ದಳು.

ವಿಷಯ ಏನೇ ಇರಲಿ, ಹೇಗೇ ಇರಲಿ, ಯಾವತ್ತಿಗೂ ಆಕೆಯ ಕಷ್ಟವನ್ನು ನಮ್ಮೆದುರಿಗೆ ಹಂಚಿಕೊಂಡವಳೇ ಅಲ್ಲ. ಆಕೆಯ ಮುಖದಲ್ಲಿ ಯಾವತ್ತೂ ಆ ಬೇಸರವನ್ನು ನಾವು ಕಂಡಿಲ್ಲ. ಏನೇ ಇದ್ದರೂ ತಾನೇ ಎಲ್ಲಾ ವಿಷಯಕ್ಕೂ ಪರಿಹಾರ ಹುಡುಕಿ ನಮ್ಮನ್ನು ಖುಷಿಯಲ್ಲಿ ಇರುವಂತೆ ಮಾಡುತ್ತಿದ್ದಳು. ನಾವೇನು ಶ್ರೀಮಂತರೂ ಅಲ್ಲ, ಬಡವರೂ ಅಲ್ಲ. ಒಂದು ಮಧ್ಯಮ ವರ್ಗದ ಕುಟುಂಬ. ಹಾಗಂತ ನಮಗೇನು ಕಷ್ಟ ಇರಲಿಲ್ಲ ಅಂತ ಏನಿಲ್ಲ, ಅಮ್ಮ ನಮ್ಮ ಮುಂದೆ ತೋರಿಸಿಕೊಳ್ಳುತ್ತಿರಲಿಲ್ಲ ಅಷ್ಟೇ!!

ಅಮ್ಮ ಮನೆಯ ಪ್ರತಿಯೊಂದು ಕೆಲಸವನ್ನು ಮಾಡುತ್ತಿದ್ದಳು. ಮನೆಯ ಹೊರಗೆ ಹೋಗಿ ದುಡಿದು ತನ್ನ ಮಕ್ಕಳಿಗೆ ಬೇಕಾದ ವಸ್ತುಗಳನ್ನು, ತನ್ನ ಮಕ್ಕಳಿಗೆ ಇಷ್ಟವಾದ ತಿಂಡಿ ತಿನಿಸುಗಳನ್ನು ಮಾಡಲೆಂದು ಕೆಲಸಕ್ಕೆ ಹೋಗಿ ದುಡಿದು ನಮ್ಮ ಎಲ್ಲಾ ಇಚ್ಛೆಗಳನ್ನು ಪೂರೈಸಿದಳು. ಮನೆಯ ಎಲ್ಲಾ ಜವಾಬ್ದಾರಿ ನನ್ನ ಅಮ್ಮನ ಹೆಗಲ ಮೇಲಿದ್ದು ಎಲ್ಲವನ್ನೂ ಸುಧಾರಿಸುತ್ತಿದ್ದಳು. ಇದೆಲ್ಲಾ ತಿಳಿಯದ ನಾವು ಅಮ್ಮ ಏನಾದರೂ ಕೊಡುವಾಗ ಅಮ್ಮ ನಿನಗಂತ ಏನಾದರೂ ಮಾಡಿದ್ದುಂಟೆ ಎಂದು ಕೇಳುವ ಆಲೋಚನೆ ನಮಗೆ ಇರಲಿಲ್ಲ. ನಮಗೆ ಕೊಟ್ಟದ್ದನ್ನು ತಿನ್ನುವುದು, ಶಾಲೆಗೆ ಹೋಗಿ ಕಲಿಯುವುದಷ್ಟೇ ಇತ್ತು.

ನನ್ನ ಈ 19 ವರ್ಷದ ಜೀವನದಲ್ಲಿ ನನಗೆ ಗೊತ್ತಿದ್ದಷ್ಟು ನನ್ನ ಅಮ್ಮ ನನ್ನ ಮೇಲೆ ಕೈ ಮಾಡಲಿಲ್ಲ. ನಾನು ಕಿರಿಯ ಮಗಳು ಆಗಿದ್ದರಿಂದ ನನ್ನ ತಾಯಿಗೆ ಗಂಡು ಮಗು ಇರದಿದ್ದರಿಂದ ನನ್ನನ್ನೇ ಗಂಡು ಮಗುವಂತೆ ಬೆಳೆಸಿದ್ದಳು. ಯಾವುದೇ ಕೆಲಸವು ನನಗೆ ಆಗುವುದಿಲ್ಲ ಎಂದು ಅನಿಸಿದ ಕೂಡಲೇ ಅಮ್ಮ ನನ್ನನ್ನು ಹುರಿದುಂಬಿಸಿ ಕಳಿಸುತ್ತಿದ್ದಳು.

ಇಷ್ಟೆಲ್ಲಾ ಇರುವಾಗ ನನ್ನ ಅಮ್ಮನಿಗೆ ನನಗೆ ನೋವಾಗುವುದು ನೋಡಲಾಗದು. ಇದು ಬಹಳ ವರ್ಷಗಳ ಹಿಂದೆ ನಡೆದದ್ದು. ನನಗೆ ಒಮ್ಮೆ ಜೋರು ಜ್ವರ ಬಂದಿದ್ದು, ನಾನು ಶಾಲೆಯಿಂದ ಮನೆಗೆ ಬರುವಾಗ ನನ್ನ ಮೈ ಸುಡುತ್ತಿತ್ತು. ಯಾರು ಇರಲ್ಲಿಲ್ಲ ಮನೆಯಲ್ಲಿ ನಾ ಬಂದು ಮಲಗಿದೆ. ನನಗೆ ಎಚ್ಚರ ಇಲ್ಲ. ಎದ್ದು ನೋಡುವಾಗ ನನ್ನ ತಲೆ ಮೇಲೆ ಒದ್ದೆ ಬಟ್ಟೆ ಪಕ್ಕದಲ್ಲಿ ಅಮ್ಮ... ಅಮ್ಮ ಎಂದು ಕರೆದ ಕೂಡಲೇ ಆಕೆಯ ಮುಖದಲ್ಲಿ ಇದ್ದ ಖುಷಿ ಇಂದೂ ನನಗೆ ನೆನಪಿದೆ. ನಾನು ಎದ್ದ ಕೂಡಲೇ ನನಗೆ ಊಟ ಮಾಡಿಸಿ, ಮಾತ್ರೆ ಕೊಟ್ಟು ನನಗೆ ಮಲಗಲು ಹೇಳಿದಳು. ಮಧ್ಯರಾತ್ರಿ ಎಚ್ಚರವಾಗಿ ನೋಡುವಾಗ ಅಮ್ಮ ತನ್ನ ನಿದ್ದೆ ಬಿಟ್ಟು ನನ್ನ ಹಣೆಗೆ ಒದ್ದೆ ಬಟ್ಟೆ ಹಾಕಲು ಕುಳಿತಿದ್ದಳು... ಒದ್ದೆ ಬಟ್ಟೆ ಎಲ್ಲಿ ಒಣಗೋಗುತ್ತೋ? ಒಣಗೋದರೆ ಎಲ್ಲಿ ಜ್ವರ ಜಾಸ್ತಿ ಆಗುತ್ತೋ ಎಂಬ ಯೋಚನೆಯಲ್ಲಿ ನನ್ನ ಪಕ್ಕದಲ್ಲಿ ಕುಳಿತು, ನಿದ್ದೆ ಬಿಟ್ಟು ನನ್ನ ಆರೈಕೆ ಮಾಡುತ್ತಿದ್ದಳು. ಇದು ತಾಯಂದಿರ ಕರ್ತವ್ಯವೂ ಹೌದು. ಆದರೆ ನಾನು ಇದರಲ್ಲಿ ತುಂಬಾ ತುಂಬಾ ಅಮೂಲ್ಯವಾದ ಪ್ರೀತಿಯನ್ನು ಕಂಡೆ.

ನನ್ನ ಅಮ್ಮ ಹೇಳುತ್ತಾರೆ ನನ್ನ ಬಾಯಿಗೆ ರುಚಿ ಜಾಸ್ತಿ ಎಂದು. ಕೊಟ್ಟಿದ್ದನ್ನು ತಿನ್ನಲಾಗುವುದಿಲ್ಲ ಎಂದು ಕೋಪದಿಂದ ಬೈಯುತ್ತಾಳೆ. ಅವಳು ಹೇಳುವುದೇನು ಸುಳ್ಳಲ್ಲ. ನಾನು ಮಾಡುವುದನ್ನೇ ಹೇಳುತ್ತಾಳೆ. ನಾನು ನನಗೇನಾದರೂ ಇಷ್ಟವಿಲ್ಲದ್ದು ತಿನ್ನದೆ ಶಾಲೆಗೆ ಹೋದರೆ ಆ ದಿನವೆಲ್ಲಾ ಅಯ್ಯೋ ನನ್ನ ಮಗಳು ತಿನ್ನದೆ ಶಾಲೆಗೋದಳು ಎಂದು ಮರುದಿನ ಆಗೋವರೆಗೂ ಕೊರಗುತ್ತಾ ಇರುತ್ತಾಳೆ. ನಾನು ತಿಂದಿಲ್ಲ ಎಂದರೆ ಆ ದಿನ ಆಕೆಯು ತಿನ್ನುವುದಿಲ್ಲ.

ಇದೇ ಒಂದು 7-8 ತಿಂಗಳ ಹಿಂದೆ ನಾನೊಂದು ಅಪಘಾತಕ್ಕೆ ಒಳಗಾದೆ. ನಾನು ಕಾಲೇಜು ಮುಗಿಸಿ ಮನೆಗೆ ಬರಲು ನನ್ನ ಸ್ಕೂಟರ್ ತೆಗೆದು ಮನೆಗೆ ಹೋಗುವಾಗ ಗಾಡಿಯಲ್ಲಿ ಪೆಟ್ರೋಲ್ ಇರಲಿಲ್ಲ. ಪೆಟ್ರೋಲ್ ಹಾಕಿ NH 66 ದಾಟುವಾಗ ತಡೆರಹಿತ ಬಸ್ ಬಂದು ನನ್ನ ಗಾಡಿಗೆ ಢಿಕ್ಕಿ ಹೊಡೆಯಿತು. ಆ ದಿನ ನನ್ನ ಅಮ್ಮನ ಮನಸ್ಸು ತುಂಬಾ ಕಳವಳ ಆಗುತ್ತಿತ್ತಂತೆ. ಅದಕ್ಕೆ ಸೋಮವಾರ ಆಗಿದ್ದರಿಂದ ಈಶ್ವರನ ಲಿಂಗಕ್ಕೆ ಪೂಜೆ ಮಾಡಲು ಕುಳಿತಳಂತೆ. ಅಷ್ಟರಲ್ಲಿ ಮನೆಗೆ 3-4 ಜನರು ಬಂದು ನಿನ್ನ ಮಗಳು ಅಪಘಾತಕ್ಕೆ ಒಳಗಾಗಿ ಪೆಟ್ಟಾಗಿದೆ. ಆಸ್ಪತ್ರೆಯಲ್ಲಿ ಇದ್ದಾಳೆ ಎಂದು ಹೇಳಿದಾಗ ಆಕೆಗೇನು ಮಾಡುವುದೆಂದು ಹೊಳೆಯಲಿಲ್ಲ. ಹಾಗೋ ಹೀಗೋ ಮಾಡಿ ಓಡೋಡಿ ಆಸ್ಪತ್ರೆಗೆ ಹೋದಾಗ ನಾನು ಒಳಗಿದ್ದೆ. ಅಮ್ಮನನ್ನು ಒಳಗೆ ಬಿಡಲಿಲ್ಲವಂತೆ. ನನಗೆ ಎರಡು ದಿನವಾದ ಮೇಲೆ ಎಚ್ಚರ ಆಗುವಾಗ ನಾ ನೋಡಿದ ಮೊದಲ ಮುಖ ನನ್ನ ಅಮ್ಮ. ಎಂದಿಗೂ ಖುಷಿ ಖುಷಿಯಲ್ಲಿ ಇರುತ್ತಿದ್ದ ಆ ಮುಖ ಆ ಎರಡು ದಿನದಲ್ಲಿ ಕೂಗಿ, ನಿದ್ದೆ ಬಿಟ್ಟು, ಭಯಪಟ್ಟು ಆ ಮುಖವೇ ಚಿಕ್ಕದಾಗಿತ್ತು. ಆ ಕ್ಷಣದಲ್ಲಿ ನನಗೆ ತಿಳಿದದ್ದು ಒಂದೇ... ನನಗೆ ನೋವಾದರೂ ಅನುಭವಿಸುವುದು ಅವಳೊಬ್ಬಳೇ. ಅಪಘಾತ ಆದದ್ದು ನನಗೆ, ನೋವಾಗಿದ್ದು ನನಗೆ, ಚಿಕಿತ್ಸೆಗೆ ಒಳಗಾಗಿದ್ದು ನಾನು ಆದರೆ ನೋವು ಅನುಭವಿಸಿದ್ದು ನನ್ನ ಅಮ್ಮ... ಇಂತಹ ತ್ಯಾಗಮಯಿ ಅಮ್ಮನನ್ನು ಹೇಗೆ ದ್ವೇಷಿಸಲಿ, ಹೇಗೆ ಆಕೆಯನ್ನು ಬಿಟ್ಟುಕೊಡಲು ಮನಸ್ಸಾಗುವುದು... ಇವೆಲ್ಲಾ ಕುಳಿತು ಯೋಚಿಸಿದಾಗ ನನಗನಿಸುವುದೊಂದೇ... ತಾಯಿಗಿಂತ ದೇವರಿಲ್ಲ. ಆಕೆಯ ಖುಷಿಯೇ ನನ್ನ ಖುಷಿ. ಆಕೆಯನ್ನು ಸಂತೋಷವಾಗಿಟ್ಟುಕೊಳ್ಳುವುದೇ ನನ್ನ ಬದುಕಿನ ಮುಖ್ಯ ಧ್ಯೇಯ... ನನ್ನ ಅಮ್ಮ ನನ್ನ ದೇವರು...

●

ಬಾಲ್ಯವೆಂಬ ಸುಂದರ ಪಯಣ...

✍ **ಶ್ರೇಯಾ**, ದ್ವಿತೀಯ ಬಿ.ಎಸ್ಸಿ.

ಬಾಲ್ಯ ಅಂದರೆ ಅದೊಂದು ಜೀವನದ ಸುಂದರ ಅನುಭವ. ಕಳೆದ ಬಾಲ್ಯದ ದಿನಗಳು ಮಧುರ ನೆನಪುಗಳ ಆಗರ. ಅಲ್ಲಿರುವುದು ನಮ್ಮದೇ ಪುಟ್ಟ ಪ್ರಪಂಚ. ಯಾವುದೇ ಚಿಂತೆಯಿಲ್ಲದ ದಿನಗಳವು. ನಿಷ್ಕಲ್ಮಶ ಮನಸ್ಸಿನ ಮುದ್ದು ಕಂದಮ್ಮಗಳು ನಾವಂದು. ದೇಹಕ್ಕೆ ಸುಸ್ತಾಗುವಷ್ಟು ಆಟ, ಮನಸ್ಸಿಗೆ ತೃಪ್ತಿಯಾಗುವಷ್ಟು ನಗು, ಚಿಂತೆಯಿಲ್ಲದವನಿಗೆ ಸಂತೆಯಲ್ಲೂ ನಿದ್ರೆ ಎಂಬಂತೆ ಮಲಗಿದ ಕೂಡಲೇ ಸುಖವಾದ ನಿದ್ರೆ. ಇಂತಹ ಸುಂದರ, ಮಧುರ ಅನುಭವವೇ ಬಾಲ್ಯ.

"ಎದ್ದೇಳೇ! ಬೆಳಗಾಯಿತು, ಶಾಲೆಗೆ ಹೊರಡಲು ಹೊತ್ತಾಯಿತು" ಎಂಬುದು ಅಮ್ಮನ ಬೆಳಗ್ಗಿನ ಅಲಾರಾಂ. ಆರು ಗಂಟೆಯಾಗಿದ್ದರೂ ಸಹ ಏಳು ಗಂಟೆ ಆಯಿತೆಂದು ಹೇಳಿ ಮಕ್ಕಳನ್ನು ಎಬ್ಬಿಸುವ ಸಣ್ಣ ಪ್ರಯತ್ನ ಅಮ್ಮನದು. ಬೆಳಗಿನ ಚುಮು ಚುಮು ಚಳಿಯಲ್ಲಿ ಏಳುವುದು ಅತ್ಯಂತ ಕಷ್ಟಕರ ಕೆಲಸ ಆ ದಿನಗಳಲ್ಲಿ. ಕೇವಲ ಆ ದಿನಗಳು ಮಾತ್ರವಲ್ಲ ಇಂದು ಕೂಡ ಬೆಳಗ್ಗೆ ಬೇಗ ಏಳುವುದಂತೂ ಸ್ವಲ್ಪ ಕಷ್ಟವೇ. ಆದರೆ ಜವಾಬ್ದಾರಿ ಹೆಗಲೇರಿದಾಗ ಕಷ್ಟಗಳನ್ನು ಇಷ್ಟಪಡಬೇಕಾಗುತ್ತದೆ. ಅದಿರಲಿ ಮತ್ತೆ ಬಾಲ್ಯಕ್ಕೆ ತೆರಳೋಣ ಬನ್ನಿ.

ಅಮ್ಮನ ಅಲಾರಾಂಗೆ ಎದ್ದು ಹಲ್ಲುಜ್ಜಿ, ಮುಖ ತೊಳೆದು ಮೊದಲು ದೇವರಿಗೆ ಕೈ ಮುಗಿಯಬೇಕೆಂದು ಅಮ್ಮ ಹೇಳಿಕೊಟ್ಟಿದ್ದರು. ಅದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ ದಿನಗಳವು. ನಂತರ ತಿಂಡಿ ತಿಂದು ಹಿಂದಿನ ದಿನ ಸ್ವಲ್ಪ ಉದಾಸೀನವಾಗಿ ಬಾಕಿಯಿಟ್ಟಿದ್ದ ಬರೆಯುವ ಕೆಲಸವನ್ನು ಶಿಕ್ಷಕರ ಬೈಗುಳಕ್ಕೆ ಹೆದರಿ ಬೆಳಗೆದ್ದು ಪಟಪಟನೆ ಬರೆಯುತ್ತಿದ್ದಾಗ ರಾತ್ರಿಯೇ ಬರೆದು ಮುಗಿಸಬೇಕು ತಾನೇ ಎಂಬ ಅಮ್ಮನ ಬೈಗುಳಕ್ಕೆ ಮುಖ ಸಪ್ಪಗೆ ಮಾಡಿದ್ದಂತೂ ಸುಳ್ಳಲ್ಲ. ನಂತರ ಪುಸ್ತಕಗಳನ್ನೆಲ್ಲ ಬ್ಯಾಗ್‌ನೊಳಗಿಟ್ಟು ಶಾಲೆಯ ಸಮವಸ್ತ್ರ ಧರಿಸಿ ಅಕ್ಕ ಮತ್ತು ಅಣ್ಣನ ಕೈ ಹಿಡಿದು ಶಾಲೆಯ ಕಡೆಗೆ ನಮ್ಮ ಪಯಣ ಶುರು. ಮನೆಯಿಂದ ಹೊರಟ ನಾವು ಅಕ್ಕಪಕ್ಕದ ಮಕ್ಕಳನ್ನು ಕೂಡಿಕೊಂಡು ಒಟ್ಟು ಹತ್ತರಿಂದ ಹನ್ನೊಂದು ಮಕ್ಕಳು ಒಟ್ಟಾಗಿ ಶಾಲೆಗೆ ಹೋಗುತ್ತಿದ್ದೆವು. ಶಾಲೆಗೆ ಹೋಗುವಾಗ ಅಲ್ಪಸ್ವಲ್ಪ ತರ್ಲೆ ತಮಾಷೆಗಳಿಂದ ನೇರವಾಗಿ ಶಾಲೆಗೆ ತೆರಳುತ್ತಿದ್ದ ನಾವು ಮರಳಿ ಬರುವಾಗ ನೇರವಾಗಿ ಮನೆ ತಲುಪುವುದಂತೂ ಕನಸಿನ ಮಾತು.

ಶಾಲೆಯಲ್ಲಿ ಕೊನೆಯ ಬೆಲ್ ಬಾರಿಸಿದಾಗ ಕೂಡಲೇ ಬ್ಯಾಗ್ ಹೆಗಲಿಗೇರಿಸಿಕೊಂಡು ಬೆಳಗ್ಗೆ ಬಂದಾಗ ಜೊತೆಯಿದ್ದವರನ್ನೆಲ್ಲಾ ಕೂಡಿಕೊಂಡು ಓಡುತ್ತಿದ್ದುದು ಮಾವಿನಕಾಯಿ ಕೀಳಲು. ಯಾರದೋ ಮನೆಯ ಕಂಪೌಂಡ್ ಹಾರಿ ಮಾವಿನಕಾಯಿ ಕೀಳುತ್ತಿರುವಾಗ ಅವರ ಕೈಗೆ ಸಿಕ್ಕಿಬಿದ್ದು ಬೈಗುಳ ಕೇಳಿದ್ದನ್ನು ಇಂದು ನೆನೆಸಿದಾಗ ಅರಿವಿಲ್ಲದಂತೆ ತುಟಿಯಂಚಲಿ ನಗು ಬರುವುದು. ಅಂದು ಪೇರಳೆ, ನೇರಳೆ, ಜಂಬುನೇರಳೆ, ಮಾವು, ಹಲಸು, ಗೇರುಹಣ್ಣುಗಳನ್ನು ಮನಸೋಇಚ್ಛೆ ತಿನ್ನುತ್ತಿದ್ದೆವು. ಹಾಗೇ ಹಾಡುತ್ತ, ಕುಣಿಯುತ್ತ, ಹರಟೆ ಹೊಡೆಯುತ್ತ, ಅಲ್ಪ ಸ್ವಲ್ಪ ಕೋಪ, ಮುನಿಸು, ಜಗಳಗಳ ಜೊತೆಗೆ ತರ್ಲೆ ತಮಾಷೆಗಳನ್ನು

ಮಾಡಿಕೊಂಡು ಮನಸ್ಸು ತೃಪ್ತಿಯಾಗುವಂತೆ ದಿನಕಳೆದು ಬಹಳ ಸಂತೋಷದಿಂದ ಮನೆ ಸೇರುತ್ತಿದ್ದೆವು.

ಆಡು ಮುಟ್ಟದ ಸೊಪ್ಪಿಲ್ಲ ಎಂಬ ಮಾತಿದೆ. ಅದರಂತೆ ಅಂದು ನಾವು ಆಡದ ಆಟಗಳೇ ಇರಲಿಕ್ಕಿಲ್ಲ ಎಂದರೂ ಸ್ವಲ್ಪಮಟ್ಟಿಗೆ ಸರಿಯೇ ಇರಬಹುದು. ಕುಂಟಬಿಲ್ಲೆ, ಕಣ್ಣಾಮುಚ್ಚಾಲೆ, ಮರಕೋತಿ, ಬುಗುರಿ, ಕಳ್ಳ ಪೊಲೀಸ್, ಲಗೋರಿ – ಹೀಗೆ ಎಲ್ಲಾ ರೀತಿಯ ಆಟಗಳನ್ನು ಆಡುತ್ತಿದ್ದೆವು. ಮಳೆ ಬಂದರೆ ಮಳೆಯಲ್ಲಿ ನೆನೆಯುವ ಖುಷಿ, ಬಿಸಿಲಾದರೆ ಮೈ ಬೆವತು ಬೆವರು ಹರಿಯುವವರೆಗೂ ಆಟ, ಹೀಗೆ ಆಟವಾಡಲು ಮನೆಯಿಂದ ಹೊರಗೆ ಹೋದರೆ ಮನೆ ಹಿರಿಯರು ಕೋಲು ಹಿಡಿದು ಬರುವವರೆಗೆ ಬಿಸಿಲು, ಮಳೆಯ ಪರಿವೆ ಇರಲಿಲ್ಲ ನಮಗೆ. ಅಂದು ಆಡಿದ ಮನೆ ಆಟ, ಮದುವೆ ಆಟ, ಅಡುಗೆ ಮಾಡುವ ಆಟ, ಇವೆಲ್ಲವೂ ಒಂದು ಸುಂದರ ನೆನಪುಗಳು. ಅಂದು ಈ ಆಟಗಳು ನೀಡಿದ ಸಂತೋಷ ಇಂದು ಮಕ್ಕಳ ಕೈಯಲ್ಲಿರುವ ಮೊಬೈಲ್‌ಗಳು ನೀಡಲಿಕ್ಕಿಲ್ಲ ಎಂಬುದು ನನ್ನ ಯೋಚನೆ. ಶಾಲೆಯಲ್ಲೂ ಅಷ್ಟೇ ದಿನದ ಪಾಠಗಳು ಮುಗಿಯುತ್ತಿದ್ದಂತೆ ಆಟವಾಡಲು ಮೈದಾನಕ್ಕೆ ಓಡುತ್ತಿದ್ದೆವು. ಸುಸ್ತಾಗುವವರೆಗೂ ಆಟವಾಡಿ ಮನೆಗೆ ತೆರಳಿ ಬರೆಯಲು, ಓದಲು ಕುಳಿತಾಗ ಆಟ ಆಡಿದ ಸುಸ್ತಿಗೆ ಅಲ್ಲೇ ನಿದ್ದೆ ಬರುತ್ತಿತ್ತು. ಆಗ ಅಮ್ಮ ಊಟ ಮಾಡಿ ಮಲಗೆಂದು ಎದ್ದೇಳಿಸಿದಾಗ ಎಚ್ಚರಗೊಂಡು ಪಿಳಿಪಿಳಿ ಕಣ್ಣು ಬಿಟ್ಟುಕೊಂಡು ಊಟ ಮುಗಿಸಿ ಮಲಗಿದರೆ ಸುಖ ನಿದ್ರೆಗೆ ಕೊರತೆ ಇರಲಿಲ್ಲ.

ಅಂದು ಶಾಲೆಯಲ್ಲಿ ಆಟ–ಪಾಠಗಳು ಮಾತ್ರವಲ್ಲ ಜೊತೆಗೆ ನಮ್ಮಿಂದಾಗುವಂತಹ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಸುತ್ತಿದ್ದರು. ಮನೆಯಲ್ಲಿ ಕೆಲಸ ಮಾಡಲು ಉದಾಸೀನವಾದರೂ ಸಹ ಶಾಲೆಯಲ್ಲಿ ಎಲ್ಲರ ಜೊತೆಗೂಡಿ ಬಹಳ ಉತ್ಸಾಹದಿಂದ ಮಾಡುತ್ತಿದ್ದೆವು. ಶಾಲೆಯಲ್ಲಿ ನಮಗೆ ಒಂದೊಂದು ಗಿಡದ ಜವಾಬ್ದಾರಿಯನ್ನು ಕೊಟ್ಟಿದ್ದರು. ಆ ಗಿಡದ ಜವಾಬ್ದಾರಿ ಮತ್ತು ಉಸ್ತುವಾರಿ ನಮ್ಮದಾಗಿತ್ತು. ಬೆಳಿಗ್ಗೆ ಬಂದು ನೀರು ಹಾಕುವುದು ಹಾಗೂ ಸಂಜೆ ಮನೆಗೆ ಹೋಗುವ ಮೊದಲೊಮ್ಮೆ ನೀರು ಹಾಕುವುದು ಮತ್ತು ಅದಕ್ಕೆ ಬೇಕಾಗುವಷ್ಟು ಗೊಬ್ಬರ ಹಾಕುವುದು ನಮ್ಮ ಕೆಲಸ. ಉತ್ತಮವಾಗಿ ಬೆಳೆದ ಗಿಡಗಳನ್ನು ನೋಡಿ ಅದರ ಜವಾಬ್ದಾರಿ ಹೊತ್ತ ವಿದ್ಯಾರ್ಥಿಗಳನ್ನು ಶ್ಲಾಘಿಸುತ್ತಿದ್ದರು. ಇದರಿಂದ ಉಳಿದೆಲ್ಲಾ ವಿದ್ಯಾರ್ಥಿಗಳಿಗೆ ಹುಮ್ಮಸ್ಸು ಹೆಚ್ಚಾಗಿ ಆ ಗಿಡಗಳನ್ನು ಮಗುವಿನಂತೆ ಪ್ರೀತಿಸುತ್ತಿದ್ದರು. ಹೀಗೆ ಅಂದು ನಮ್ಮ ಬಾಲ್ಯದಲ್ಲಿಯೇ ಗಿಡಗಳನ್ನು ಉಳಿಸಿ ಬೆಳೆಸುವ ಪಾಠವನ್ನು ನಮಗೆ ತಿಳಿಸಿದ್ದರು. ಅದನ್ನು ಮಾತಿನಲ್ಲಿ ಮಾತ್ರವಲ್ಲದೆ ಕಾರ್ಯರೂಪದಲ್ಲಿ ನಾವು ಪಾಲಿಸಿದ್ದೇವೆ. ಅಷ್ಟೇ ಅಲ್ಲದೆ ನಮ್ಮ ಸರಿ ತಪ್ಪುಗಳನ್ನುತಿಳಿಸಿ, ಓದಿನ ಮಹತ್ವ ತಿಳಿಸಿ, ಚೆನ್ನಾಗಿ ಓದಲು, ಬರೆಯಲು ಒಬ್ಬ ಉತ್ತಮ ವಿದ್ಯಾರ್ಥಿನಿಯಾಗಲು ಪ್ರೇರಣೆಯಾಗಿದ್ದವರು ನಮ್ಮ ಶಿಕ್ಷಕರು.

ಅಂದು ಬೇಸಿಗೆ ರಜೆ ಅಂದರೆ ಸಾಕು ಅದೇನೋ ಸಂತೋಷ. ಬೇಸಿಗೆ ರಜೆ ಸಿಕ್ಕಾಗ ನಮ್ಮ ಆನಂದಕ್ಕೆ ಪಾರವೇ ಇರಲಿಲ್ಲ. ರಜೆಯ ದಿನಗಳಲ್ಲಿ ನಮ್ಮ ದಿನಚರಿಯೇ ಬೇರೆಯಾಗಿತ್ತು. ಬೆಳಗೆದ್ದು ಶಾಲೆಗೆ ಹೋಗಲಿಕ್ಕಿಲ್ಲವಲ್ಲ ಎಂಬ ಸಂತೋಷ. ಬೆಳಗೆದ್ದು ಅಕ್ಕಪಕ್ಕದ ಮಕ್ಕಳೆಲ್ಲ ಸೇರಿಕೊಂಡು ಆಟವಾಡಲು ಶುರು ಮಾಡಿದರೆ ನಮಗೆ ಮನೆಯ ನೆನಪಾಗುವುದು – ಒಂದೋ ಹೊಟ್ಟೆ ಹಸಿದಾಗ ಇಲ್ಲವೇ ಆಟವಾಡುವಾಗ ಸಣ್ಣ ಪುಟ್ಟ ಜಗಳವಾದರೆ ಅಥವಾ ಬಿದ್ದು ಪೆಟ್ಟು ಮಾಡಿಕೊಂಡಾಗ ಅಥವಾ ಊಟಕ್ಕೆ ಹೊತ್ತಾದರೂ ಮನೆಗೆ ಬರಲಿಲ್ಲ ಎಂದು ಅಮ್ಮ ಕೋಲು ಹಿಡಿದು ಬಂದಾಗಲೇ ಅಮ್ಮನ ನೆನಪು ನಮಗೆ. ಅಮ್ಮ ಬಾರದಿದ್ದರೆ ನಾವು ಮನೆಗೆ ಮರಳುವುದು ದನಕರುಗಳು ಮನೆಗೆ ಹೊರಡುವ ಹೊತ್ತಾದಾಗಲೆ. ನಾವು ಅಂದು ಆಡಿದ ಕಣ್ಣಾಮುಚ್ಚಾಲೆ ಆಟದ ಆರಂಭದಲ್ಲಿ ಹೇಳುತ್ತಿದ್ದ ಪದ ಹೀಗಿದೆ ನೋಡಿ –

"ಕಣ್ಣಾ ಮುಚ್ಚೆ... ಕಾಡೇ ಗೂಡೆ... ಉದ್ದಿನ ಮೂಟೆ...
ಉರುಳೇ ಹೋಯಿತು... ನನ್ನಯ ಹಕ್ಕಿ... ಬಿಟ್ಟೆ ಬಿಟ್ಟೆ...
ನಿಮ್ಮಯ ಹಕ್ಕಿ... ಬಚ್ಚಿಕೊಳ್ಳಿ"

ಇಲ್ಲಿ ಹುಡುಕುವ ಹಕ್ಕಿ ಬಚ್ಚಿಟ್ಟುಕೊಂಡಿರುವ ಹಕ್ಕಿಯನ್ನು ಹುಡುಕುವ ಆಟ. ಬಚ್ಚಿಟ್ಟುಕೊಂಡಿರುವವರು ಸಿಕ್ಕಾಗ ಹುಡುಕುವವರ ಖುಷಿ ಮತ್ತು ಎಂತಹ ನಗುವಿತ್ತು ಅಲ್ಲಿ.

ಮತ್ತೆ ಬೇಸಿಗೆ ರಜೆ ಮುಗಿಸಿಕೊಂಡು ಶಾಲೆಗೆ ಹೋಗುವ ಹಿಂದಿನ ದಿನ ಬಾಕಿಯಿದ್ದ ಎಲ್ಲಾ ಬರೆಯುವ, ಓದುವ ಕಾರ್ಯವನ್ನು ಮುಗಿಸಿ ಶಾಲೆಗೆ ಹೊರಡುತ್ತಿದ್ದೆವು.

ಏನೇ ಆದರೂ ಆ ದಿನಗಳು ಮತ್ತೆಂದೂ ಮರಳಿ ಬರುವುದಿಲ್ಲ. ಬಾಲ್ಯದ ಆ ದಿನಗಳು ಸುಂದರ, ಸುಮಧುರ ನೆನಪುಗಳು, ಮತ್ತೆಂದೂ ಮರಳಿ ಬಾರದ ಆ ಆನಂದದ ದಿನಗಳು ಇಂದಿಗೂ ಮನಸ್ಸಿನಲ್ಲಿ ಹಚ್ಚ ಹಸುರಾಗಿದೆ. ಬಾಲ್ಯದ ಆ ದಿನಗಳನ್ನು ಖುಷಿಯಿಂದ ಕಳೆಯಲು ಜೊತೆಗಿದ್ದ ಗೆಳೆಯ–ಗೆಳತಿಯರೆಲ್ಲರಿಗೂ ನನ್ನದೊಂದು ಧನ್ಯವಾದ!

●

ಕಂಪ್ಯೂಟರ್ ಮತ್ತು ಶಿಕ್ಷಣ

✍ **ವರದರಾಜ**, ದ್ವಿತೀಯ ಬಿ.ಸಿ.ಎ.

ಗಣಕಯಂತ್ರ/ಕಂಪ್ಯೂಟರ್ ಎಂಬ ಒಂದು ಯಂತ್ರವನ್ನು ತಯಾರಿಸುವಾಗ ನಂತರ ಹತ್ತು ಹಲವು ವರ್ಷಗಳವರೆಗೆ ಅದನ್ನು ಬಳಸುವಾಗಲೂ ಯಾರ ತಲೆಯಲ್ಲಿಯೂ ಯೋಚನೆ ಬಂದಿರಲಿಕ್ಕಿಲ್ಲ, ಮುಂದೊಂದು ದಿನ ಸರ್ವವ್ಯಾಪಿಯಾಗಿ ಪ್ರಪಂಚದೆಲ್ಲೆಡೆ ಬಳಸುತ್ತಿರುವ ಪೆನ್ನು, ಪೆನ್ಸಿಲ್, ಪೇಪರ್ ಮನೆಯ ಅಟ್ಟ ಸೇರುವ ಕಾಲ ಬರುತ್ತದೆ, ಮಕ್ಕಳಿಗೆ ಶಿಕ್ಷಣವು ಈ ಗಣಕಯಂತ್ರಗಳ ಮೂಲಕ ನಡೆಯುತ್ತದೆ ಎಂದು!

ಹೆಸರಿನಲ್ಲೇ ತನ್ನ ಉಪಯೋಗ ತಿಳಿಸುವಂತಿರುವ, ಗಣಕಯಂತ್ರದ ಮೊದಲ ತಯಾರಿಕೆಯ ಉದ್ದೇಶ ಲೆಕ್ಕ, ಗಣಿತವನ್ನು, ಅಂಕೆ-ಸಂಖ್ಯೆಗಳ ಮಾಯಾಜಾಲಗಳ ನಡುವೆ ಕಳೆದು ಹೋಗದೆ ಚುಕ್ಕೆಯಷ್ಟು ಸರಿಯಾಗಿರುವ ಲೆಕ್ಕಗಳನ್ನು ಬಿಡಿಸುವುದು, ಗಣಿತವನ್ನು ಮಾಡುವುದು. ಆದರೆ ಅದು ಅಲ್ಲಿಗೆ ನಿಲ್ಲದೆ ಕಾಲವು ಮುಂದುವರಿದಂತೆ, ತಂತ್ರಜ್ಞಾನದ ಏಳಿಗೆ ಆದಂತೆ ಹಲವು ಪುನರ್ಜನ್ಮಗಳನ್ನು ಪಡೆದು ಮನುಕುಲದ ಮಾನವನ ಒಂದೊಂದೇ ಕೆಲಸಗಳನ್ನು ಮಾಡುವಲ್ಲಿ ಅವನಿಗಿಂತ ಉತ್ತಮನೆಂಬಂತೆ ಪರಿಣತಿ ಹೊಂದಿ ಇಂದು ಮುಂದಿನ ಜನಾಂಗಕ್ಕೆ, ಯುವ ಪೀಳಿಗೆಗೆ ಪಾಠ ಕಲಿಸಲು ಬಳಸುವ ಯಂತ್ರವಾಗಿ ಮಾರ್ಪಟ್ಟಿದೆ. ಕಂಪ್ಯೂಟರ್ ಶಿಕ್ಷಣದ ಬಳಕೆ, ಬೇಡಿಕೆ ಎರಡೂ ದಿನೇ ದಿನೇ ಹೆಚ್ಚುತ್ತಾ ಹೋಗುತ್ತಿದೆ.

ಸಾಧಾರಣ ಹತ್ತು ವರ್ಷಗಳಿಂದ ಕಂಪ್ಯೂಟರ್ ಶಿಕ್ಷಣದ ಪದ್ಧತಿ ಕೆಲವು ಬೆರಳೆಣಿಕೆಯಷ್ಟು ಕಡೆಗಳಲ್ಲಿ ಚಾಲ್ತಿಯಲ್ಲಿದ್ದರೂ, ಕಂಪ್ಯೂಟರ್ ಶಿಕ್ಷಣ ಸ್ಫೋಟಕ ವೇಗವನ್ನು ಪಡೆದದ್ದು ಕೊರೋನಾ ಲಾಕ್‌ಡೌನ್ ಕಾಲದಲ್ಲಿ ಅಂದರೆ ಕಳೆದ 3 ವರ್ಷಗಳಲ್ಲಿ ಕಂಪ್ಯೂಟರ್ ಶಿಕ್ಷಣದ ಬಳಕೆ 10-20 ವರ್ಷಗಳ ಒಟ್ಟು ಬಳಕೆಗಿಂತ ಹೆಚ್ಚಾಗಿದೆ. ಏಕೆಂದರೆ ಲಾಕ್‌ಡೌನ್ ಸಮಯದಲ್ಲಿ ಹೊರಗೆ ಹೋಗಲು ಸಾಧ್ಯವಿಲ್ಲದ ಜನ ಎಲ್ಲರೂ ಕಂಪ್ಯೂಟರ್/ಆನ್ಲೈನ್ ಶಿಕ್ಷಣದ ಮೊರೆ ಹೋಗಿದ್ದಾರೆ. ಆದರೆ ಲಾಕ್‌ಡೌನ್ ಮುಗಿದ ನಂತರ

ಕೂಡ ಕಂಪ್ಯೂಟರ್ ಶಿಕ್ಷಣಕ್ಕೆ ಒಗ್ಗಿಹೋದ ಮಕ್ಕಳು/ಜನರು ಈಗ ಅದರಿಂದ ಹೊರಬರಲು ಕೇಳುತ್ತಿಲ್ಲ. ಏಕೆಂದರೆ ಕೂತಲ್ಲಿಯೇ ಬೆರಳ ತುದಿಯಲ್ಲಿ ಇಡೀ ಪ್ರಪಂಚದಲ್ಲಿನ ಆಗು-ಹೋಗುಗಳನ್ನು, ಯಾವುದೇ ವಿಷಯವನ್ನು, ಸಾವಿರಾರು ಮೂಲಗಳಿಂದ, ಸಾವಿರಾರು ಆಯ್ಕೆಗಳಿಂದ ನಮಗೆ ಬೇಕಾದ ಹಾಗೆ ಎಲ್ಲಾ ಆಗಬೇಕಾದರೆ ಯಾರು ತಾನೇ ಅದರಿಂದ ಹೊರಬರಲು ಇಚ್ಛಿಸುತ್ತಾರೆ?

ಹಾಗಾಗಿ ಈಗ ಕಂಪ್ಯೂಟರ್ ಶಿಕ್ಷಣವು ಕಲಿಕೆಯ ಪ್ರಕ್ರಿಯೆಯ ಒಂದು ಪ್ರಮುಖ ಭಾಗವಾಗಿದೆ. ಕಂಪ್ಯೂಟರ್, ಶಿಕ್ಷಣ ವ್ಯವಸ್ಥೆಯ ಪ್ರಮುಖ ಭಾಗವಾಗಿರುವ ಕಾರಣ ಕಂಪ್ಯೂಟರ್, ಪೆನ್ನು ಹಾಗೂ ಪೇಪರ್‌ಗಳ ಜಾಗವನ್ನು ಆಕ್ರಮಿಸಿಕೊಳ್ಳಲಾರಂಭಿಸಿದೆ. ಕಂಪ್ಯೂಟರ್ ಶಿಕ್ಷಣವು ಸಾಂಪ್ರದಾಯಿಕ ಕಲಿಕೆಯ ವಿಧಾನಗಳಿಂದ ಹೆಚ್ಚಿನ ಪ್ರಯೋಜನ, ಉಪಯೋಗಗಳನ್ನು ಹೊಂದಿದೆ.

ಕಂಪ್ಯೂಟರ್ ತಂತ್ರಜ್ಞಾನವು ಶಿಕ್ಷಣ ಕ್ಷೇತ್ರದ ಮೇಲೆ ದೊಡ್ಡ ಪ್ರಭಾವ ಬೀರಿದೆ. ಹೀಗಾಗಿ ಶಿಕ್ಷಣವು ಮೊದಲಿಗಿಂತ ಸುಲಭ ಮತ್ತು ಹೆಚ್ಚು ರೋಮಾಂಚನಕಾರಿಯಾಗಿ ಬದಲಾಗಿದೆ. ಗಣಕಯಂತ್ರಗಳ ಮೆಮೊರಿ ಸಾಮರ್ಥ್ಯದಿಂದಾಗಿ ಪೆನ್ನು ಪೇಪರ್‌ಗಳಲ್ಲಿ ಸಂಗ್ರಹಿಸಬಹುದಾದಕ್ಕಿಂತ ನೂರಾರು ಪಟ್ಟು ಜಾಸ್ತಿ ವಿಷಯಗಳು ನೂರಾರು ಪಟ್ಟು ಕಡಿಮೆ ಜಾಗದಲ್ಲಿ ಸಂಗ್ರಹಿಸಬಹುದು. ಅಂತರ್ಜಾಲ ಅಥವಾ ನೆಟ್‌ವರ್ಕ್‌ಗೆ ಕನೆಕ್ಟ್ ಆದ ಕಂಪ್ಯೂಟರ್ ತ್ವರಿತ ಸಂವಹನಕ್ಕೆ ಕೂಡ ದಾರಿ ಮಾಡಿ ಕೊಡುತ್ತದೆ. ಇನ್ನು ಶಿಕ್ಷಣದ

ವಿಷಯಕ್ಕೆ ಬಂದರೆ, ದಪ್ಪ ದಪ್ಪದ ಸಾವಿರಾರು ಪುಟಗಳ ಪುಸ್ತಕಗಳಲ್ಲಿ ಮಾಹಿತಿಯನ್ನು ಹುಡುಕುವುದಕ್ಕಿಂತ ಕಂಪ್ಯೂಟರ್ ಮೂಲಕ ವಿದ್ಯಾರ್ಥಿಗಳು ಬಹಳಷ್ಟು ಕಡಿಮೆ ಸಮಯದಲ್ಲಿ ಪುಸ್ತಕಕ್ಕಿಂತ ಹೆಚ್ಚಿನ ಮಾಹಿತಿಯನ್ನು ಹುಡುಕಿ ತಿಳಿದುಕೊಳ್ಳಬಹುದಾಗಿದೆ. ಅಲ್ಲದೆ ಈ ಕಂಪ್ಯೂಟರ್ ಶಿಕ್ಷಣ ದೂರ ಶಿಕ್ಷಣದ ಕನಸನ್ನು ನನಸಾಗಿಸಿದೆ. ಹೀಗಾಗಿ ಶಿಕ್ಷಣ ಇನ್ನು ಮುಂದೆ ಕೇವಲ ತರಗತಿಯ ಒಳಗೆ ಮಾತ್ರ ಸೀಮಿತವಾಗಿಲ್ಲ . ಇದರಿಂದಾಗಿ ನಾವು ನಮ್ಮ ಮನೆಯಲ್ಲೇ ಕೂತು ನಮ್ಮ ಸ್ವಂತ ಸೌಕರ್ಯದೊಂದಿಗೆ ಪದವಿಯನ್ನು ಮಾಡಬಹುದು. ವಿದ್ಯಾರ್ಥಿಗಳಿಗೆ ಅಗತ್ಯವಿರುವ ಮಾಹಿತಿಗಳು ಜಗತ್ತಿನ ಬೇರೆ ಬೇರೆ ಶಿಕ್ಷಕರ ಮೂಲಕ ಲಭ್ಯವಾಗುತ್ತದೆ. ಇವು ವಿದ್ಯಾರ್ಥಿಗಳಿಗೆ ಓದುವಿಕೆ ಹಾಗೂ ಗಣಿತದಲ್ಲಿ ನಿಪುಣರನ್ನಾಗಿಸುತ್ತದೆ. ಶಿಕ್ಷಕರು ತಮ್ಮ ವಿದ್ಯಾರ್ಥಿಗಳೊಂದಿಗೆ ತರಗತಿಯಲ್ಲಿ ಕೆಲಸ ಮಾಡಲು ಮತ್ತು ಕಲಿಕೆ ಗರಿಷ್ಠಗೊಳಿಸಲು ಬಳಸಬಹುದಾದ ಉಪಯುಕ್ತ ಡೇಟಾ ಮತ್ತು ಸಂಪನ್ಮೂಲಗಳನ್ನು ಕೂಡಾ ಕಂಪ್ಯೂಟರ್ ಒದಗಿಸುತ್ತದೆ.

ಶಿಕ್ಷಣದಲ್ಲಿ ಕಂಪ್ಯೂಟರ್ ಬಳಕೆಯಿಂದ ಅನೇಕ ಉಪಯೋಗಗಳಿದ್ದರೂ ಅಷ್ಟೇ ಅನಾನುಕೂಲಗಳಿವೆ. ಕಂಪ್ಯೂಟರ್‌ಗಳಿಂದ ಮಕ್ಕಳು ವಿಚಲಿತರಾಗುತ್ತಿದ್ದಾರೆ. ಏಕೆಂದರೆ ಅದರಲ್ಲಿ ಸಿಗುವ ಗೇಮ್ಸ್‌ಗಳು, ವೀಡಿಯೋಗಳು, ಚಾಟಿಂಗ್ ಸೌಲಭ್ಯಗಳು ವಿದ್ಯಾರ್ಥಿಗಳಿಗೆ ಪ್ರಲೋಭನೆ ಒದಗಿಸುತ್ತದೆ. ಇದಲ್ಲದೆ ಕಂಪ್ಯೂಟರ್‌ನ ಮೇಲಿನ ಹೆಚ್ಚಿನ ಅವಲಂಬನೆ, ಅಕ್ಷರ, ಪದ ವಾಕ್ಯಗಳಲ್ಲಿರುವ ವ್ಯಾಕರಣ ತಿದ್ದುವ ತಂತ್ರಜ್ಞಾನದಂತಹ ತಂತ್ರಜ್ಞಾನಗಳು ಮಕ್ಕಳ, ವಿದ್ಯಾರ್ಥಿಗಳ ವ್ಯಾಕರಣವನ್ನು ಕ್ಷೀಣಿಸುತ್ತದೆ. ಹುಡುಕಿದ ಕೂಡಲೇ ಬೆರಳತುದಿಯಲ್ಲಿ ವಿಷಯ ಪ್ರಾಪ್ತಿ ಆಗುವುದರಿಂದ ಮಕ್ಕಳು ಹೆಚ್ಚು ಹೆಚ್ಚು ಸೋಮಾರಿಗಳಾಗುತ್ತಿದ್ದಾರೆ. ಮನೆಯಿಂದ/ಕೋಣೆಯಿಂದ ಹೊರಗೆ ಹೋಗುವುದನ್ನು ಕಡಿಮೆ ಮಾಡುತ್ತಾರೆ, ಕ್ರಿಯಾಶೀಲತೆ ಕಮ್ಮಿ ಆಗುತ್ತದೆ.

ಹೀಗೆ ಕಂಪ್ಯೂಟರ್ ಶಿಕ್ಷಣ ಇಂದಿನ ಆಧುನಿಕ ಜಗತ್ತಿನಲ್ಲಿ ವಿದ್ಯಾರ್ಥಿಗಳಿಗೆ ಎಷ್ಟು ಉಪಯುಕ್ತವಾಗಿದೆಯೋ, ಅವರಿಗೆ ಗೊತ್ತಿಲ್ಲದೆ ಅವರನ್ನು ಅಷ್ಟೇ ಸೋಮಾರಿಗಳನ್ನಾಗಿ ಮಾಡುತ್ತಿದೆ. ಅದನ್ನು ಅರಿತುಕೊಂಡು ಕಂಪ್ಯೂಟರ್ ಶಿಕ್ಷಣದ ಇತಿ-ಮಿತಿಗಳನ್ನು ತಿಳಿದುಕೊಂಡು ಸರಿಯಾದ ರೀತಿಯಲ್ಲಿ ಬಳಸಿದ್ದಲ್ಲಿ ವಿದ್ಯಾರ್ಥಿಯ ಶೀಘ್ರಾಭಿವೃದ್ಧಿ ಶತಸಿದ್ಧ.

●

ನನ್ನಮ್ಮ

ಜಗವೆಲ್ಲ ನನ್ನ ತಿರಸ್ಕರಿಸಿದರೂ
ನನ್ನ ಗೆಲುವಿಗಾಗಿ ಹಂಬಲಿಸಿದಳು
ನನ್ನ ನೋವಲ್ಲಿ ಜಗವೇ ಖುಷಿ ಕಂಡರು
ಅವಳ ನೋವನ್ನು ಬದಿಗೆರಚಿ ಸುಖ ಹಂಚಿದಳು

ಹಲವಾರು ಮನಸ್ಸು ನಾ ಹಿಂದುಳಿಯಬೇಕೆಂದರು
ಹಿಂದೆ ನಿಂತು ನಾ ಮುನ್ನುಗ್ಗುವಲ್ಲಿ ರಕ್ಷೆಯಾದಳು
ಜೀವನದಲ್ಲಿ ನಾ ಸುಳ್ಳು ಹೇಳಿದರೂ
ಸುಳ್ಳಿನ ಹಾದಿಯನ್ನೊರೆಸಿ ಸತ್ಯದ ಹಾದಿ ತೋರಿದಳು

ನಿನ್ನ ಕುರಿತು ಬರೆದರೆ ಸಾಲ
ನಾ ಪಡೆಯಬೇಕಾದೀತು ಪದಗಳ ಸಾಲ
ಪದಗಳೇ ಇಲ್ಲ ನಿನ್ನ ಬಣ್ಣಿಸಲು
ಅಪೂರ್ವ ಪ್ರೀತಿಯೇ ನಿನಗಿಲ್ಲಿ ಮೀಸಲು

✍ **ವೈಭವಿ,** ದ್ವಿತೀಯ ಬಿ.ಎಸ್ಸಿ.

ಕ್ರಿಕೆಟ್: ಒಂದು ಪರಿಚಯ

✍ **ಅಭಿಷೇಕ್ ಶೆಟ್ಟಿ**, ದ್ವಿತೀಯ ಬಿ.ಸಿ.ಎ.

1. ಉಗಮ ಮತ್ತು ಪರಿಚಯ
2. ಉಪಯೋಗಿಸುವ ಸಲಕರಣೆ ಅಥವಾ ಆಟಿಕೆಗಳು
3. ಆಟದ ಮೈದಾನ
4. ಆಡುವ ಬಗೆ

ಕ್ರಿಕೆಟ್ ಉಗಮದ ಬಗ್ಗೆ ಸ್ಪಷ್ಟವಾಗಿ ತಿಳಿದಿಲ್ಲ. ಐರ್ಲೆಂಡಿನ ವೀರರ ಕಥೆಗಳಲ್ಲಿ ಬರುವ 'ನ್ಯಾಟ್‌ಲೀಕರ್' ಎನ್ನುವ ಆಟದಿಂದ ಕ್ರಿಕೆಟ್ ಉಗಮವಾಯಿತೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಜೂಟ್ ಜನಾಂಗದವರು ಕ್ರಿ.ಶ. 400ರಲ್ಲಿ ಕ್ರಿಕೆಟ್ ಆಟವನ್ನು ಶತಮಾನಕ್ಕೂ ಮುಂಚೆ ಇಂಗ್ಲೆಂಡಿಗೆ ತಂದರು ಮತ್ತು ಇಂಗ್ಲೆಂಡಿನಲ್ಲಿ ಕ್ರಿಕೆಟ್ ಆಟ ಪ್ರಚಲಿತವಿತ್ತು ಎಂದು ಊಹಿಸಲಾಗಿದೆ. 1774ರಿಂದ ಕ್ರಿಕೆಟ್ ಆಟದ ನಿಯಮಗಳ ಬಗೆಗೆ ಲಿಖಿತ ದಾಖಲೆಗಳಿವೆ. 1787ರಲ್ಲಿ ಮಾರಿಲಿಬೋನ್ ಕ್ರಿಕೆಟ್ ಕ್ಲಬ್ ಅಥವಾ ಎಂ.ಸಿ.ಸಿ. ಸ್ಥಾಪಿತವಾಯಿತು. ಅದು ಇಂದಿಗೂ ಕ್ರಿಕೆಟ್ ಆಟದ ನಿಯಮಾವಳಿಗಳನ್ನು ರೂಪಿಸುತ್ತದೆ.

ಇಂದು ಕ್ರಿಕೆಟ್ ಆಸ್ಟ್ರೇಲಿಯಾ, ವೆಸ್ಟ್ ಇಂಡೀಸ್, ನ್ಯೂಜಿಲೆಂಡ್, ಶ್ರೀಲಂಕಾ, ಪಾಕಿಸ್ತಾನ, ದಕ್ಷಿಣ ಆಫ್ರಿಕಾ ಮತ್ತು ಭಾರತದಲ್ಲಿ ಅತ್ಯಂತ ಪ್ರಮುಖ ಹಾಗೂ ಜನಪ್ರಿಯ ಆಟವಾಗಿದೆ. ಈ ದೇಶಗಳ ಮಧ್ಯೆ ಪರಸ್ಪರ ಟೆಸ್ಟ್ ಆಟಗಳು ನಡೆಯುತ್ತವೆ.

ಬ್ರಿಟಿಷರು ಭಾರತಕ್ಕೆ ಬಂದಾಗ ಕ್ರಿಕೆಟ್ ಆಟ ಸಹ ಅವರೊಂದಿಗೆ ಬಂದಿತು. 1792ರ ಹೊತ್ತಿಗೆ ಭಾರತದಲ್ಲಿ 'ಕಲ್ಕತ್ತ ಕ್ರಿಕೆಟ್ ಕ್ಲಬ್' ಅಸ್ತಿತ್ವದಲ್ಲಿತ್ತು. ಈ ಕ್ಲಬ್‌ನ ಆಟದ ಮೈದಾನ 'ಈಡನ್ ಗಾರ್ಡನ್'. ಪ್ರಾರಂಭದಲ್ಲಿ ಈ ಕ್ಲಬ್‌ನಲ್ಲಿ ಭಾರತೀಯ ಆಟಗಾರರು ಇರಲಿಲ್ಲ. ಭಾರತ ಸ್ವತಂತ್ರವಾದ ಮೇಲೆ ರಾಜ್ಯಗಳು ತಮ್ಮದೇ ತಂಡಗಳನ್ನು ಕಟ್ಟಿಕೊಂಡು 'ರಣಜಿ ಟ್ರೋಫಿ' ಪಂದ್ಯಗಳಲ್ಲಿ ಭಾಗವಹಿಸುತ್ತಿವೆ.

ಆಟದ ಸಲಕರಣೆಗಳು: ಕ್ರಿಕೆಟ್ ಆಡಲು ಮುಖ್ಯವಾಗಿ ಬೇಕಾದ ಸಲಕರಣೆಗಳೆಂದರೆ ಚೆಂಡು, ಬ್ಯಾಟು, ವಿಕೆಟ್, ಪ್ಯಾಡು ಇತ್ಯಾದಿ. ಕ್ರಿಕೆಟ್ ಆಡಲು ವಿಶೇಷ ಬಗೆಯ ಚೆಂಡನ್ನು ಸಿದ್ಧಪಡಿಸಿರುತ್ತಾರೆ. ಕಾರ್ಕ್‌ನ ಸುತ್ತಲೂ ಬಿಗಿಯಾಗಿ ಟ್ವೈನ್ ದಾರ ಸುತ್ತಿ ಮೆರುಗು ಕೊಟ್ಟು ಕೆಂಪು ಬಣ್ಣ ಬಳಿದ ಚರ್ಮದಿಂದ ಈ ಚೆಂಡನ್ನು ಮುಚ್ಚುತ್ತಾರೆ. ಇದರ ಸುತ್ತಳತೆ ಒಂಭತ್ತು ಅಂಗುಲ, ತರಕು ½ ಔನ್ಸ್ ನಷ್ಟು.

ಕ್ರಿಕೆಟ್ ಬ್ಯಾಟನ್ನು ವಿಲೋ ಮರದಿಂದ ತಯಾರಿಸುತ್ತಾರೆ. ಇಡಿಯಾಗಿ ಸೇರಿ ಇದರ ಉದ್ದ 38 ಅಂಗುಲಕ್ಕಿಂತ ಹೆಚ್ಚಿರುವಂತಿಲ್ಲ. ಅಗಲ 4¼ ಅಂಗುಲ ಮೀರಿರಬಾರದು. ಬ್ಯಾಟಿನ ಹಿಡಿಯನ್ನು ಬೆತ್ತದಿಂದ ರಚಿಸಿ ಮೇಲ್ಭಾಗದಲ್ಲಿ ಸೇರಿಸಿರುತ್ತಾರೆ.

ಬ್ಯಾಟುಗಾರನ ಹಿಂದೆ ಮೂರು ಸ್ಟಂಪ್ ಇರುತ್ತದೆ. ಇದಕ್ಕೆ 'ವಿಕೆಟ್' ಎನ್ನುವರು. ಈ ಸ್ಟಂಪ್‌ಗಳ ಮೇಲೆ ಎರಡು ಮರದ ತುಂಡುಗಳನ್ನು ಅಡ್ಡವಾಗಿ ಇಟ್ಟಿರುತ್ತಾರೆ. ಇವುಗಳಿಗೆ 'ಬೇಲ್ಸ್' ಎಂದು ಹೆಸರು. ವಿಕೆಟ್‌ನ ಅಗಲ 9 ಅಂಗುಲ ಬೇಲ್ಸ್‌ನ ಅಗಲ ಅರ್ಧ ಅಂಗುಲ ದಪ್ಪವನ್ನು ಸೇರಿಸಿದರೆ ನೆಲದಿಂದ ಅದರ ಎತ್ತರ 28.5 ಅಂಗುಲ.

ಬೌಲ್ ಮಾಡಿದಾಗ ಚೆಂಡಿನಿಂದ ಏಟು ಬೀಳದಂತೆ ಬ್ಯಾಟುಗಾರರು ಕಾಲುಗಳಿಗೆ 'ಪ್ಯಾಡ್' ಧರಿಸುತ್ತಾರೆ ಮತ್ತು ಕೈಗವಸು ಹಾಕಿಕೊಂಡಿರುತ್ತಾರೆ. ವಿಕೆಟ್ ಕೀಪರ್ ವಿಶಿಷ್ಟ ರೀತಿಯಲ್ಲಿ ಸಿದ್ಧಪಡಿಸಿದ ಕೈಗವಸು ಹಾಕಿಕೊಳ್ಳುತ್ತಾರೆ. ಕ್ರಿಕೆಟ್ ಆಟಗಾರರು ಸಾಮಾನ್ಯವಾಗಿ ಬಿಳಿ ಬಟ್ಟೆ ಧರಿಸಿ ಬಿಳಿ ಬೂಟು ಹಾಕುತ್ತಾರೆ.

ಆಟದ ಮೈದಾನ: ಸುಮಾರು ಎಪ್ಪತ್ತೈದು ಗಜಗಳಿಗಿಂತಲೂ ಉದ್ದವಿರದ ವಿಶಾಲವಾದ ಮೈದಾನದಲ್ಲಿ ಕ್ರಿಕೆಟ್ ಆಡಲಾಗುತ್ತದೆ. ಮೈದಾನದ ಮಧ್ಯೆ ಇರುವ 'ಪಿಚ್'ನ ಮೇಲೆ ಕ್ರಿಕೆಟ್ ಆಟ ನಡೆಯುತ್ತದೆ. ಪಿಚ್‌ನ ಉದ್ದ 10 ಅಡಿ, ಅಗಲ 10 ಅಡಿ. ಪಿಚ್‌ನ ಎರಡು ತುದಿಗಳ ಕೊನೆಯಲ್ಲಿ ವಿಕೆಟ್ ನಿಲ್ಲಿಸಿರುತ್ತಾರೆ. ಒಂದು ತುದಿಯಿಂದ ಬೌಲರ್ ಚೆಂಡನ್ನು ಎಸೆಯುತ್ತಾನೆ. ಇನ್ನೊಂದು ತುದಿಯಲ್ಲಿ ವಿಕೆಟ್ ಮುಂದೆ ನಿಂತಿರುವ ಬ್ಯಾಟುಗಾರ ಚೆಂಡನ್ನು ಬ್ಯಾಟಿನಿಂದ ಜೋರಾಗಿ ಹೊಡೆಯುತ್ತಾನೆ.

ವಿಕೆಟ್‌ನ ಮುಂದೆ 4 ಅಡಿ ದೂರದಲ್ಲಿ ಒಂದು ಬಿಳಿ ಅಡ್ಡಗೆರೆ ಇರುತ್ತದೆ. ಇದನ್ನು 'ಪಾಪಿಂಗ್ ಕ್ರೀಸ್' ಎನ್ನುತ್ತಾರೆ. ಎರಡು ತಂಡಗಳ ನಡುವೆ ಕ್ರಿಕೆಟ್ ಆಟ ನಡೆಯುತ್ತದೆ. ಪ್ರತಿಯೊಂದು ತಂಡದಲ್ಲಿ ಹನ್ನೊಂದು ಮಂದಿ ಆಟಗಾರರು ಇರುತ್ತಾರೆ. ಆಟವನ್ನು ಅಚ್ಚುಕಟ್ಟಾಗಿ ನಡೆಸಲು ಇಬ್ಬರು ಅಂಪೈರುಗಳು ಇರುತ್ತಾರೆ. ಆಟ ಪ್ರಾರಂಭವಾಗುವ ಮೊದಲು ಎರಡೂ ತಂಡಗಳ ಕ್ಯಾಪ್ಟನ್ನರಲ್ಲಿ ಯಾರಾದರೊಬ್ಬರು ಟಾಸ್ ಹಾಕುತ್ತಾರೆ. ಟಾಸ್ ಗೆದ್ದ ಕ್ಯಾಪ್ಟನ್ ತಮ್ಮ ತಂಡದ ಆಟಗಾರರು ಮೊದಲು ಬ್ಯಾಟ್ ಮಾಡಬೇಕೋ ಅಥವಾ ಫೀಲ್ಡ್ ಮಾಡಬೇಕೋ ಎಂದು ನಿರ್ಧರಿಸುತ್ತಾನೆ.

ಫೀಲ್ಡ್ ಮಾಡುವ ತಂಡದ ಹನ್ನೊಂದು ಆಟಗಾರರು ಕ್ರಿಕೆಟ್ ಮೈದಾನದಲ್ಲಿರುತ್ತಾರೆ. ತಂಡದ ಕ್ಯಾಪ್ಟನ್ ಅಥವಾ ಬೌಲರ್ ಯಾವ ಆಟಗಾರ ಎಲ್ಲಿ ನಿಂತಿರಬೇಕು ಎಂದು ಸೂಚಿಸುತ್ತಾರೆ. ವಿಕೆಟ್‌ಗಳ

ಹಿಂದೆ ನಿಂತಿರುವವನು ವಿಕೆಟ್ ಕೀಪರ್. ಅವನು ಬ್ಯಾಟುಗಾರನ ಹಿಂದೆ ನಿಂತಿರುತ್ತಾನೆ. ಬೌಲರ್ ಇನ್ನೊಂದು ತುದಿಯಿಂದ ಚೆಂಡು ಎಸೆಯುತ್ತಾನೆ. ಉಳಿದ ಆಟಗಾರರು ಫೀಲ್ಡ್ ಮಾಡುತ್ತಾರೆ. ಬ್ಯಾಟುಗಾರ ಹೆಚ್ಚು ರನ್ನು ಮಾಡದಂತೆ ಈ ಫೀಲ್ಡರುಗಳು ಎಚ್ಚರವಹಿಸಿ ಕಾಯುತ್ತಾರೆ. ಬ್ಯಾಟು ಮಾಡುವ ತಂಡದ ಇಬ್ಬರು ಆಟಗಾರರು ಒಂದೊಂದು ಬದಿಯ ವಿಕೆಟ್‌ನ ಬಳಿ ನಿಲ್ಲುತ್ತಾರೆ.



ಬೌಲರ್‌ನ ಉದ್ದೇಶ ಬ್ಯಾಟುಗಾರನನ್ನು ಔಟ್ ಮಾಡುವುದು, ಬೌಲರ್ ಎಸೆದ ಚೆಂಡನ್ನು ಬ್ಯಾಟುಗಾರನಿಗೆ ತಡೆಯಲಾಗದಿದ್ದರೆ ಚೆಂಡು ವಿಕೆಟ್‌ಗೆ ತಗುಲಿ ಬೇಲ್ ಬಿದ್ದರೆ ಬ್ಯಾಟುಗಾರ ಔಟ್ ಆಗುತ್ತಾನೆ. ಬ್ಯಾಟುಗಾರ ಚೆಂಡನ್ನು ಹೊಡೆದಾಗ ಅದು ನೆಲವನ್ನು ತಾಗುವಷ್ಟರಲ್ಲಿ ಫೀಲ್ಡರ್ ಹಿಡಿದು ಬಿಟ್ಟರೆ ಆ ಬ್ಯಾಟುಗಾರ ಔಟ್ ಆದಂತೆ. ಬ್ಯಾಟುಗಾರನ ಉದ್ದೇಶ ಔಟ್ ಆಗದಂತೆ ಅಧಿಕ ರನ್ನು ಗಳಿಸುವುದು.

ಚೆಂಡು ಬೌಲರ್ ಅಥವಾ ವಿಕೆಟ್ ಕೀಪರ್ ಕೈ ಸೇರುವಷ್ಟರಲ್ಲಿ ಪಿಚ್‌ನ ಮತ್ತೊಂದು ಬದಿಯ ವಿಕೆಟ್ ಬಳಿಗೆ ಓಡಬೇಕು. ಆ ವಿಕೆಟ್ ಬಳಿಯಿರುವ ಬ್ಯಾಟುಗಾರ ಈ ಬದಿಗೆ ಓಡಿ ಬರುತ್ತಾನೆ. ಹೀಗೆ ಇಬ್ಬರೂ ಪರಸ್ಪರ ಅರಿತು ಓಡಿದಾಗ ಒಂದು ಓಟ ಅಥವಾ ರನ್ ಮಾಡಿದಂತಾಗುತ್ತದೆ. ಹೀಗೆ ಓಡುವ ಆಟಗಾರರು ವಿಕೆಟ್ ತಲುಪುವ ಮೊದಲೇ ಬೌಲರ್, ವಿಕೆಟ್ ಕೀಪರ್ ಅಥವಾ ಫೀಲ್ಡರ್ ಚೆಂಡನ್ನು ವಿಕೆಟ್‌ಗೆ ಹೊಡೆದು ಉರುಳಿಸಿದರೆ ಆ ಸಮಯದಲ್ಲಿ ಉರುಳಿದ ವಿಕೆಟ್ ಕಡೆ ಯಾವ ಬ್ಯಾಟುಗಾರ ಓಡುತ್ತಿರುತ್ತಾನೋ ಅವನು ಔಟ್ ಆದಂತೆ. ಇದಕ್ಕೆ 'ರನ್ ಔಟ್' ಎಂದು ಹೆಸರು.

ಬ್ಯಾಟುಗಾರ ಚೆಂಡು ಹೊಡೆಯಲು ಕ್ರೀಸ್ ಬಿಟ್ಟು ಮುಂದೆ ಬಂದಾಗ ಆ ಚೆಂಡು ತಪ್ಪಿ ವಿಕೆಟ್ ಕೀಪರ್‌ನ ಕೈ ಸೇರುತ್ತದೆ. ಚುರುಕಾದ ವಿಕೆಟ್ ಕೀಪರ್, ಬ್ಯಾಟುಗಾರ ಮತ್ತೆ ಕ್ರೀಸ್ ಒಳಗೆ ಬರುವಷ್ಟರಲ್ಲಿ ಚೆಂಡನ್ನು ವಿಕೆಟ್‌ಗೆ ಹೊಡೆದು ಅದನ್ನು ಉರುಳಿಸಿದರೆ ಬ್ಯಾಟುಗಾರ ಔಟ್, ಇದಕ್ಕೆ 'ಸ್ಟಂಪಿಂಗ್' ಎಂದು ಹೆಸರು. ಬೌಲರ್ ಎಸೆದ ಚೆಂಡು ವಿಕೆಟ್‌ಗೆ ಬೀಳುವಂತಿದ್ದಾಗ ಅದನ್ನು ಬ್ಯಾಟಿನಿಂದ ತಡೆಯದೆ ಕೈಯಲ್ಲದೆ ದೇಹದ ಯಾವುದೇ ಭಾಗದಿಂದ ತಡೆದರೂ ಅವನು ಔಟ್. ಇದನ್ನು 'ಎಲ್.ಬಿ.ಡಬ್ಲ್ಯು.' ಅಥವಾ 'ಲೆಗ್ ಬಿಫೋರ್ ವಿಕೆಟ್' ಎನ್ನುತ್ತಾರೆ. ಬ್ಯಾಟುಗಾರ ಆಡುವಾಗ ಎಚ್ಚರ ತಪ್ಪಿ ಬ್ಯಾಟನ್ನು ಅಥವಾ ದೇಹವನ್ನು ವಿಕೆಟ್‌ಗೆ ತಗುಲಿಸಿ ಬೇಲ್ಸ್ ಉರುಳಿಸಿದರೆ ಅವನು ಔಟಾಗುತ್ತಾನೆ. ಇದಕ್ಕೆ 'ಹಿಟ್ ವಿಕೆಟ್' ಎನ್ನುತ್ತಾರೆ.

ಕ್ರಿಕೆಟ್ ಮೈದಾನದ ಅಂಚಿನಲ್ಲಿ ಎಳೆದಿರುವ ಗೆರೆಗೆ 'ಬೌಂಡರಿ ಲೈನ್' ಎಂದು ಹೆಸರು. ಬ್ಯಾಟುಗಾರ ಹೊಡೆದ ಚೆಂಡು ಈ ಗೆರೆಯನ್ನು ದಾಟಿ ಹೋದರೆ ಅದನ್ನು 'ಬೌಂಡರಿ' ಎನ್ನುವರು. ಇದರಿಂದ ಬ್ಯಾಟುಗಾರನಿಗೆ ನಾಲ್ಕು ರನ್ನು ಸಿಕ್ಕುತ್ತದೆ. ಚೆಂಡು ಎಲ್ಲೂ ನೆಲಕ್ಕೆ ತಗುಲದೆ ಬೌಂಡರಿಯನ್ನು ದಾಟಿ ನೆಲಕ್ಕೆ ಬಿದ್ದರೆ ಅದಕ್ಕೆ 'ಸಿಕ್ಸರ್' ಎನ್ನುತ್ತಾರೆ. ಇದಕ್ಕೆ ಆರು ರನ್ನು ಸಿಗುತ್ತದೆ.

ಒಂದು ತಂಡದ ಹತ್ತು ಮಂದಿ ಆಟಗಾರರು ಔಟಾದಾಗ ಆ ತಂಡದ ಮೊದಲ ಇನ್ನಿಂಗ್ಸ್‌ನ ಆಟ ಮುಗಿದಂತೆ, ಅನಂತರ ಈ ತಂಡದವರು ಫೀಲ್ಡ್ ಮಾಡಬೇಕು. ಇನ್ನೊಂದು ತಂಡದವರು ಬ್ಯಾಟ್ ಮಾಡುತ್ತಾರೆ. ಇವರ ಬ್ಯಾಟಿಂಗ್ ಮುಗಿದ ಮೇಲೆ ಪಂದ್ಯದ ಒಂದು ಇನ್ನಿಂಗ್ಸ್ ಮುಗಿಯುತ್ತದೆ. ಹೀಗೆ ಎರಡು ತಂಡದವರೂ ಎರಡು ಇನ್ನಿಂಗ್ಸ್ ಆಡುತ್ತಾರೆ. ಅಧಿಕ ರನ್ನು ಗಳಿಸಿದ ತಂಡದವರು ಗೆದ್ದಂತೆ. ಒಂದು ದಿನದ ಪಂದ್ಯದಲ್ಲಿ ಎರಡು ತಂಡ ಆಡಿ ಎಲ್ಲರೂ ಔಟಾದರೆ ಅಧಿಕ ರನ್ನು ಗಳಿಸಿದವರು ಗೆದ್ದ ಹಾಗೆ. ಒಂದು ತಂಡದವರು ತಾವು ಗೆಲ್ಲಲು ಅಧಿಕ ಮೊತ್ತದ ರನ್ನು ಗಳಿಸಿದ್ದೇವೆ ಎನಿಸಿದಾಗ ಅವರು ತಮ್ಮ ಆಟವನ್ನು ಅಷ್ಟಕ್ಕೆ ನಿಲ್ಲಿಸಿ ಇನ್ನೊಂದು ತಂಡದವರಿಗೆ ಆಟವಾಡಲು ಅವಕಾಶ ಮಾಡಿಕೊಡಬಹುದು. ಇದಕ್ಕೆ 'ಡಿಕ್ಲೇರಿಂಗ್' ಎನ್ನುತ್ತಾರೆ.

ಆಟಗಾರರ ಒಂದು ತಂಡ ಮೊದಲು ಇನ್ನಿಂಗ್ಸ್‌ನಲ್ಲಿ ಮೂರು ಅಥವಾ ಅದಕ್ಕಿಂತ ಹೆಚ್ಚು ದಿನಗಳ ಪಂದ್ಯದಲ್ಲಿ ಎದುರಾಳಿ ತಂಡಕ್ಕಿಂತ 150 ರನ್ನುಗಳಷ್ಟು ಹಿಂದಿದ್ದಾಗ ತನ್ನ ಎರಡನೆಯ ಇನ್ನಿಂಗ್ಸ್‌ನ್ನು ಮುಂದುವರಿಸುವುದಕ್ಕೆ 'ಫಾಲೋ ಆನ್' ಎಂದು ಹೆಸರು.

ಈ ಎಲ್ಲ ನಿಯಮಗಳನ್ನು ಹೊಂದಿರುವ 'ಕ್ರಿಕೆಟ್' ಇಂದು ಬಹಳ ಜನಪ್ರಿಯ ಕ್ರೀಡೆಯಾಗಿದೆ. ಕ್ರಿಕೆಟ್ ಆಟದಿಂದ ದೇಹಕ್ಕೆ ಒಳ್ಳೆಯ ವ್ಯಾಯಾಮ ದೊರೆಯುತ್ತದೆ.

●

ಮಾಹಿತಿ ಹಕ್ಕು

✍ **ಕೆ. ಈ. ದಿಶಾ,** ತೃತೀಯ ಬಿ.ಕಾಂ.

ನಮಗೆಲ್ಲರಿಗೂ ಬೇರೆ ಬೇರೆ ರೀತಿಯ ಹಕ್ಕುಗಳ ಬಗ್ಗೆ ತಿಳಿದಿರಬಹುದು. ಆದರೆ ಈ ಮಾಹಿತಿ ಹಕ್ಕಿನ ಬಗ್ಗೆ ಎಷ್ಟೋ ಜನರಿಗೆ ತಿಳಿದಿರಲಿಕ್ಕಿಲ್ಲ . ಮುಖ್ಯವಾಗಿ ಈ ಮಾಹಿತಿ ಹಕ್ಕಿನ ಬಗ್ಗೆ ಪ್ರತಿಯೊಬ್ಬ ಜನಸಾಮಾನ್ಯನಿಗೂ ತಿಳಿದಿರಬೇಕು. ಹಾಗಾದರೆ ಈ ಮಾಹಿತಿ ಹಕ್ಕು ಎಂದರೇನು?

ಮಾಹಿತಿ ಹಕ್ಕು, ಮಾಹಿತಿ ನೀಡಿಕೆಯನ್ನು ಮೊದಲು ತನ್ನ ಮೇಲೆ ತಾನು ಅನ್ವಯಿಸಿಕೊಂಡು ನಂತರ ಇನ್ನೊಬ್ಬರಿಗೆ ತಿಳಿಸುವುದಾಗಿದೆ. ತಮಗೆ ಹಕ್ಕು ಇದೆ ಎಂದು ಹೇಳಿಕೊಳ್ಳುವವರು ಮೊದಲು ನಾವು ಹಕ್ಕನ್ನು ತಿಳಿದುಕೊಳ್ಳಬೇಕು. ಜವಾಬ್ದಾರಿಯನ್ನು ನಿಭಾಯಿಸಿದರೆ ಹಕ್ಕುಗಳು ಅದರಿಂದಲೇ ತಾವೇ ಹರಿದು ಬರುತ್ತದೆ. ಮಾಹಿತಿ ಹಕ್ಕು ಮಾನವನ ಸಾಮಾನ್ಯ ಕುತೂಹಲ ಮತ್ತು ನಾಗರಿಕ ಲೋಕದ ನಿಯಂತ್ರಣದಲ್ಲಿರುವ ವ್ಯವಸ್ಥೆಯನ್ನು ತಿಳಿದುಕೊಳ್ಳುವ ಹಂಬಲದೊಂದಿಗೆ ಇರಿಸಲಾಗಿದೆ.

ಪ್ರಜಾಪ್ರಭುತ್ವದ ಆಡಳಿತದಲ್ಲಿಯೇ ಪ್ರಜೆಯ ಪ್ರಭುವಾಗಿ ಇರುವಾಗ ಅರ್ಜಿ ಹಾಕಿ ಮಾಹಿತಿ ಪಡೆಯುವುದು ಪ್ರಜಾಪ್ರಭುತ್ವಕ್ಕೆ ಹಿನ್ನಡೆ ಎಂದರೆ ತಪ್ಪಾಗಲಾರದು. ಈ ಮಾಹಿತಿ ಹಕ್ಕು ಕಾಯ್ದೆ – 2005 ಮಾಹಿತಿ ಪಡೆಯುವುದನ್ನು ಪ್ರಜೆಗಳ ಮೂಲಭೂತ ಹಕ್ಕು ಎಂದು ಪರಿಗಣಿಸಲಾಗಿದೆ.

ಹಾಗಾದರೆ ಈ ಮಾಹಿತಿ ಪಡೆಯುವ ವಿಧಾನ ಹೇಗೆ?

1. ಯಾವುದೇ ವ್ಯಕ್ತಿ ಮಾಹಿತಿ ಅಗತ್ಯವಿದ್ದಲ್ಲಿ ಲಿಖಿತ ಅರ್ಜಿಯನ್ನು 'ಎ' ನಮೂನೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಕ್ಕೆ ತಲುಪಿಸಬೇಕು.
2. ಅರ್ಜಿಯ ಜೊತೆಗೆ ಅರ್ಜಿ ಶುಲ್ಕವನ್ನು ನೀಡಬೇಕು.
3. ಲಿಖಿತ ರೂಪದಲ್ಲಿ ಅರ್ಜಿ ಕೊಡಲು ಅಸಮರ್ಥನಾಗಿದ್ದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಯು ಅಂಥವರಿಂದ ಮೌಖಿಕವಾಗಿ ವಿವರ ಪಡೆದುಕೊಂಡು ಲಿಖಿತ ರೂಪದಲ್ಲಿ ನಿರೂಪಿಸಬೇಕು.
4. ಸಂಪರ್ಕ ವಿಳಾಸ, ನಿಗದಿತ ಶುಲ್ಕ ಮತ್ತು ಸಹಿ ಅರ್ಜಿಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.
5. ಬಡತನ ರೇಖೆಯ ಕೆಳಗಿನವರ ಪ್ರವರ್ಗಕ್ಕೆ ಸೇರಿದವರಾಗಿದ್ದರೆ ಬಿ.ಪಿ.ಎಲ್. ದೃಢೀಕರಣದ ಪ್ರತಿಯೊಂದನ್ನು ಲಗತ್ತಿಸಬೇಕು.
6. ಬಿ.ಪಿ.ಎಲ್. ಕಾರ್ಡ್ ಅರ್ಜಿದಾರರು ಶುಲ್ಕ ನೀಡದೆ ಮಾಹಿತಿ ಪಡೆಯಬಹುದು.

ಮಾಹಿತಿ ಹಕ್ಕು ವಿಳಂಬನೆಗೆ ದಂಡನೆ ಮತ್ತು ಪರಿಹಾರಗಳು;

1. ಕೇಂದ್ರ, ರಾಜ್ಯ, ಸಾರ್ವಜನಿಕ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯು ಮಾಹಿತಿ ಕೊಡಲು ನಿಗದಿಗೊಳಿಸಿದ 30 ದಿನದೊಳಗೆ ಮಾಹಿತಿ ನೀಡಬೇಕು, ಇಲ್ಲವಾದರೆ ಸರ್ಕಾರದ ಆದೇಶದಂತೆ ದಂಡ ಕಟ್ಟಬೇಕು.
2. ಕರ್ತವ್ಯ ನಿರ್ವಹಣೆಯಲ್ಲಿ ಲೋಪವಾದರೆ ಅಧಿಕಾರಿಗೆ ದಿನಕ್ಕೆ 250ರಂತೆ ಗರಿಷ್ಠ 25,000 ದಂಡ ವಿಧಿಸಬೇಕು.

ಮಾಹಿತಿ ಹಕ್ಕು ದಿನಾಚರಣೆ:

ನಾನಾ ಹಕ್ಕುಗಳ ದಿನಾಚರಣೆಯಂತೆ 2002 ಸೆಪ್ಟೆಂಬರ್ 25ರಂದು ಸೋಫಿಯಾ ಎಂಬ ನಗರಗಳಲ್ಲಿ ಸಮಾವೇಶ ಏರ್ಪಡಿಸಿ ಮಾಹಿತಿ ಹಕ್ಕು ಆಂದೋಲನವನ್ನು ಮತ್ತಷ್ಟು ತೀವ್ರಗೊಳಿಸಲು ವಿಶ್ವವ್ಯಾಪಿ ಹರಡುವಂತೆ ಮಾಡಲಾಗಿದೆ. ಈ ದಿನಾಚರಣೆಯ ಮುಖ್ಯ ಉದ್ದೇಶ ಏನೆಂದರೆ ಜನಜಾಗೃತಿ ಮೂಡಿಸಿ ಈ ಹಕ್ಕಿನ ಸಾರಾಂಶವನ್ನು ಎಲ್ಲೆಡೆ ಹರಡುವುದು.

ಮಾಹಿತಿ ಕೊಡಲು ಸಾಧ್ಯವಿಲ್ಲದ ಸಂದರ್ಭಗಳು:

1. ಭಾರತದ ಸಾರ್ವಭೌಮತ್ವ, ಸಮಗ್ರತೆ, ರಕ್ಷಣಾ ತಂತ್ರಜ್ಞಾನ, ವೈಜ್ಞಾನಿಕತೆ ಮತ್ತು ಆರ್ಥಿಕತೆಗೆ ಹಿನ್ನಡೆಯುಂಟು ಮಾಡುವ ಮಾಹಿತಿ.
2. ಪರಸ್ಪರ ನಂಬಿಕೆಯ ಆಧಾರದಿಂದಾಗಿ ವಿದೇಶಗಳಿಂದ ಪಡೆದುಕೊಂಡ ಮಾಹಿತಿ.
3. ಸಂಸತ್ತಿನ ಹಾಗೂ ರಾಜ್ಯ ಶಾಸಕಾಂಗಗಳ ಹಕ್ಕು ಬಾಧ್ಯತೆಗೆ ಅಡ್ಡಿಯನ್ನುಂಟು ಮಾಡುವ ಮಾಹಿತಿ.
4. ತನಿಖಾ ಪ್ರಕ್ರಿಯೆಗೆ ಅಡ್ಡಿಯನ್ನುಂಟು ಮಾಡುವ ಮಾಹಿತಿ ಅಥವಾ ಅಪರಾಧಿ ಬಂಧನಕ್ಕೆ ಅಡ್ಡಿಯನ್ನುಂಟು ಮಾಡುವ ಮಾಹಿತಿ.

ಮಾಹಿತಿ ಹಕ್ಕಿನ ವ್ಯಾಪ್ತಿ:

ಜಮ್ಮು ಮತ್ತು ಕಾಶ್ಮೀರ ರಾಜ್ಯ ಹೊರತುಪಡಿಸಿ ದೇಶದ

ಉಳಿದೆಲ್ಲಾ ರಾಜ್ಯಗಳಿಗೆ ಈ ಕಾಯ್ದೆ ಅನ್ವಯವಾಗುತ್ತದೆ. ಮಾಹಿತಿ ಹಕ್ಕು ಕಾಯ್ದೆ - 2005 ಪ್ರಕಾರ ಸಂವಿಧಾನದ ವಿಧಿ 226 ಹಾಗೂ 32ನೇ ರಾಜ್ಯ ಉಚ್ಚ ನ್ಯಾಯಾಲಯ ಮತ್ತು ದೇಶದ ಸರ್ವೋಚ್ಚ ನ್ಯಾಯಾಲಯಗಳ ಅಧಿಕಾರ ಹೊರತುಪಡಿಸಿ ಕೆಳಹಂತದ ನ್ಯಾಯಾಲಯಗಳಿಗೆ ಅಧಿಕಾರವಿಲ್ಲ .

'ಮಾಹಿತಿ ಹಕ್ಕು' ಪ್ರತಿ ನಾಗರಿಕ ಸಾರ್ವಜನಿಕ ಜೀವನದ ಒಳ-ಹೊರಗಿನ ಮಾಹಿತಿಗೆ ನಿಕಟಗೊಳಿಸುವ ಸದಾಶಯ ಹೊಂದಿದೆ. ಮಾಹಿತಿ ಪಡೆಯುವ ಶಾಸನಬದ್ಧ ಅಧಿಕಾರವು ಬಡವ-ಶ್ರೀಮಂತ, ಆ ಜಾತಿ-ಈ ಜಾತಿ, ಗಂಡು-ಹೆಣ್ಣು ಎಂಬ ಭೇದವಿಲ್ಲದೆ ಸಾರ್ವತ್ರಿಕವಾಗಿ ಸುಲಭ, ಸರಳ ಕಾಲೋಚಿತ ಮತ್ತು ಶೀಘ್ರ ಸಿಗುವಂತೆ ಮಾಹಿತಿ ಹಕ್ಕು ಸಾರ್ವಜನಿಕರಿಗೆ ದೊರೆತಿದೆ. ವಯೋಮಿತಿ 18 ಮತ್ತು ಮೇಲಿನ ಭಾರತೀಯ ಎಲ್ಲಾ ನಾಗರಿಕರಿಗೆ ಈ ಅಧಿಕಾರವಿದೆ. ಕ್ಯಾನ್ಸರ್ ವ್ಯಕ್ತಿಯನ್ನು ಸಾಯಿಸಬಹುದು, ಭ್ರಷ್ಟಾಚಾರ ಸಮಾಜವನ್ನೇ ಸಾಯಿಸಬಹುದು. ●

ಶಾಶ್ವತ

ಹಸಿರು ವರ್ಣದ ಲತೆಯನು
ಹಿಡಿದ ಮರದ ಪ್ರೀತಿ
ರವಿಯೆದುರು ಧುರದಲಿ ಮಣಿವ ತನಕ.
ಹುಟ್ಟು ಹಾಕಿ ಪ್ರಾಣ ಕಾಯ್ವ
ನಂಬಿಕಸ್ಥ ಅಂಬಿಗನೊಡಗಿನ ಸ್ನೇಹ
ದಡ ಸೇರುವ ತನಕ.

ಇಳೆ ಕಚ್ಚಿ ಮೈ ನಿಮಿರಿ ನಿಂತ
ಪೈರಿಗೆ ನೀರು
ತೆನೆ ತುಂಬುವ ತನಕ.
ಗುಡಿಯೊಳಗಿನ ದೇವರ ನೆನಪು
ಶಿಖರವೇರಿ
ನೆಲೆ ನಿಲ್ಲುವ ತನಕ.

ಕಲ್ಲಿರಲಿ, ಮರವಿರಲಿ
ಮನವಿರಲಿ, ಮನುವಿರಲಿ
ನೆನಪಿರುವರೆಲ್ಲ ಫಲಸ್ಫುರಿಸುವ ತನಕ.
ನಲಿವಿನಲಿ ನಿಲ್ಲುವರೆಲ್ಲ
ನರಳುವಲಿ ಮೆಲ್ಲನೆ ಜಾರುವರೆಲ್ಲ
ಇರಲಾರರೆಲ್ಲ ಜೀವನದ ಇರುಳ ತನಕ
ನಶ್ವರವೇ ಶಾಶ್ವತವಿಲ್ಲಿ .

✍ **ಧೀರಜ್,** ತೃತೀಯ ಬಿ.ಎಸ್ಸಿ.

ಅಪರಿಚಿತರು ಪರಿಚಿತರಾದಾಗ...

✍ **ರೇಖಾ ಭಟ್**, ದ್ವಿತೀಯ ಬಿ.ಕಾಂ.

ಈ ದೊಡ್ಡ ಪ್ರಪಂಚದಲ್ಲಿ ಪ್ರತಿದಿನ ಸುಮಾರು ನೂರು ಹೊಸ ಮುಖಗಳನ್ನು ನಾವು ನೋಡಿರಬಹುದು. ಅದರಲ್ಲಿ ಐದು ಜನರ ಪರಿಚಯವಾಗಿರಲು ಸಾಧ್ಯ. ಅದರಲ್ಲಿ ಒಬ್ಬರು ಮಾತನಾಡಿ, ಆ ಪುಟ್ಟ ಮಾತುಕತೆ ಸಂಬಂಧವಾದದ್ದು ಇದೆ. ಇನ್ನು ಕೆಲವು ಸಲ ಒಂದೇ ದಿನದ ಪರಿಚಯವಾಗಿ ಉಳಿದಿರಬಹುದು. ಸಾಮಾನ್ಯವಾಗಿ ಪ್ರಯಾಣದ ಸಂದರ್ಭದಲ್ಲಿ ಹುಟ್ಟಿದ ಮಾತುಕತೆ ನೆನಪಿನಲ್ಲಿರುವುದು ಸಹಜ. ಆ ಅಪರಿಚಿತ ವ್ಯಕ್ತಿಗಳು ತಮ್ಮ ಬಗ್ಗೆ ಹೇಳಲು ಪ್ರಾರಂಭಿಸಿದಾಗ ಕುತೂಹಲ, ಖುಷಿ ಎಲ್ಲವೂ ಜೊತೆಗೆ ಸೇರುತ್ತದೆ. ಮತ್ತೆ ಪುನಃ ಸಿಗುತ್ತಾರೋ, ಇಲ್ಲವೋ ತಿಳಿದಿಲ್ಲ . ಆದರೆ ಆ ಕೆಲವು ಗಂಟೆಗಳ ಮಾತು ವರ್ಷಗಳ ಕಾಲ ನೆನಪಿನಲ್ಲಿ ಹಾಗೆಯೇ ಉಳಿಯುತ್ತದೆ. ಪ್ರಯಾಣ ಮುಗಿಸಿ ಮನೆಗೆ ತೆರಳಿದರೂ ಆ ನೆನಪನ್ನು ಮೆಲುಕು ಹಾಕುತ್ತಾ ಕಾಲ ಕಳೆದದ್ದು ಇದೆ. ಅಷ್ಟು ಮಾತನಾಡಿ ಹೆಸರು ಕೇಳದೆ ಹೋದದ್ದಿದೆ. ಈ ಸಣ್ಣ ಅನುಭವ ಬಹುಶಃ ಎಲ್ಲರ ಜೀವನದಲ್ಲೂ ನಡೆದಿರಬಹುದು ಎನ್ನುವುದು ನನ್ನ ಅಭಿಪ್ರಾಯ.

ಪ್ರಯಾಣ ಎಷ್ಟೇ ದೂರದ್ದಾಗಿರಲಿ, ಒಳ್ಳೆಯ ಸಹ ಪ್ರಯಾಣಿಕರು ಸಿಕ್ಕಾಗ, ಆ ಪ್ರಯಾಣ ಚಿಕ್ಕದಾಗಿ ಕಾಣುತ್ತದೆ. ಕೆಲವು ಸಲ ಸಹ ಪ್ರಯಾಣಿಕರಿಂದ ತಲೆನೋವು ಬರುವ ಸಾಧ್ಯತೆಯೂ ಇರುತ್ತದೆ ! ಇರಲಿ ನಾನು ಒಳ್ಳೆಯ ಸಹ ಪ್ರಯಾಣಿಕರ ಬಗ್ಗೆ ಮಾತ್ರ ಹೇಳಲು ಇಚ್ಛಿಸುತ್ತೇನೆ. ಈಗ ಮೊಬೈಲ್ ಇರುವುದರಿಂದ ಯಾರು ಜಾಸ್ತಿ ಅಪರಿಚಿತರೊಂದಿಗೆ ಮಾತನಾಡಲು ಇಷ್ಟಪಡುವುದಿಲ್ಲ. ಆದರೂ ಅಪರಿಚಿತರು ಪರಿಚಿತರಾದಾಗ ಸಿಗುವ ಖುಷಿ, ಆಗುವ ಸಂತೋಷವೇ ಬೇರೆ. ನೀವು ನಿಮ್ಮ ಪ್ರಯಾಣವನ್ನು ಹೇಗೆ ಕಳೆಯಲು ಇಷ್ಟಪಡುತ್ತೀರಿ?!..

●

ಕರ್ನಾಟಕ

ಕರ್ನಾಟಕವೇ ನಮ್ಮ ತವರು
ಕನ್ನಡವೇ ನಮ್ಮ ಉಸಿರು
ಜಾತಿ-ಮತ-ಧರ್ಮ ಎಂಬ ತಡೆಗೋಡೆಯ ಒಡೆದುಬಿಡು
ಮೋಸ-ವಂಚನೆ-ದರೋಡೆಯ ಮರೆತುಬಿಡು
ಕನ್ನಡದ ಕಲೆ ನಾಡು-ನುಡಿ ಸಂಸ್ಕೃತಿಯ ಎಲ್ಲೆಡೆ ಹರಡು
ಕನ್ನಡ ಮಣ್ಣಲ್ಲಿ ಹುಟ್ಟಿರುವುದೇ ನಮ್ಮ ಅದೃಷ್ಟ
ಮುಂದಿನ ನನ್ನ ಜನ್ಮ ಇದೇ ಮಣ್ಣಲ್ಲಿ ಎನ್ನುವುದು ನೂರಕ್ಕೆ ನೂರು ಸ್ಪಷ್ಟ.

✍ **ಕೆ. ಈ. ದಿಶಾ**, ತೃತೀಯ ಬಿ.ಕಾಂ.

ಪುಟ್ಟ ಹಕ್ಕಿಯ ಮುಗ್ಧ ಮನಸ್ಸು

✍ ಕೆ. ಎಂ. ಪವಿತ್ರಾ, ಪ್ರಥಮ ಬಿ.ಎ.

ಅದೊಂದು ಭಾನುವಾರ. ಮುಸ್ಸಂಜೆಯ ಸಮಯ. ನಾನು ಮತ್ತು ನನ್ನ ಕುಟುಂಬದವರು ಸೂರ್ಯಾಸ್ತ ನೋಡಲೆಂದು ಮನೆಯ ಬಳಿ ಇರುವ ಗುಡ್ಡವನ್ನು ಏರಿ ಕುಳಿತೆವು. ಅಲ್ಲಿಗೆ ಮರಿ ಹಕ್ಕಿ ಮತ್ತು ಅದರ ಕುಟುಂಬವು ಸಹ ಬಂದಿತ್ತು. ಮರಿ ಹಕ್ಕಿಯು ಸೂರ್ಯಾಸ್ತವನ್ನು ನೋಡಿ ಬಲು ಸಂತೋಷದಿಂದ ತನ್ನ ತಾಯಿಯನ್ನು ನೋಡಮ್ಮ ಎಷ್ಟು ಸೊಗಸಾಗಿದೆ, ಮನಸ್ಸಿಗೆ ತುಂಬ ಖುಷಿಯನ್ನು ನೀಡುತ್ತದೆ. ಈ ಪರಿಸರ ಎಷ್ಟು ಚಂದ ಅಲ್ಲವಾ ಎಂದಿತು. ಆಗ ಅಜ್ಜಿ ಹಕ್ಕಿಯು ಹೇಳಿತು ನೀನು ನೋಡುತ್ತಲಿರುವುದು ಕೆಲವೇ ಕೆಲವು ಭಾಗ ಅಷ್ಟೇ. ಆಗಿನ ನಮ್ಮ ಪರಿಸರವು ತುಂಬ ಸ್ವಚ್ಛಂದವಾಗಿತ್ತು. ವಾಸಿಸಲು ಮರಗಳಿದ್ದವು, ದಟ್ಟವಾದ ಕಾಡುಗಳಿದ್ದವು, ಆಹಾರಕ್ಕಾಗಿ ಪರದಾಡುವ ಪರಿಸ್ಥಿತಿ ಇರಲಿಲ್ಲ. ಎಲ್ಲಾದರೂ ಹೇಗಾದರೂ ಸಂತೋಷವಾಗಿ ಬದುಕುವ ಸ್ವತಂತ್ರ ನಮಗಿತ್ತು. ಆದರೆ ಈಗ ಕೈಗಾರೀಕರಣದ ಅಭಿವೃದ್ಧಿಯ ಹೆಸರಿನಲ್ಲಿ ಮಣ್ಣಿನ ಫಲವತ್ತತೆಯನ್ನು ಹಾಳು ಮಾಡಿ, ಬೇಕಾಬಿಟ್ಟಿ ಅರಣ್ಯ ನಾಶ, ಗಣಿಗಾರಿಕೆ, ಹೆದ್ದಾರಿಯ ನಿರ್ಮಾಣ ಮತ್ತು ರೈಲ್ವೆ ನಿರ್ಮಾಣಕ್ಕಾಗಿ ಗುಡ್ಡವನ್ನು ಅಗೆಯುವುದು, ಅತಿಯಾದ ಪ್ರವಾಸೋದ್ಯಮ ಇಂತಹ ಹಲವಾರು ಕಾರಣಗಳಿಂದಾಗಿ ಪರಿಸರವನ್ನು ನಾಶ ಮಾಡಿ ನಮಗೆ ಒಂದು ಹೊತ್ತಿನ ಊಟಕ್ಕೂ ಗತಿ ಇಲ್ಲದ ಹಾಗೆ ಮಾಡಿದ್ದಾರೆ. ನಿಮ್ಮ ನಂತರದ ಪೀಳಿಗೆಗೆ ಈಗಿರುವಷ್ಟು ಪರಿಸರ ಇರುತ್ತದೆಯೋ ಇಲ್ಲವೋ ಎಂದು ತನ್ನ ಬೇಸರವನ್ನು ವ್ಯಕ್ತಪಡಿಸುತ್ತದೆ. ಮರಿ ಹಕ್ಕಿ ಇದಕ್ಕೆಲ್ಲಾ ಕಾರಣವೇನು ಹಾಗಿದ್ದರೆ ಎಂದಿತು. ಅಮ್ಮ ಹಕ್ಕಿಯು ಹೇಳಿತು ಇದಕ್ಕೆಲ್ಲಾ ಕಾರಣ ಮನುಷ್ಯನ ಸ್ವಾರ್ಥ ಕಂದಾ... ನಂತರ ಮರಿ ಹಕ್ಕಿಯು ನಾವು ಕೂಡ ದೇವರ ಸೃಷ್ಟಿ ತಾನೇ...? ನಮಗೆ ಬದುಕಲು ಈ ಮನುಷ್ಯರು ಯಾಕೆ ಬಿಡುತ್ತಿಲ್ಲ ಎಂದು ನೊಂದುಕೊಂಡಿತು..??

ನೋಡಿ (ಮೇಲಿನ ಸನ್ನಿವೇಶ) ಮಾನವ ತನ್ನ ಸ್ವಾರ್ಥಕ್ಕಾಗಿ ಪರಿಸರದ ಮೇಲೆ ಹಾನಿ ಮಾಡುತ್ತಾ ಬಂದಿದ್ದಾನೆ. ಪರಿಸರವು ಎಲ್ಲವನ್ನೂ ಸಹಿಸಿಕೊಂಡು ತನ್ನ ಕೆಲಸವನ್ನು ಎಡೆಬಿಡದೆ ಮಾಡುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಪರಿಸರವೂ ಕೂಡ ಮಾನವನಿಗೆ ತಿರುಗೇಟು ನೀಡುತ್ತಿದೆ ಎಂದರೂ ತಪ್ಪಾಗಲಾರದು. ಪರಿಸರ ತನ್ನ ತಾಳ್ಮೆ ಕಳೆದುಕೊಳ್ಳಲು ಮಾನವನೇ ಕಾರಣ. 'ಅತಿಯಾದರೆ ಅಮೃತವೂ ವಿಷವೇ' ಅನ್ನುವ ಮಾತಿದೆ. ಹಾಗೇ ಮನುಷ್ಯನ ಸ್ವಾರ್ಥವನ್ನು ಪರಿಸರವಾದರೂ ಎಷ್ಟು ಸಹಿಸಿಕೊಳ್ಳಬಹುದು ಅಲ್ವಾ...?

ಎಲ್ಲರಿಗೂ ಜೀವಿಸಲೂ ಈ ಪರಿಸರ ಬೇಕು. ಆದರೆ ಪರಿಸರವನ್ನು ರಕ್ಷಿಸಲು ಯಾರೂ ಮುಂದೆ ಬರಲ್ಲ. ನಾವೆಲ್ಲಾ ಯುವಕರು "ಯುವ ಅಭ್ಯುದಯ ಉದ್ಧಾರದ ಅರುಣೋದಯ" ಎಂಬ ಮಾತನ್ನು ಉಳಿಸಿಕೊಳ್ಳೋಣ. ಪರಿಸರ ಸಂರಕ್ಷಣೆಯು ಪರಿಸರ ದಿನಾಚರಣೆಯ ದಿನಕ್ಕೆ ಮಾತ್ರ ಸೀಮಿತವಾಗಿರದೆ ದಿನನಿತ್ಯದ ಹವ್ಯಾಸವಾಗಿ ಬೆಳೆಸಿಕೊಂಡರೆ ಉತ್ತಮವಾಗಿರುತ್ತದೆ. ಇನ್ನೂ ಕಾಲ ಮಿಂಚಿಲ್ಲ. ಒಂದು ದಿನಕ್ಕೆ ಒಂದು ಗಿಡ ನೆಡೋಣ. ದಿನಕ್ಕೊಂದು ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗೋಣ.. ಇಲ್ಲಿ ಗಿಡ ನೆಡುವುದು ಮುಖ್ಯವಲ್ಲ. ನೆಟ್ಟ ಗಿಡಗಳನ್ನು ಬೆಳೆಸಿ ಉಳಿಸಿಕೊಂಡು ಹೋಗುವುದು ತುಂಬಾ ಮುಖ್ಯವಾಗಿದೆ. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಲಿ.

●

ಮೊದಲ ಬಾರಿ ಟಿವಿ ನೋಡಿದಾಗ...

✍ **ಇಶಾನಿ ಶೆಟ್ಟಿ**, ತೃತೀಯ ಬಿ.ಎ.

ಟಿವಿಯನ್ನು ಯಾವಾಗ ಮೊದಲ ಬಾರಿ ನೋಡಿದೆ ಎಂಬ ಸರಿಯಾದ ನೆನಪು ಇಲ್ಲವಾದರೂ ಟಿವಿ ಇದ್ದ ಕಾರಣ ದಿನವಿಡೀ ಟಿವಿಯ ಎದುರಲ್ಲೇ ಇರುತ್ತಿದ್ದೆ ಎಂದು ಸರಿಯಾಗಿ ನೆನಪಿದೆ. ಅಮ್ಮ ಬಂದು ಟಿವಿ ಹಾಕುವುದನ್ನೇ ಕಾಯುತ್ತಿದ್ದೆ, ಏಕೆಂದರೆ ನನಗೆ ಟಿವಿ ಹಾಕಲು ಬರುತ್ತಿರಲಿಲ್ಲ, ಆದರೆ ಬಹಳ ಬೇಗನೇ ಎಲ್ಲವನ್ನೂ ಕಲಿತುಬಿಟ್ಟೆ.

ಮೊದಲ ಬಾರಿಗೆ ನಾನು ಟಿವಿಯಲ್ಲಿ ಕಾರ್ಟೂನ್ ನೋಡಿದ ನೆನಪು ಅದರಲ್ಲೂ ಟಾಮ್ ಅಂಡ್ ಜೆರ‍್ರಿ ನನಗೆ ತುಂಬಾ ಇಷ್ಟವಾದದ್ದು, ನನ್ನ ಅಕ್ಕ ಕೂಡ ನನಗೆ ಅದನ್ನೇ ಟಿವಿಯಲ್ಲಿ ಹಾಕಿ ಕೊಡುತ್ತಿದ್ದಳು. ಟಿವಿಯನ್ನು ಮೊದಲು ನೋಡಿದಾಗದಿಂದ ನನಗೆ ಇದ್ದದ್ದು ಒಂದೇ ಅನುಮಾನ ಟಿವಿಯ ಒಳಗೆ ಜನರಿದ್ದಾರೆ, ಕಾರ್ಟೂನ್‌ನಲ್ಲಿ ಬರುವುದೆಲ್ಲ ಟಿವಿಯ ಒಳಗೆಯೇ ಇದೆ, ಮತ್ತು ಕುತೂಹಲ ಏನೆಂದರೆ ಟಿವಿಯನ್ನು ಒಡೆದರೆ ಎಲ್ಲರೂ ಹೊರಬರುತ್ತಾರೆಂದು, ಆದರೆ ಯೋಚನೆ ಏನೆಂದರೆ ಅದರಲ್ಲಿರುವ ಜನರು ಅಷ್ಟು ಪುಟ್ಟದಾಗಿ ಹೇಗೆ ಇದ್ದಾರೆ ಎಂದು, ಇಂತಹ ಹಲವು ಪ್ರಶ್ನೆಗಳಿಗೆ ಉತ್ತರ ತಿಳಿದುಕೊಂಡೇ ಬೆಳೆದೆ.

ನಮ್ಮ ಊರಿನಲ್ಲಿ ಎಲ್ಲರ ಮನೆಯಲ್ಲೂ ಟಿವಿ ಇರಲಿಲ್ಲ, ಹಾಗಾಗಿ ಕೆಲವರು ಟಿವಿ ನೋಡಲು ನಮ್ಮ ಮನೆಗೆ ಬರುತ್ತಿದ್ದರು, ಹೊಸ ಚಿತ್ರಗಳು ಬಂದರೆ ನಮ್ಮ ಮನೆಗೆ ಬರುತ್ತಿದ್ದರು, ದೊಡ್ಡವರಿಗೆ ಚಿತ್ರ ನೋಡುವ ಸಂತೋಷವಾದರೆ, ನನಗೆ ಅವರೊಂದಿಗೆ ಬರುವ ಮಕ್ಕಳೊಂದಿಗೆ ಆಡುವ ಸಡಗರ.

ಮೂರು ಹೊತ್ತು ಟಿವಿಯ ಎದುರಲ್ಲೇ ಇದ್ದರಂತೂ ನಿಜ, ತಿಂಡಿ, ಊಟ ಕೂಡ ಟಿವಿಯ ಎದುರಲ್ಲೇ... ಆದರೂ ಆ ದಿನಗಳು ಬಹಳ ಸ್ಮರಣೀಯವಾದದ್ದು. ●

ಆಯುಷ್ಯದ ಒಂದು ಭಾಗ ಸಮಯ

✍ **ಇಶಾನಿ ಶೆಟ್ಟಿ**, ತೃತೀಯ ಬಿ.ಎ.

ಸಮಯ ಎಂಬುದು ಎಲ್ಲರ ಜೀವನದಲ್ಲೂ ಅತೀ ಮುಖ್ಯವಾದ ಭಾಗವಾಗಿರುತ್ತದೆ. ಅದನ್ನು ಹೇಗೆ ಯಾವಾಗ ಬಳಸಬೇಕು ಅದು ನಮ್ಮ ಕೈಯಲ್ಲಿ ಇರುತ್ತದೆ. ಸಮಯ ಕಳೆದುಹೋದ ಮೇಲೆ ಮತ್ತೆ ಮತ್ತೆ ವಾಪಾಸು ಬರುವುದಿಲ್ಲ. ಕಳೆದ ಕ್ಷಣವನ್ನು ಪುನಃ ನೆನಪಾಗಿ ನೆನಪಿಸಿಕೊಳ್ಳಬಹುದು. ಆದರೆ ಅದೇ ಕ್ಷಣ ಮತ್ತೆ ಬರುವುದಿಲ್ಲ. ಯುವಕರ ಸಮಯದ ಮಹತ್ವ ನಮಗೆ ಈಗ ತಿಳಿಯುವುದಿಲ್ಲ. ನಾಳೆ ಎಂಬ ಪದಕ್ಕೆ ನಾವು ಹೊಂದಿಕೊಂಡಿದ್ದೇವೆ. ನಾಳೆ ಎಂಬುದು ಹಾಳು ಎಂಬುದು ಗೋಚರವಾಗುವಷ್ಟರಲ್ಲಿ ತಮ್ಮ ಅತ್ಯುತ್ತಮ ಕ್ಷಣವನ್ನು ಕಳೆದುಕೊಂಡಿರುತ್ತಾರೆ. ಹೀಗೆ ಮಾಡಿದರೆ ನಮ್ಮ ಕಥೆ ಏನು? ಭವಿಷ್ಯವೇನು? ಇದನ್ನು ನಮಗೆ ಅರ್ಥ ಮಾಡಿಸಲು ಯಾವ ಮಹಾಪುರುಷನ ಜನನ ಆಗಬೇಕಿಲ್ಲ, ನಮಗೆ ಅದನ್ನು ಅರ್ಥ ಮಾಡಿಕೊಳ್ಳುವ ಶಕ್ತಿ ಇದೆ, ಬುದ್ಧಿ ಕೂಡ ಇದೆ. ಸಮಯವನ್ನು ಉಪಯೋಗ ಮಾಡಿಕೊಂಡು, ಯಾವಾಗ ಬೇಕು ಆಗ ಸರಿಯಾಗಿ ಬಳಸಿ ಸಮಯ ವ್ಯರ್ಥವಾಗದಂತೆ ನೋಡಿಕೊಂಡರೆ ನಮ್ಮ ಭವಿಷ್ಯ ಉಜ್ವಲವಾಗುತ್ತದೆ.

ಹಿಂದಿನ ದಿನವೇ ಮರುದಿನದ ದಿನಚರಿಯನ್ನು ಮಾಡಿ ಅದು ಪೂರ್ಣವಾಗದೆ ಮಲಗದಂತೆ, ಮಲಗಿದರೂ ನಿದ್ದೆ ಬರದಂತ ಛಲ ಬೆಳೆಸಿಕೊಳ್ಳಬೇಕು. ನಮ್ಮ ಜೀವನ ರೂಪಿಸಲು ಯಾರು ಬರುವುದಿಲ್ಲ ಎಂಬ ಸತ್ಯ ಒಪ್ಪಿಕೊಂಡು ಜೀವನ ನಡೆಸಬೇಕು. ಯಾರಿಗಾದರೂ ಬೇಕು ಅಂದ ತಕ್ಷಣ ಬಿಟ್ಟಿಯಾಗಿ ಸಿಗುವ ಸಮಯ ನಮ್ಮದಾಗದೆ ಅತೀ ಬೆಲೆಬಾಳುವ ವಜ್ರದಂತಾಗಬೇಕು... ನಮ್ಮ ಸಮಯ ನಮ್ಮ ಆಸ್ತಿಯಾಗಬೇಕೇ ಹೊರತು ಬೇರೆಯವರ ಉಪಯೋಗಕ್ಕಾಗಿ ಇರುವ ಆಟದ ವಸ್ತುವಾಗಲ್ಲ... ಬುದ್ಧ ಹೇಳುತ್ತಾರೆ – ಸಮಯ ಆಯುಷ್ಯದ ಒಂದು ಭಾಗ ಎಂದು... ಇಂತಹ ಸಮಯದ ಸದುಪಯೋಗಪಡಿಸಿಕೊಳ್ಳುವುದು ನಮ್ಮ ಅಧಿಕಾರ ಹಾಗೂ ಕರ್ತವ್ಯ.

ಒಮ್ಮೆ ಕಳೆದು ಹೋದರೆ ಮತ್ತೆ ಬಾರದು

✍ **ಲತಾ,** ತೃತೀಯ ಬಿ.ಎ.

ಸಮಯ ಎಂಬುದು ನಮ್ಮ ಜೀವನದಲ್ಲಿ ಬಹಳ ಮುಖ್ಯ. ಅದನ್ನು ಸರಿಯಾಗಿ ಅಳವಡಿಸಿಕೊಂಡರೆ ನಮ್ಮ ಜೀವನವು ಎಂದಿಗೂ ಹಾಳಾಗುವುದಿಲ್ಲ. ಸಮಯದ ಬಗ್ಗೆ ಗೌತಮ ಬುದ್ಧ ಸಹಿತ ಒಳ್ಳೆಯ ಮಾತನ್ನು ಹೇಳಿದ್ದಾರೆ. ಸಮಯ ಎಂಬುದು ತುಂಬಾ ಅಮೂಲ್ಯವಾದುದು. ಒಮ್ಮೆ ಕಳೆದು ಹೋದ ಸಮಯ ಮತ್ತೆ ಹುಡುಕಿದರೂ ಸಿಗದು. ಗಡಿಯಾರದ ಸಮಯ ಸಿಗಬಹುದಷ್ಟೇ ಹೊರತು ನಾವು ಕಳೆದುಕೊಂಡ ಸಮಯ ಸಿಗಲಾರದು. ಸಮಯವನ್ನು ಎಲ್ಲರೂ ಒಂದೇ ಕೆಲಸಕ್ಕೆ ಉಪಯೋಗಿಸುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಒಬ್ಬೊಬ್ಬರು ಒಂದೊಂದು ಕೆಲಸದಲ್ಲಿ ತೊಡಗಿರುತ್ತಾರೆ. ಆದರೆ ಸಮಯವನ್ನು ಒಳ್ಳೆಯ ಕಾರಣಕ್ಕಾಗಿ ಉಪಯೋಗಿಸುವವರು ಅತೀ ಕಡಿಮೆ.

ಸಮಯ ಎಂಬುದು ಯಾರ ಕೈಗೊಂಬೆಯೂ ಅಲ್ಲ. ನಾವು ಅಂದುಕೊಂಡಂತೆ ಸಮಯವನ್ನು ಬದಲಿಸಲು ಅಥವಾ ಕೊಂಡುಕೊಳ್ಳಲು ಸಾಧ್ಯವಿಲ್ಲ. ಈ ಸಮಯ ಬಡವರಿಗೂ, ಶ್ರೀಮಂತರಿಗೂ ಎಲ್ಲಾ ಜಾತಿಗೂ, ಧರ್ಮಕ್ಕೂ ಸಮನಾಗಿರುತ್ತದೆ. ಸಮಾಜದಲ್ಲಿ ಅತೀ ಹೆಚ್ಚು ಸ್ಥಾನ ಪಡೆದವರಿಗೆ ಹೆಚ್ಚು ಸಮಯ ಇರುವುದಿಲ್ಲ. ಸಮಯವನ್ನು ಒಬ್ಬೊಬ್ಬರು ಒಂದೊಂದು ರೀತಿಯಾಗಿ ಉಪಯೋಗಿಸುತ್ತಾರೆ. ಜ್ಞಾನಿಗಳು ಜ್ಞಾನಕ್ಕೋಸ್ಕರ, ಶ್ರೀಮಂತರು ಇನ್ನೂ ಸಂಪಾದನೆ ಮಾಡುವುದಕ್ಕಾಗಿ, ಬಡವರು ದಿನದ ಹೊಟ್ಟೆಪಾಡಿಗಾಗಿ ಉಪಯೋಗಿಸಿ ಸಮಯವನ್ನು ಉತ್ತಮ ರೀತಿಯಲ್ಲಿ ಬಳಸುತ್ತಾರೆ. ಆದರೆ ಯಾವುದಕ್ಕೂ ಪ್ರಯೋಜನವಿಲ್ಲದ ಜನರು ಇನ್ನೊಬ್ಬರ ಬಗ್ಗೆ ಮಾತಾಡಿಯೋ ಅಥವಾ ನಿದ್ದೆ ಮಾಡಿಯೋ ಸಮಯ ಕಳೆಯುತ್ತಾರೆ. ಇವರು ಈ ರೀತಿ ಸಮಯ ಕಳೆಯುವುದರಿಂದ ಸಮಯ ವ್ಯರ್ಥವೇ ಹೊರತು ದೇಶಕ್ಕೆ ಇವರ ಸಾಧನೆಗಳೇನೂ ಇಲ್ಲ. ಇವರಲ್ಲಿ ಯಾರು ಸಮಯವನ್ನು ಸರಿಯಾಗಿ ಉಪಯೋಗಿಸಿದ್ದಾರೆ ಎಂದು ನಾವು ಸುಲಭವಾಗಿ ಹೇಳಬಹುದು.

ಕಳೆದು ಹೋದ ಸಮಯಕ್ಕೆ ಚಿಂತಿಸಿ ಫಲವಿಲ್ಲ ಎಂಬ ಮಾತು ಎಷ್ಟು ಸತ್ಯವೋ ಅದೇ ರೀತಿ ನಮ್ಮಲ್ಲಿರುವ ಸಮಯವನ್ನು ಸರಿಯಾಗಿ ಬಳಸಬೇಕು, ಕಳೆದು ಹೋದ ಸಮಯ ಮತ್ತೆ ಬಾರದು ಎಂಬುದು ಅಷ್ಟೇ ಸತ್ಯ.

●



ಮಲೆನಾಡಿನಲ್ಲಿ ಮಳೆರಾಯ ಮೆರುಗು

✍ **ಸ್ನೇಹಾ ವರ್ಗೀಸ್**, ತೃತೀಯ ಬಿ.ಎ.

ಮಳೆ ಎಂದರೆ ಕೆಲವರಿಗೆ ಸಂಭ್ರಮ, ಕೆಲವರಿಗೆ ಬೇಸರ, ಅದರಲ್ಲೂ ಮಲೆನಾಡಿನಲ್ಲಿ ಮಳೆರಾಯ ಎಂದರೆ ಹೆಚ್ಚಿನವರಿಗೆ ಬಲು ಪ್ರೀತಿ. ಮಳೆಯನ್ನು ಸರಿಯಾಗಿ ಸವಿದರೆ ಅದೊಂದು ಸಂಗೀತ ಇದ್ದಂತೆ. ಇಡೀ ಭೂಮಿಯನ್ನೇ ಒದ್ದೆ ಮಾಡಿ ಪ್ರಕೃತಿಯನ್ನು ಹಚ್ಚಹಸರಿನಿಂದ ಹೊದಿಸುತ್ತದೆ. ಆ ಎಲೆಗಳಿಂದ ಮೆಲ್ಲಮೆಲ್ಲನೆ ಭೂಮಿಗೆ ಬೀಳುವ ಹನಿಗಳು, ಆಕಾಶದಿಂದ ಏನೋ ಬೀಳುವ ಹಾಗೆ ತೋರುವ ದೊಡ್ಡ ದೊಡ್ಡ ಹನಿಗಳು, ಅದರಲ್ಲೂ ಸ್ವಲ್ಪ ಮಳೆ ಬಂದು ಹೋದಾಗ ಆ ಮಣ್ಣಿನ ಸುವಾಸನೆ ವಾ... ಜೋರಾಗಿ ನೆರೆ ಬಂದಿದೆಯೇ ಎಂದು ಹಳ್ಳ ನೋಡಲು ಹೋಗುವಾಗ ಹೆಂಗಳೆಯರು ವೀಳ್ಯದೆಲೆಯ ಮೇಲೆ ಅಡಿಕೆ ಇಟ್ಟು ಅರಿಶಿಣ, ಕುಂಕುಮ, ಹೂವನ್ನು ನೀರಿಗೆ ಬಿಡುವಂತಹ ಸಂಪ್ರದಾಯ ಈಗಲೂ ಮಲೆನಾಡಿನಲ್ಲಿದೆ.

ಇನ್ನು ಮಲೆನಾಡಿನಲ್ಲಿ ಮಳೆಗಾಲ ಶುರುವಾಗುವ ಮುನ್ನವೇ ಅನೇಕ ಕ್ರಿಯೆಗಳು ಆರಂಭವಾಗುತ್ತದೆ. ಮನೆಯ ದಿನ ಬಳಕೆಗೆ ಬೇಕಾದಂತಹ ಕಟ್ಟಿಗೆ, ಹಸುಗಳಿಗೆ ಬೆಚ್ಚಗೆ ಮಲಗಲು ಬೇಕಾದ ಒಣ ಎಲೆಯ ರಾಶಿ, ಹಸುಗಳಿಗೆ ತಿನ್ನಲು ಒಣ ಹುಲ್ಲು, ಇನ್ನು ಅಡಿಕೆ ತೋಟ ಇರುವವರು ಅಡಿಕೆ ಮರದ ಒಣಗಿದ ಹಾಳೆಯನ್ನು ಬೆಂಕಿ ಉರಿಸಲು ಸಂಗ್ರಹಿಸುತ್ತಾರೆ. ಜೋರಾಗಿ ಮಳೆ ಬಂದರೆ ಅಡಿಕೆಗೆ ಔಷಧವನ್ನು ಸಿಂಪಡಿಸುತ್ತಾರೆ. ಹತ್ತು ಹಲವು ಮನೆಗಳು ಮಳೆಗಾಲದಲ್ಲಿ ಸೋರುತ್ತಿರುತ್ತದೆ. ಮಳೆಗಾಲದಲ್ಲಿ ಬಟ್ಟೆ ಒಣಗಿಸುವುದು ಒಂದು ದೊಡ್ಡ ತಲೆಬಿಸಿ. ಶಾಲಾ ದಿನಗಳಲ್ಲಿ ಬಟ್ಟೆ ಒಣಗಿಸಲು ಒಲೆ ದಂಡೆಯ ಮೇಲೆ ಬಟ್ಟೆ ಹಾಕುವುದು, ನಾನಂತೂ ಮನೆಯಂಗಳ, ಶಾಲೆಯಲ್ಲಿ ಜಾರಿ ಬಿದ್ದದ್ದು ಲೆಕ್ಕವೇ ಇಲ್ಲ. ಈ ಛತ್ರಿ ಎಲ್ಲಾ ಗಾಳಿಯ ರಭಸಕ್ಕೆ ಮಡಚಿ ಹೋಗುವುದು, ಗಾಳಿಯ ವೇಗಕ್ಕೆ ನಾವು ಎಲ್ಲಿ ಹಾರಿ ಹೋಗುತ್ತೇವೋ ಎಂದೆನಿಸುತ್ತಿತ್ತು. ಸೂರ್ಯನನ್ನು ನೋಡಿ ಎಷ್ಟೋ ಕಾಲ ಆದ ಹಾಗೆ ಇರುತ್ತದೆ. ಇನ್ನು ಮಲೆನಾಡಿನಲ್ಲಿ ಮಳೆಗಾಲದಲ್ಲಿ ವಿದ್ಯುತ್ ಇಲ್ಲದೆ ಅದೆಷ್ಟೋ ದಿನಗಳನ್ನು ಕಳೆಯುತ್ತಾರೆ. ಒಂದು ಸಿಡಿಲು ಗುಡುಗು ಬಂದರೆ ಸಾಕು ಒಂದು ವಾರ ವಿದ್ಯುತ್ ಸ್ಥಗಿತ.

ಮಳೆಗಾಲದಲ್ಲಿ ಮಲೆನಾಡ ಗದ್ದೆಗೆ ನಟ್ಟಿಯ ಸಂಭ್ರಮ. ಈಗಿನ ಕಾಲದಲ್ಲಿ ಗದ್ದೆ ಕೆಲಸ ಮಾಡುವವರಾಗಲಿ ಅಥವಾ ತೋಟಕ್ಕೆ ಹೋಗುವವರಾಗಲಿ ಬಣ್ಣ ಬಣ್ಣದ ಪ್ಲಾಸ್ಟಿಕ್ ಕೊಪ್ಪೆಯನ್ನು ಹಾಕುತ್ತಾರೆ. ಆದರೆ ಅದೊಂದು ಹಿಂದಿನ ಕಾಲದಲ್ಲಿ ಕಂಬಳಿಯನ್ನು ಹಾಕಿ ಅದರ ಗುರುತಿಗೆಂದು ಒಂದು ಕಡ್ಡಿಯನ್ನು ಸಿಕ್ಕಿಸಿ ಇಡುತ್ತಿದ್ದರು. ಕೆಲಸವನ್ನೆಲ್ಲ ಮುಗಿಸಿ ಸ್ನಾನ ಮಾಡಿ ಒಲೆ ದಂಡೆಯ ಮೇಲೆ ಕುಳಿತು ಚಳಿ ಕಾಯಿಸುವ ಮಜವೇ ಬೇರೆ. ಅನೇಕ ದಾರಿಹೋಕರು "ಥೋ ಭಾರಿ ಮಳೆ ಕಂಡ್ರಿ," ಎಂದು ಮನೆಗೆ ಬಂದು ಪುರಾಣ ಹೊಡೆದು ಕಾಫಿ ಕುಡಿದು ಹೋದದ್ದುಂಟು. ಇನ್ನು ಕೆಲವರಿಗೆ ಎಲ್ಲೆಲ್ಲಿ ಎಷ್ಟು ನೀರು ಬಂದಿದೆ ಅಂತ ನೋಡಲು ಹೋಗುವುದೇ ಕೆಲಸ ಆಗಿರುತ್ತದೆ.

ಇನ್ನು ಮಲೆನಾಡಿಗರಿಗೆ ಒಂದಷ್ಟು ಆಹಾರ ಪದಾರ್ಥವು ಮಳೆಗಾಲಕ್ಕೆ ಸೀಮಿತವಾಗಿರುತ್ತದೆ. ನಾಲ್ಕೈದು ಮಳೆಗಳ ನಂತರ ಊರು ತುಂಬಾ ಅಣಬೆ ಎದ್ದಿದೆಯೇ? ಎಂದು ನೋಡುವುದೇ ಕೆಲಸವಾಗಿರುತ್ತದೆ. ಬೇರು ಅಣಬೆ, ಹುಲ್ಲು ಅಣಬೆ, ಅಕ್ಕಿ ಅಣಬೆ ಹೀಗೆ ಹಲವಾರು ವಿಧಗಳಿವೆ. ವಿಷದ ಅಣಬೆಯು ಇದೆ ಎಂದು ಕೇಳಿದ್ದೇನೆ. ಆಯಾ ತಿಂಗಳಿಗೆ ಸಿಗುವ ಕಳಲೆ, ಕೆಸು, ಏಡಿ, ಮೀನು ಹಿಡಿಯುವುದು, ಕಾಡು ಹಣ್ಣು ಹಾಗೆಯೇ ಒಂದಿಷ್ಟು ಜಿಗಣೆಯ ಕಾಟ, ಬಸವನ ಹುಳುವನ್ನು ಕಾಣಬಹುದು. ಹೀಗೆ ಇನ್ನು ಹಲವಾರು ಆಹಾರ ಪದ್ಧತಿಯು ತಲತಲಾಂತರದಿಂದ ಮೂಡಿಬಂದಿದೆ. ಮಲೆನಾಡಿನಲ್ಲಿ ಮಳೆರಾಯ ಎಂದರೆ ಯುದ್ಧದ ಹಾಗೆ.

●

ಬದುಕು ಬಂದಂತೆ ಸ್ವೀಕರಿಸು

✍ **ಸ್ನೇಹಾ ವರ್ಗೀಸ್**, ತೃತೀಯ ಬಿ.ಎ.

ಅದೆಷ್ಟೋ ಬಾರಿ ನಮ್ಮ ಜೀವನದಲ್ಲಿ ಅನೇಕ ರೀತಿಯ ಘಟನೆಗಳು ನಮಗೆ ಊಹಿಸಲು ಸಾಧ್ಯವಾಗದಷ್ಟು ವೇಗದಲ್ಲಿ ಬಂದು ನಮ್ಮನ್ನು ಸೇರುತ್ತವೆ. ಕೆಲವು ಘಟನೆಗಳು ದುರ್ಘಟನೆಯ ಮಾರ್ಗದಲ್ಲಿ ಬಂದರೆ ಇನ್ನೂ ಕೆಲವು ಘಟನೆಗಳು ಸಿಹಿ ಸುದ್ದಿಯ ರೂಪದಲ್ಲಿ ಬರುತ್ತದೆ. ಒಮ್ಮೆ ಸಿಹಿ ಘಟನೆ ನಡೆದರೆ ಅದರ ಹಿಂದೆ ಖಂಡಿತವಾಗಿಯೂ ಕೆಟ್ಟ ಘಟನೆ ಸಿದ್ಧವಿರುತ್ತದೆ. ಕೆಟ್ಟದ್ದು ನಡೆದರೆ ಹಿಂದೆ ಒಳ್ಳೆಯದು ನಡೆಯುತ್ತದೆ. ಅದೆಷ್ಟೋ ಮಂದಿ ಈ ಪ್ರಪಂಚದಲ್ಲಿ ಅಹಿತಕರ ಘಟನೆಯನ್ನು ಹೇಗೆ ನಿಭಾಯಿಸುವುದು ಎಂದು ತಿಳಿಯದೆ ಒದ್ದಾಡುತ್ತಾರೆ.

ಒಟ್ಟಾರೆ ಜೀವನದಲ್ಲಿ ಯಾವುದು ಶಾಶ್ವತವಲ್ಲ. ಬಡವನು ಒಮ್ಮೆಲೇ ಶ್ರೀಮಂತನಾಗಬಹುದು, ಶ್ರೀಮಂತನು ಒಮ್ಮೆಲೇ ಬಡವನಾಗಬಹುದು. ಮೊದಲಿಗನು ಕೊನೆಯದಾಗಬಹುದು, ಕೊನೆಗೆ ಇರುವವನು ಮೊದಲಿಗನಾಗಬಹುದು. ನಾವು ಹೆಚ್ಚು ಇಷ್ಟಪಡುವ ವ್ಯಕ್ತಿಯನ್ನು ನಮ್ಮ ಜೀವನದಿಂದ ಕಳೆದುಕೊಂಡರೆ ಅವರನ್ನು ಬಿಟ್ಟು ಇರುವುದು ಹೇಗೆ ಎಂಬುದು ನಮಗೆ ತಿಳಿಯುವುದಿಲ್ಲ. ನಮ್ಮ ಜೊತೆ ಇದ್ದು ನಮಗೆ ಚೂರಿ ಹಾಕುವವರ ಜಗತ್ತು ಇದು. ನಮ್ಮ ಬದುಕಿನಲ್ಲಿ ಪ್ರತಿಯೊಬ್ಬ ಮಾನವನು ನಮಗೆ ಒಂದೊಂದು ಪಾಠವನ್ನು ಹೇಳಿಕೊಟ್ಟು ಹೋಗುತ್ತಾನೆ.

ಇನ್ನು ಕೆಲವರಿಗೆ ಸೋಲು ಎಂಬುವುದು ಬೆನ್ನ ಹಿಂದೆ ಬಿದ್ದ ಬೇತಾಳದಂತೆ. ಜೀವನವೇ ಬೇಸತ್ತು ಜುಗುಪ್ಸೆ ಬಂದ ಹಾಗೆ ಇರುತ್ತಾರೆ. ಸೋಲು ಎಂಬುವುದು ಎಂದಿಗೂ ಶಿಕ್ಷೆಯಲ್ಲ, ಗೆಲುವು ಎಂಬುದು ಎಂದಿಗೂ ರಕ್ಷೆಯಲ್ಲ. ಹೆಚ್ಚಿನದಾಗಿ ಮರಣದ ಮೂಲಕವೇ ಅಥವಾ ಜಗಳದ ಮೂಲಕ ಅಹಿತಕರ ಘಟನೆಗಳು ಸಂಭವಿಸಿ ಜೀವನದ ಆಸೆ ಆಕಾಂಕ್ಷೆಯನ್ನೆಲ್ಲ ದೂರ ಮಾಡುತ್ತದೆ. ಬದುಕು ನಮಗೆ ಒಂದಲ್ಲ ಎರಡಲ್ಲ ಅನೇಕ ರೀತಿಯ ಪಾಠವನ್ನು ಕಲಿಸುತ್ತದೆ. ಈ ಜಗತ್ತಿನಾದ್ಯಂತ ಅವರವರಿಗೋಸ್ಕರ ಬದುಕುವವರ ಸಂಖ್ಯೆಗಿಂತಲೂ ಬೇರೆಯವರನ್ನು ಮೆಚ್ಚಿಸಲು ಬದುಕುವವರ ಸಂಖ್ಯೆ ಹೆಚ್ಚು. ಹಲವಾರು ಮಂದಿ ನಮ್ಮ ಜೀವನಕ್ಕೆ ಕಾಲಿಟ್ಟು ನಮ್ಮ ಜೀವನವನ್ನು ನಾಶಪಡಿಸಿ ಹೋಗುತ್ತಾರೆ.

ಏನೇ ಕಷ್ಟ ಸಂಕಷ್ಟ ಬಂದರೂ ಕುಗ್ಗದೆ ಬದುಕಿ ತೋರಿಸುವುದು ನಿಜವಾದ ಜೀವನ. ಕಷ್ಟ ಎಂಬುದು ಪ್ರತಿ ಮಾನವನಿಗೂ ಕಟ್ಟಿಟ್ಟ ಬುತ್ತಿ. ಶ್ರೀಮಂತನಿಗೆ ಮಾತ್ರ ಸುಖ ಬಡವನಿಗೆ ಮಾತ್ರ ದುಃಖ ಎಂದು ಭೇದ ಭಾವವಿಲ್ಲ. ಮುಂದಿನಿಂದ ಹೊಗಳಿ ಹಿಂದಿನಿಂದ ತೆಗಳುವ ಕಾಲವಿದು. ಯಾವ ವ್ಯಕ್ತಿ ಒಳ್ಳೆಯದನ್ನು ಬಿಟ್ಟು ಕೆಟ್ಟ ವಿಷಯಕ್ಕೆ ತಲೆ ಕೊಡುತ್ತಾನೋ ಅವನನ್ನು ಹುರಿದುಂಬಿಸುವ ಕಾಲವಿದು. ಅವರು ನನ್ನ ಬಗ್ಗೆ ಹಾಗೆ ಹೇಳುತ್ತಾರೆ, ಇವರು ಹೀಗೆ ಹೇಳುತ್ತಾರೆ ಎಂದು ಎಲ್ಲಾ ಕಾರ್ಯಗಳಿಗೆ ಹಿಂಜರಿಯುವ ಬದಲು, ತಾನು ಏನೆಂದು ತನಗೆ ಗೊತ್ತಿದ್ದರೆ ಸಾಕು, ನಾವು ನಿಜವಾಗಿಯೂ ಯಾರಿಗೂ ಹೆದರುವ ಅವಶ್ಯಕತೆ ಇಲ್ಲ ಅಲ್ಲವೇ?

ಅದೆಷ್ಟೋ ಜನರಿಗೆ ಹೋಲಿಸಿದರೆ ನಮ್ಮ ಬದುಕು ನಿಜಕ್ಕೂ ಒಳ್ಳೆಯ ರೀತಿಯಲ್ಲಿ ಸಾಗುತ್ತಿರುತ್ತದೆ. ಅನೇಕರಿಗೆ ತಮ್ಮ ಜೀವನದಲ್ಲಿ ನಡೆಯುವ ವಿಷಯಗಳು ಕೊನೆಯವರೆಗೂ ಕೇವಲ ಪ್ರಶ್ನಾರ್ಥಕವಾಗಿಯೇ ಉಳಿದುಬಿಡುತ್ತದೆ. ಬದುಕಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಹುಡುಕುವಷ್ಟರಲ್ಲಿ ಆ ಭಗವಂತ ಪ್ರಶ್ನಾರ್ಥಕವಾಗಿಯೇ ಉಳಿದುಬಿಡುತ್ತದೆ. ಬದುಕಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಹುಡುಕುವಷ್ಟರಲ್ಲಿ ಆ ಭಗವಂತ ಪ್ರಶ್ನೆಯ ಪತ್ರಿಕೆಯನ್ನೇ ಬದಲಾಯಿಸಿ ಬಿಡುತ್ತಾನೆ ಎಂಬ ಮಾತು ನಿಜಕ್ಕೂ ಸತ್ಯವಲ್ಲವೇ?

●

ಛಲ ಒಂದಿದ್ದರೆ ಯಶಸ್ಸು ಖಂಡಿತ

✍ **ಕೃಪಾ ಎಸ್. ಟಿ.**, ತೃತೀಯ ಬಿ.ಎ.

ಪ್ರತಿಯೊಬ್ಬರಿಗೂ ಕೂಡ ಜೀವನದಲ್ಲಿ ಯಾವುದಾದರೂ ಒಂದು ರೀತಿಯ ಯಶಸ್ಸು ಪಡೆಯಬೇಕೆಂಬ ಹಂಬಲ ಇರುತ್ತದೆ. ನಾವು ಕೂಡ ಒಂದು ಉತ್ತಮ ಮಟ್ಟಕ್ಕೆ ಹೋಗಬೇಕು ಎಂಬುದು ಎಲ್ಲರ ಕನಸು ಕೂಡ ಆಗಿರುತ್ತದೆ.

ಹಾಗಾದರೆ ಯಾವ ರೀತಿಯ ಪ್ರಯತ್ನ ಪಡಬೇಕಾಗುತ್ತದೆ ಎಂಬುದು ಮುಖ್ಯವಾಗುತ್ತದೆ. ಯಶಸ್ಸು ಎಂಬುವುದು ಹಣ ಕೊಟ್ಟು ಖರೀದಿಸುವಂತದ್ದಲ್ಲ ಅಥವಾ ಯಾರೋ ನೀಡುವಂತದಲ್ಲ. ಯಶಸ್ಸಿನ ಸೂತ್ರವಿರುವುದು ಬರೀ ಸ್ವಪ್ರಯತ್ನ. ಪ್ರಯತ್ನವೇ ಪಡದೇ ಯಶಸ್ಸು ಸಿಗಬೇಕೆಂದರೆ ಅದು ಅಸಾಧ್ಯ. ನಾಳೆ ಬೆಳಗ್ಗೆಯಾಗುವಷ್ಟರಲ್ಲಿ ದೊಡ್ಡ ವ್ಯಕ್ತಿಯಾಗಬೇಕೆಂದರೆ ಯಾರು ಕೂಡ ಆಗುವುದಿಲ್ಲ.

ಒಳ್ಳೆಯ ಕನಸ್ಸನ್ನು ಕಟ್ಟಿಕೊಳ್ಳಬೇಕು. ಧೈರ್ಯದಿಂದ ಮುನ್ನುಗ್ಗಬೇಕು. ಕಷ್ಟಪಡುವ ಗುಣವಿರಬೇಕು. ಕೇಳುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಶಿಸ್ತನ್ನು ಮೈ ರೂಡಿಸಿಕೊಳ್ಳಬೇಕು ಹಾಗೂ ಪ್ರಾಮಾಣಿಕ ಪ್ರಯತ್ನ ಇರಬೇಕು. ಇವುಗಳನ್ನು ಪಾಲಿಸಿದಲ್ಲಿ ಗುರಿಯನ್ನು ತಲುಪಬಹುದು. ಯಾವುದೇ ಕಾರಣಕ್ಕೂ ಯಾರದ್ದೋ ಹಂಗಿನಲ್ಲಿ ಬದುಕುವ ಪರಿಸ್ಥಿತಿ ಬರಬಾರದು.

ಇನ್ನು ಇಂದಿನ ಕೆಲಸವನ್ನು ಇಂದೇ ಮಾಡಿ ಮುಗಿಸಿ ಏಕೆಂದರೆ ಮುಂದೂಡಿದಷ್ಟು ನಮ್ಮ ವಯಸ್ಸು ಮೀರುತ್ತದೆ ಹೊರತು ಯಶಸ್ಸಿನ ಕಡೆ ಹೋಗಲು ಸಾಧ್ಯವಿಲ್ಲ. ವೇಗವಾಗಿ ಓಡುತ್ತಿರುವ ಈ ಯುಗದಲ್ಲಿ ನಮ್ಮಿಂದ ಅಸಾಧ್ಯವಾದದ್ದು ಯಾವುದೂ ಇಲ್ಲ.

ಗುರಿ ತಲುಪುವಾಗ ಸಮಯಪಾಲನೆ ತುಂಬಾ ಮುಖ್ಯವಾಗುತ್ತದೆ. ಸಮಯ ನಮಗೆ ಎಂದಿಗೂ ಕಾಯುವುದಿಲ್ಲ. ನಾವೇ ಸಮಯವನ್ನು ಕಾಯಬೇಕು. ಇನ್ನು ಯಶಸ್ಸನ್ನು ಕಾಣಲು ಸಾಗುವ ಮುನ್ನ ಜೀವನದಲ್ಲಿ ಕಷ್ಟ ಮತ್ತು ಅಪಮಾನವನ್ನು ಅನುಭವಿಸಲೇಬೇಕು. ಕಷ್ಟದಿಂದಲೇ ಸುಖ ಪಡೆಯುವುದು. ಹಾಗೆ ಅವಮಾನವನ್ನು ಮಾಡಿಸಿಕೊಂಡವನೇ ಸನ್ಮಾನವನ್ನು ಮಾಡಿಸಿಕೊಳ್ಳುವನು. ಯಾರಾದರೂ ಅವಮಾನ ಮಾಡಿದಾಗ ನೋವು ಉಂಟಾಗುತ್ತದೆ, ಅದರಿಂದ ಏನಾದರೂ ಸಾಧನೆ ಮಾಡಬೇಕು ಎಂಬ ಕಿಚ್ಚು ಹೊತ್ತಿಕೊಳ್ಳುತ್ತದೆ. ಆದ್ದರಿಂದ ಅವಮಾನ ಮತ್ತು ಕಷ್ಟಕ್ಕೆ ಹೆದರಬೇಡಿ, ಅದರಿಂದ ಜವಾಬ್ದಾರಿ ಹೆಚ್ಚಾಗುತ್ತದೆ. ಹಲವಾರು ಸಾಧಕರು ಸಾಧನೆಯ ಶಿಖರ ಕಡೆ ತಲುಪಿದ್ದು ತಮ್ಮ ತಮ್ಮ ಪ್ರಯತ್ನದಿಂದಲೇ. ಆದ್ದರಿಂದ ಸ್ವಚ್ಛವಾದ ಗುರಿ, ದೃಢವಾದ ಮನಸ್ಸು, ಛಲ ಹಾಗೂ ಪ್ರಾಮಾಣಿಕ ಪ್ರಯತ್ನದಿಂದ ಯಶಸ್ಸಿನತ್ತ ಸಾಗಲು ಸಾಧ್ಯವಾಗುತ್ತದೆ.



ಮಲೆನಾಡು

✍ **ಕೃಪಾ,** ತೃತೀಯ ಬಿ.ಎ.

ಮಲೆನಾಡು ಎಂದರೆ ಎಲ್ಲರೂ ಒಂದು ಇಷ್ಟಪಡುವ ಜಾಗ. ಇಲ್ಲಿನ ಸೌಂದರ್ಯ, ಸುತ್ತಮುತ್ತ ಹಚ್ಚಹಸಿರಿನಿಂದ ಕೂಡಿರುವ ನಿಸರ್ಗ, ಬೆಟ್ಟ-ಗುಡ್ಡ, ಕಾಫಿ, ಅಡಿಕೆ ತೋಟ, ಗದ್ದೆ, ಜುಳುಜುಳು ಹರಿಯುವ ನದಿ, ಧುಮ್ಮಿಕ್ಕುವ ಜಲಪಾತ, ಮರ-ಗಿಡ – ಹೀಗೆ ಈ ಅದ್ಭುತಕ್ಕೆ ಮನಸೋಲದವರೇ ಇಲ್ಲ. ಹೀಗಿರುವಾಗ ಮಳೆಗಾಲ ಇನ್ನು ಎಷ್ಟು ಚಂದ ಇರಬಹುದಲ್ವಾ? ಮಳೆ ಅಂದರೆ ಯಾರಿಗೆ ಇಷ್ಟ ಇರಲ್ಲ ಹೇಳಿ... ಮಳೆಯಲ್ಲಿ ನೆನೆಯುತ್ತ ಇದ್ರೆ, ಹಾಗೆ ಕಳೆದುಹೋಗಿಬಿಡುತ್ತೇವೆ. ಮಲೆನಾಡಿನ ಸೊಬಗಿಗೂ ಮಲೆನಾಡಿನ ಮಳೆಗೂ ಏನೋ ಒಂದು ರೀತಿಯ ಅವಿನಾಭಾವ ಸಂಬಂಧವೇ ಇದೆ ಎನ್ನಬಹುದು.

ಮಳೆಗಾಲ ಬಂತೆಂದರೆ ಮಲ್ನಾಡಲ್ಲಿ ಸುತ್ತಲಿನ ಪರಿಸರ ಹಚ್ಚಹಸುರಿನಿಂದ ಕೂಡಿ ಕಣ್ಣಿಗೆ ಮುದ ನೀಡುತ್ತದೆ. ಇದನ್ನು ನೋಡಲೆಂದೇ ಪ್ರವಾಸಿಗರು ಮಲೆನಾಡಿನ ಕಡೆಗೆ ಪ್ರಯಾಣ ಬೆಳೆಸುವುದುಂಟು. ಮಳೆ ಶುರುವಾಯಿತೆಂದರೆ ಸಾಕು ಎಲ್ಲೋ ಅವಿತಿಟ್ಟ ಕೊಡೆಗಳು, ರೈನ್‌ಕೋಟ್, ಕಂಬಳಿ ಮತ್ತು ಪ್ಲಾಸ್ಟಿಕ್‌ಗಳು ಹೊರಬರುತ್ತದೆ.

ಮಲ್ನಾಡ್ ಜನರಿಗೆ ಅಂತೂ ಮಳೆ ಮುನ್ಸೂಚನೆ ಇರುವಾಗಲೇ ತೋಟ ಗದ್ದೆಯ ಕೆಲಸ ಶುರುಮಾಡುತ್ತಾರೆ. ಅಡಿಕೆ ತೋಟಕ್ಕೆ ಔಷಧಿ ಹೊಡೆಯೋದು ಇರಬಹುದು. ಕಾಫಿ ಚಿಗುರು ತೆಗಿಯೋದು, ಗದ್ದೆ ಉಳುಮೆ ಮಾಡೋದು, ಹೀಗೆ ಹತ್ತಾರು ಕೆಲ್ಸ ಶುರುವಾಗುತ್ತೆ. ಪುರುಸೊತ್ತು ಅನ್ನೋದೇ ಕಮ್ಮಿ. ಎಷ್ಟೇ ಮಳೆ ಬರ್ಲಿ, ಎಷ್ಟೇ ಹೊಳೆ ಬರ್ಲಿ ಕೆಲ್ಸ ಅಂತೂ ಮಾಡದೇ ಇರುವ ದಿನವೇ ಇಲ್ಲ.

ಇನ್ನು ಇಲ್ಲಿಯ ಮಳೆಗಾಲದ ಅತಿಥಿಯಾಗಿರುವ ಜಿಗಣೆ ಇದು ಪೇಟೆಯವರಿಗೆ ಕಚ್ಚಿದರೆ ಆಸ್ಪತ್ರೆಗೆ ಕರ್ಕೊಂಡು ಹೋಗ್ಬೇಕೇನೋ, ಆದ್ರೆ ಮಲ್ನಾಡ್ ಅವ್ರಿಗೆ ಹಾಗೇನಿಲ್ಲ. ಕೆಲವೊಮ್ಮೆ ತೋಟದ ಕೆಲ್ಸ ಮಾಡುವಾಗ ಕಚ್ಚಿ ರಕ್ತ ಹೀರಿ ಬೀಳುವುದು ಗೊತ್ತೇ ಆಗುವುದಿಲ್ಲ. ಹಾಗೆಂದು ಜಿಗಣೆಗೆ ಹೆದರಿ ಕೂರುವಂತೆನಿಲ್ಲ. ಕಾಲಿಗೆ ಕಚ್ಚಿ ರಕ್ತ ಹೀರುವ ಜಿಗಣೆಯನ್ನು ತೆಗೆದು ಹಾಕಿ ತಮ್ಮ ಪಾಡಿಗೆ ತಾವು ಕೆಲಸ ಮಾಡುವುದು ಮಲೆನಾಡಿನವರಿಗೆ ರೂಢಿಯಾಗಿರುತ್ತದೆ. ಜಿಗಣೆ ಹತ್ತಬಾರದೆಂದು ನಿಂಬೆ ಹಣ್ಣಿನ ರಸ, ತಂಬಾಕು ಮತ್ತು ಉಪ್ಪು ಇವುಗಳನ್ನೆಲ್ಲಾ ಹಚ್ಕೊಂಡು ಹೋಗುವುದುಂಟು.

ಮಲ್ನಾಡ ಮಳೆಗಾಲದಲ್ಲಿ ಹೆಚ್ಚು ಬೇಡಿಕೆ ಎಂದರೆ ಅಣಬೆ ಮತ್ತು ಹೊಳೆಯಲ್ಲಿ ಬರುವ ಮೀನು. ಬೆಳಿಗ್ಗೆ ಆದ್ರೆ, ಸಾಕು, ಮನೆಮಂದಿ ಎಲ್ಲಾ ಗದ್ದೆಯಿಂದ ಹಿಡಿದು ಗುಡ್ಡ ಸುತ್ತಿ ಬರುತ್ತಾರೆ. ಏಕೆಂದರೆ ಎಲ್ಲಿ ಅಣಬೆ ಇದೆ, ಎಲ್ಲಿ ಮೀನು ಹತ್ತಿದೆ ಎಂದು ನೋಡಿ ಬರುವುದು ಉಂಟು.

ಇನ್ನು ಮಲ್ನಾಡ ರಸ್ತೆ ಅಂತೂ ನೋಡಲು ಹೇಗಿರುತ್ತೆ ಅಂದ್ರೆ ನಾಟಿ ಮಾಡಲು ತಯಾರಾದ ಕೆಸರಿನ ಗದ್ದೆ ತರಾನೇ ಇರುತ್ತೆ. ರಸ್ತೆನೋ ಗದ್ದೆನೋ ಅನ್ನೋದು ಗೊತ್ತಾಗಲ್ಲ. ಹಾಗಂತ ಗಾಡಿ ಓಡ್ಸದೆ ಇರೋಕೆ ಆಗಲ್ಲ. ಅನಿವಾರ್ಯ ಕೆಸರಿನ ರೋಡಲ್ಲೇ ಹೋಗಬೇಕು. ಹಾಗೆ ಕರೆಂಟ್ ಮತ್ತು ನೆಟ್‌ವರ್ಕ್‌ಗಳ ಕಥೆಯಂತೂ ಕೇಳೋದೇ ಬೇಡ. ಮಳೆಗಾಲದ ಅಪರೂಪದ ಅತಿಥಿಗಳು ಅಂತಾನೇ ಹೇಳ್ಬೇಕು.

ಜೋರಾಗಿ ಸುರಿಯುವ ಮಳೆಯಲ್ಲಿ ಪಾಚಿಕಟ್ಟಿದ ಅಂಗಳದಲ್ಲಿ ಎಷ್ಟೇ ಎಚ್ಚರಿಕೆಯಿಂದ ಹೆಜ್ಜೆ ಇಟ್ಟರೂ ಜಾರಿ ಬೀಳುವ ಪರಿಸ್ಥಿತಿ. ಮಳೆಯಲ್ಲಿ ಎಷ್ಟೇ ನೆನೆದು ಚಳಿಯಿಂದ ಬಂದರೂ ಕೊಟ್ಟಿಗೆಯಲ್ಲಿ ಚಳಿ ಕಾಸುವ ಕ್ಷಣ. ಅಡಿಕೆ ತೋಟಕ್ಕೆ ಕೊಳೆ ಬಂತೇನೋ, ಕಾಫಿಗೆ ಕೊಳೆ ಬಂತೇನೋ ಎಂದು ಅಕ್ಕಪಕ್ಕದ ಮನೆಯವರ ಹತ್ತಿರ ಮಾತನಾಡುವ ಕ್ಷಣ. ವಾರಗಟ್ಟಲೆ ಕರೆಂಟ್ ನೆಟ್‌ವರ್ಕ್ ಇಲ್ಲದೆ ಸೋಲಾರ್ ಲೈಟ್‌ಗಳು ಮಳೆಗೆ ಕೈಕೊಟ್ಟು ಮತ್ತೆ ಅದೇ ದೀಪದ ಬೆಳಕಿನಿಂದ ಕತ್ತಲೆ ಕಳೆಯುವುದು. ಇವೆಲ್ಲಾ ಮಲೆನಾಡಿನ ಜನರಿಗೆ ಕಷ್ಟವಾದರೂ, ಇದೇ ಮಲೆನಾಡಿನ ಸೊಬಗು ಎನ್ನಬಹುದು. ಈ ಲೇಖನ ಓದುವಾಗ ಮಲೆನಾಡಿನ ಮಳೆಯನ್ನು ಅನುಭವಿಸಿದವರಿಗೆ ನಿಜವಾಗ್ಲೂ ನಿಮ್ಮ ಆ ದಿನಗಳು ನೆನಪಾಗುತ್ತದೆ. ●

ಮಾಧ್ಯಮಗಳಲ್ಲಿ ಒಂದಾದ ರೇಡಿಯೋ

✍ **ಕೃಪಾ ಎಸ್. ಟಿ.**, ತೃತೀಯ ಬಿ.ಎ.

ಮಾಧ್ಯಮ ಎಂದಾಗ ಕಣ್ಮುಂದೆ ಬರುವುದು ಕೇವಲ ಟಿವಿ, ದಿನಪತ್ರಿಕೆ, ಅಂತರ್ಜಾಲದ ಮೂಲಕವಾಗಿ ಮೊಬೈಲ್‌ನಲ್ಲಿ ಬರುವ ವಿಚಾರಗಳು ಮಾತ್ರ ಎಂದು ತಿಳಿಯುವ ಮೊದಲು. ಮೊದಲೆಲ್ಲಾ ಬೆಳಿಗ್ಗೆಯಿಂದ ರಾತ್ರಿಯವರೆಗೂ ಕೇವಲ ಧ್ವನಿಯ ಮೂಲಕವಾಗಿ ನಡೆಯುತ್ತಿರುವ ಸಂಗತಿಯನ್ನು ತಿಳಿಯಲು ಸಹಾಯ ಮಾಡುತ್ತಿದ್ದ ಸಾಧನ 'ರೇಡಿಯೋ' ಆಗಿತ್ತು.

ವಿಚಿತ್ರ ಸಂಗತಿ ಎಂದರೆ ಎಷ್ಟೋ ಜನರು ರೇಡಿಯೋವನ್ನು ನೋಡಿಯೇ ಇಲ್ಲ. ಅದು ಹೇಗಿರುತ್ತೆ? ಎಂಬ ಪ್ರಶ್ನೆ ಅವರ ತಲೆಯಲ್ಲಿ ಮೂಡುತ್ತದೆ.

